ಕೊಡವ ಸಂಸ್ಕೃತಿ.

ವಿದ್ವಾನ್
ಐ. ಯಂ. ಮುತ್ತಣ್ಣ.,
(ಕೊಡಗು).

ಆಣೆ.

ಶ್ರೀ

ಕೊಡವ ಸಂಸ್ಕೃತಿ.

ಭಾಗ (೧)

ವಿದ್ವಾನ್ ಐ. ಯಂ. ಮುತ್ತಣ್ಣ,
(ಕೊಡಗು).

1943.

ವಿಜ್ಞಾಪನೆ.

ಇದೊಂದು ಚಿಕ್ಕ ಪುಸ್ತಕವನ್ನು ಕೊಡವ ಮಹಾಶಯರ ಮುಂದಿಡಲು ಬಹು ಸಂತೋಷಗೊಂಡಿರುವೆನು. "ಕೊಡವ ಸಂಸ್ಕೃತಿ" ಎಂಬುದರ ಸಂಪೂರ್ಣ ಸ್ವರೂಪವು ಇದರಲ್ಲಿ ಅಡಗಿರಲಿಕ್ಕಿಲ್ಲವೆಂದರೂ, ನನ್ನ ಮಟ್ಟಿಗೆ ಇದೊಂದು ಅಲ್ಪ ಪ್ರಯತ್ನದ ಪರಿಣಾಮ ಮಾತ್ರವೆಂದು ಬಿನ್ನೈಸಿಕೊಳ್ಳುವೆನು. ಒಂದಾನೊಂದು ಸಂದರ್ಭದಲ್ಲಿ ಮಡಿಕೇರಿ ವೇದಾಂತ ಸಂಘದ ಆಶ್ರಯದಲ್ಲಿ ನಾನು ಈ ವಿಷಯದಲ್ಲಿ ಒಂದು ಭಾಷಣವನ್ನು ಮಾಡಿದನಂತರ ನನಗೆ ಇದರಲ್ಲಿ ಇನ್ನಷ್ಟು ಅಭಿಮಾನ ಹುಟ್ಟಲು ಕಾರಣವಾಯಿತು. ಅಭಿಮಾನದ ಹಿಂದೆ ಪ್ರಯತ್ನದ ಗುರಿಯನ್ನೂ ಇಟ್ಟುಕೊಂಡುದರಿಂದ ಈ ಕಾರ್ಯವನ್ನು ಇಷ್ಟರಲ್ಲಿ ಪೂರ್ತಿಗೊಳಿಸಿದೆನು.

ಇಂದಿನ ಇಂಥಾ ಆರ್ಥಿಕ ದುಃಸ್ಥಿತಿ ಹಾಗೂ ಕಾಗದದ ಅಭಾವದ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ನಾನು ಈ ಕಾರ್ಯಕ್ಕೆ ತೊಡಗಿದ್ದು ನನ್ನ ಒಂದು ವಿಧದ ಮೌಢ್ಯವೆಂದೇ ಹೇಳಬೇಕು. ಕಾಗದಕ್ಕೆ ವಿಪರೀತ ವ್ಯಯ ಮಾಡಬೇಕಾಯಿತಲ್ಲದೆ ಅದರ ಸಂಗ್ರಹ ಕಾರ್ಯಕ್ಕೆ ಇನ್ನಷ್ಟು ಶ್ರಮ ಪಡಬೇಕಾಯಿತು. ಹೇಗೂ ಪ್ರಥಮ ಬಾರಿಗೆ ಉದ್ಭವಿಸುವ ಆದೊಂದು ಹುರುಪೆಂದರೆ ಎಂಥಾ ಬಿಕ್ಕಟ್ಟಿನ ಇಕ್ಕಟ್ಟನ್ನೂ ಕೊರೆದು ಕಾರ್ಯ ಸಾರ್ಥಕಗೊಳಿಸಬಲ್ಲುದಾಗಿದೆಯೆಂದು ಈಗ ನನ್ನ ಅನುಭವಕ್ಕೆ ಬಂತು. ಆ ಕಾರಣದಿಂದ ಸ್ವಭಾವಿಕವಾಗಿ ಉಂಟಾದ ಈ ಗ್ರಂಥದ ಬೆಲೆಯನ್ನು ವಿಪರೀತವೆಂದು ಗಣಿಸದೆ, ಗಣನೀಯ ವಿಷಯವಾದ ನಮ್ಮ ಸಂಸ್ಕೃತಿಯ ಎಣಿಕೆಗೆ ಹೆಚ್ಚಿನ ಲಕ್ಷ್ಯವಿಡಬೇಕೆಂದೇ ನನ್ನ ವಿನಂತಿ.

ಪ್ರಾಜ್ಞ ವಾಚಕರಲ್ಲಿ ಒಂದು ವಿನಂತಿಯನ್ನು ಮಾತ್ರ ಮಾಡಿಕೊಳ್ಳುವೆನು. ಈ ನನ್ನ ಲೇಖನವನ್ನು ಯಾರ ಸಹಾಯವನ್ನಾಗಲೀ, ಅಭಿಪ್ರಾಯವನ್ನಾಗಲೀ ಪಡೆದುಕೊಳ್ಳುವ ಅವಕಾಶವನ್ನು ತೆಗೆದುಕೊಳ್ಳದೆ, ನನ್ನ ಸ್ವಪ್ರಯತ್ನದಿಂದ ನಿರ್ಮಿಸಿದುದಾಗಿದೆ. "ಸಂಸ್ಕೃತಿ" ಎಂಬ ವಿಷಯವನ್ನು ಮುಟ್ಟುವಷ್ಟು ಅಂಶಗಳನ್ನು ಒದಗಿಸಿಕೊಳ್ಳುತ್ತಾ, ಕೊಡವ ಸಂಸ್ಕೃತಿಯೆಂಬುದು ಭಾರತೀಯ ಸಂಸ್ಕೃತಿಯಿಂದ

ದೂರವಾಗಿಲ್ಲವೆಂಬುದನ್ನು ನಿರ್ಧರಿಸುತ್ತಾ ಸಾಗಿದ್ದೇನೆ. ಪ್ರಾರಂಭದಲ್ಲಿ ಸಂಸ್ಕೃತಿ ಯೆಂದರೆ ಏನೆಂಬುವುದನ್ನೂ, ಅಂತ್ಯಭಾಗದಲ್ಲಿ ಈ ಸಂಸ್ಕಾರ ವಿನಾಶಕ್ಕೆ ಆದ ನಾಶ ಹೇತುವನ್ನೂ ಸಾಧಾರಣ ಮಟ್ಟಿಗೆ ಸ್ಪಷ್ಟಗೊಳಿಸಿರುವೆನು. ಪ್ರಾರಂಭದಲ್ಲಿರುವ ಸ್ತೋತ್ರಾರ್ಹವಾದ ಕಂದ ಪದ್ಯವು ಶ್ರೀ ಅಪ್ಪಚ್ಚ ಕವಿಗಳ ಕಾವೇರಿ ಮಹಾತ್ಮೆ ನಾಟಕದಿಂದ ಎಳೆತಂದುದಾಗಿದೆ. ಇವರಲ್ಲಿರುವ ಕೊಡವ ಹಾಡಿನ ಸಂದರ್ಭೋ ಚಿತ ನುಡಿಗಳಲ್ಲಿ ಹಲವನ್ನು "ಪಟ್ಟೋಲೆ ಪಳಮೆ"ಯಿಂದ ಎತ್ತಿಕೊಂಡಿರುವೆನು. ಈ ಎರಡು ಗ್ರಂಥಗಳ ಮಾನ್ಯ ಸಾಧಕರಿಗೆ ನಾನು ಸಾದರ ವಂದಿಸುವುದಲ್ಲದೆ ತಮ್ಮ ಅನೇಕ ಕೆಲಸಗಳ ಮಧ್ಯೆ ಇದನ್ನು ಛಾಪಿಸಿ ಸಕಾಲಕ್ಕೆ ನನ್ನ ಕೈಗೊಪ್ಪಿಸಿದ "ಕೊಡಗು" ಮುದ್ರಣಾಲಯದವರಿಗೆ ನಾನು ಕೃತಜ್ಞನು.

ಮಡಿಕೇರಿ.
ತಾ. 15-3-'43.

ಇತಿ,
ಐ. ಯಂ. ಮುತ್ತಣ್ಣ.

ಕೊಡವ ಸಂಸ್ಕೃತಿ.

ಕಮಲಯೆ ಕಪಿಲೆ ಕಲ್ಯಾಣಿಯೆ
ಕುಮುದಾದೇವಿ ಕೌಬೇರಿ ಶ್ರೀಕಾವೇರಿಯೇ
ವಿಮಲೆಯೇ ವಿಶ್ವೇಶ್ವರಿಯೆ
ಭ್ರಮರಾಂಬಿಕೆಯೆ ಪೊಲತ್ ಈ ಜಗತ್‌ನ ಸುಗತ್.

ಕೊಡವ ಸಾಂಸ್ಕೃತಿಕ ಸ್ವರೂಪವು ಒಂದು ವಿಶಿಷ್ಟ ರೀತಿಯಲ್ಲಿ ನಮಗೆ ಕಂಡು ಬರುವುದು. ಅದು ಬಹು ಗಹನವಾಗಿದೆ. ಏಕೆಂದರೆ ನಾವು ಅದಕ್ಕೆ ತುಂಬಾ ಅಪರಿಚಿತರು. ಅದು ಬಹು ತತ್ವಗರ್ಭಿತವಾಗಿದೆ. ಏಕೆಂದರೆ ನಾವು ತಾತ್ವಿಕ ವಿಚಾರದಲ್ಲಿ ಹಿಂದರುವ ಕಾರಣದಿಂದ. ಅದು ಬಹು ಆಕರ್ಷಣೀಯವಾಗಿದೆ. ಏಕೆಂದರೆ ನೂತನ ವಿಧಾನಗಳ ಕಟ್ಟಳೆಯ ಬಲೆಗೆ ನಾವು ಬಿದ್ದು, ಹಳೇ ಆಚಾರಗಳಲ್ಲಿ ಹುಟ್ಟುವ ಅಭಿಮಾನದ ಸಲುವಾಗಿ. ಆದರೂ ಚಿಕ್ಕ ದೇಶ, ಚಿಕ್ಕ ಜನಾಂಗ, ಕ್ಲಿಷ್ಟ ನಡವಳಿ, ಇವುಗಳಲ್ಲಿ ಅಡಗಿರುವ ಸಂಸ್ಕೃತಿಯನ್ನು ನಾವು ಓರೆಗಣ್ಣಿನಿಂದ ನೋಡಿ ತಿಳಿಯುವಷ್ಟೇ ಇರುವುದು ಎಂಬುದಾಗಿ ಊಹಿಸಲೂಬಹುದು. ಏಕೆಂದರೆ ನಾಗರೀಕತೆಯ ಸಾರವನ್ನು ಕಂಡಿರುವ ನಾವು ಪೂರ್ವಿಕರ ತಿಳುವಿನ ಆಳವನ್ನು ಆಳಿಯಲು ಸಾಧ್ಯವಿಲ್ಲದೆ ಜ್ಞಾನದಲ್ಲಿ ನಿರ್ಗತಿಕರಾದುದರಿಂದ. ಒಟ್ಟಾಗಿ ನಮ್ಮ ಸಂಸ್ಕೃತಿಯಲ್ಲಿ ಏನೂ ಹೆಚ್ಚಿನ ವೈಚಿತ್ರ್ಯ ಇಲ್ಲವೆಂದರೂ ನಮ್ಮ ದೃಷ್ಟಿಯಲ್ಲಿ ಮತ್ತು ನಮ್ಮ ಈಗಿನ ತತ್ವಮುಖೇನ ಅವಲೋಕಿಸಿದರೂ ಪ್ರಾಚೀನ ವೈದಿಕ ಅಥವಾ ಭಾರತೀಯ ಸಂಸ್ಕೃತಿಗಳಲ್ಲಿ ಕಂಡು ಬರುವಂಥಾ ವಿಚಾರ ವಿನಿಮಯಗಳು ನಮ್ಮ ಸಂಸ್ಕೃತಿಯಲ್ಲೂ ಕಂಡುಬರುತ್ತಿವೆಯೆಂಬುದನ್ನು ನಾವು ಪರ್ಯಾಲೋಚಿಸಿಕೊಳ್ಳಬೇಕಾಗಿದೆ.

ಹಾಗಾದರೆ 'ಸಂಸ್ಕೃತಿ' ಎಂದರೆ ಏನೆಂಬುದಾಗಿ ಮುಂಚೆಯೇ ತಿಳಿದುಕೊಳ್ಳ ಬೇಕಾಗಿದೆ. ಈ ಶಬ್ದಕ್ಕೆ ವಿವಿಧಾರ್ಥಗಳಿವೆ. ಆಂಗ್ಲೇಯ ಭಾಷೆಯಲ್ಲಿ ಯಾವುದನ್ನು 'ಕಲ್ಚರ್' ಎಂಬುದಾಗಿ ನಿರೂಪಿಸುವರೋ ಅದನ್ನೇ ಸಂಸ್ಕೃತಿಯೆಂಬುದಾಗುಸು ರಿದರೂ ಅರ್ಥದಲ್ಲಿ ವಿವಿಧ ರೀತಿಗಳಿಂದ ಅದನ್ನು ಗಣಿಸಿಕೊಳ್ಳಬೇಕಾಗಿದೆ. ವೇದ ಗಳ ಕಾಲದ ನಡೆನುಡಿ, ಆಚಾರವಿಚಾರಗಳು ಆಧುನಿಕ ಕಾಲದಲ್ಲೂ ಪ್ರಚಲಿತ ವಾಗಿ ಕಂಡು ಬಂದರೆ ಅದನ್ನೇ ವೈದಿಕ ಸಂಸ್ಕೃತಿಯೆಂದೂ, ಸಾಹಿತ್ಯ ಅಥವಾ ಮತವಿಚಾರಗಳಲ್ಲಿ ಹಿಂದಿನ ಮತ್ತು ಇಂದಿನ ರೀತಿ ಬೆಳಿವಣಿಗೆಗಳ ಕ್ರಮದಂತೆ, ನಮ್ಮ ತುಲನಾತ್ಮಕ ದೃಷ್ಟಿಯಿಂದ ಏಕಪ್ರಕಾರವಾಗಿ ಕಂಡುಬಂದರೆ ಅದನ್ನು ಪ್ರಾಚೀನ ಸಂಸ್ಕೃತಿಯೆಂದೂ ಕರೆಯುವೆವು. ಅಪಂಡಿತ ಕುಲದಲ್ಲಿ ಪರಂ ಪರಾ ಪ್ರಾಪ್ತವಾದ ತಿಳುವು, ಮತ್ತು ಪ್ರಾಚೀನ ಕಾಲದ ಜನಜೀವನವು ಇಂದಿನ ಸುಧಾರಿತ ಪ್ರಪಂಚದಲ್ಲೂ ಕಂಡು ಬಂದರೆ ಅದನ್ನು ಸಂಸ್ಕೃತಿಯೆಂದೆನ್ನುವೆವು. ಕೇವಲ ಅನಾಗರಿಕ ಜನರಲ್ಲಿ ಬೆಳೆದು ಬಂದ ಜ್ಞಾನ, ನಡೆನುಡಿಗಳಲ್ಲಿರುವ ಸುಧಾ ರಿತ ಅಂದೋಲನಗಳನ್ನು ಈಗ ನಾವು ಸಂಸ್ಕೃತಿಯೆಂದು ಕರೆದಲ್ಲಿ ತಪ್ಪಾಗಲಾರದು. ಒಟ್ಟಾಗಿ ವೈದಿಕ ಅಥವಾ ಭಾರತೀಯ ಅಥವಾ ಕರ್ಣಾಟಕ ಸಂಸ್ಕೃತಿಗಳಲ್ಲಿರುವ ವಿಶಿಷ್ಟಾಂಶಗಳು ಜನರಲ್ಲಿ ಪಾರಂಪರ್ಯವಾಗಿ ಬಳಕೆಗೆ ಬಂದು, ಈಗಿನ ನಾಗರೀಕ ಪ್ರಪಂಚದಲ್ಲಿ ಎದ್ದು ಕಾಣುವಂತಿದ್ದರೆ ಅದನ್ನೇ ಸಂಸ್ಕೃತಿಯೆಂದು ವಿಶದಗೊಳಿಸು ತ್ತೇವೆ. ನಮ್ಮ ಕೊಡಗಿನ ಮಟ್ಟಿಗೆ ಇಂಥಾ ಸಂಸ್ಕೃತಿ ಎಂಬುದರ ಯಥಾರ್ಥ್ಯವು ಎಷ್ಟರ ಮಟ್ಟಿಗೆ ಅನ್ವಯಿಸುವುದು ಎಂದು ಪರಿಶೀಲಿಸಬೇಕಾಗಿದೆ.

ನಮ್ಮ ಚಾರಿತ್ರಿಕ ವಾತಾವರಣದಲ್ಲಿ ಧೂಳುತುಂಬಿ ಅಲ್ಲಿಯ ವಿಷಯಗಳು ನಮಗೆ ಸ್ಪಷ್ಟವಾಗಿ ಗೋಚರವಾಗದೆ ಹೊರಳಾಡುತ್ತಿದ್ದೇವೆ. ಕಾರಣ, ನಮ್ಮ ಚರಿತ್ರಾಂಶಗಳನ್ನೆಲ್ಲಾ ವಿದೇಶೀಯರೇ ಬಹು ಶ್ರಮವಹಿಸಿ ಬರೆದಿಟ್ಟಿರುವರು. ಈಗ ಅವರು ಬರೆದ ವಿಷಯಗಳನ್ನೇ ನಾವು ನಂಬದೆ ವಿಧಿಯಿಲ್ಲವಂತಾಗಿದೆ. ಹೇಗಿ ದ್ದರೂ ಪ್ರಾಚೀನ ಭರತಖಂಡದಲ್ಲಿ ನಮ್ಮ ಕುಡುನಾಡು ಸಹ ಒಂದು ಚಿಕ್ಕ ಪ್ರಾಂತ್ಯ ವಾಗಿದ್ದು ಹೆಸರುವಾಸಿ ಹೊಂದಿತ್ತೆಂಮ ನಿಸ್ಸಂದೇಹವಾಗಿ ಹೇಳಬಹುದು. ಸುಮಾರು ಹದಿನಾಲ್ಕನೆಯ ಶತಮಾನದಲ್ಲಿ ಇದ್ದವನೆಂದು ಊಹಿಸಲ್ಪಟ್ಟ ಮಹಾಕವಿ ಕುಮಾರ ವ್ಯಾಸನು ತನ್ನ ಭಾರತದಲ್ಲಿ ಕೊಡಗಿನ ಹೆಸರನ್ನು ಸಹ ಒಂದು ಸಂದರ್ಭದಲ್ಲಿ ತಂದಿ ರುವನು. ಅದಕ್ಕೆ ಹಿಂದೆ ಕೊಡಗಿನ ಹೆಸರು ಅನೇಕ ಶಾಸನಗಳಲ್ಲಿ ಕ್ರಿ. ಪೂ. ಒಂದನೇ ಶತಮಾನದಿಂದ ಈಚೆಗೆ ಪ್ರಸಿದ್ಧಿಸಲ್ಪಟ್ಟಿದೆ. ಆದರೆ ಪ್ರಾಕೃತಿಕ, ರಾಜ

ಕೀಯ ಸ್ವರೂಪಗಳಲ್ಲಿ ಆಗಿನ ಸನ್ನಿವೇಶವು ಈಗಿನದ್ದಕ್ಕಿಂತ ಭಿನ್ನವಾಗಿತ್ತೆಂದು ಮಾತ್ರ ತಿಳಿದುಕೊಳ್ಳಬೇಕಾಗಿದೆ.

ಆಗಿನ ಮತ್ತು ಈಗಿನ ಕಾಲದ ವಿಷಯಗಳನ್ನು ಹೋಲಿಸುವುದು ಈಗ ನಮ್ಮ ಕರ್ತವ್ಯವಲ್ಲ. ಆಗಿನ ಜನರ ರೀತಿ ನೀತಿ, ನಡೆವಳಿಗಳೆಲ್ಲಾ ಈಗಲೂ ಎಷ್ಟರ ಮಟ್ಟಿಗೆ ನಮ್ಮವರಲ್ಲಿ ಕಾಣುತ್ತೇವೆ ಎಂಬವನ್ನೇ ಸ್ಪಷ್ಟಪಡಿಸಬೇಕಾಗಿದೆ. ಹಿಂದಿನ ಆರ್ಯಾವರ್ತದಿಂದ ಕೊಡಗು ಸೀಮೆಯು ಪ್ರತ್ಯೇಕಿಸಲ್ಪಡಲಿಲ್ಲ. ಸಂಪೂರ್ಣ ಆರ್ಯರ ಆಚಾರಗಳನ್ನೇ ಪರಿಪಾಲಿಸುತ್ತಾ ಬಂದಿರುವುದನ್ನು ಈಗಲೂ ನಾವು ನೋಡುತ್ತೇವೆ. ಆದುದರಿಂದಲೇ ವೈದಿಕ ಸಂಸ್ಕೃತಿಯ ಛಾಯೆ, ಭಾರತೀಯ ಸಂಸ್ಕೃತಿಯ ಕುರುಹು, ಕರ್ಣಾಟಕ ಸಂಸ್ಕೃತಿಯ ತಿರುಳು ನಮ್ಮ ಕೊಡವ ಸಂಸ್ಕೃತಿಯಲ್ಲೂ ಪ್ರತಿಬಿಂಬಿಸುತ್ತಿದೆ ಎಂದು ಸಮರ್ಥಿಸುವೆವು.

ಹಾಗಾದರೆ ಇಂಥಾ ಸಂಸ್ಕೃತಿ ವಿಶೇಷವನ್ನು ನಾವು ಎಲ್ಲಿ, ಯಾವ ರೂಪದಲ್ಲಿ ಕಾಣುತ್ತೇವೆ ಎಂಬ ಪ್ರಶ್ನೆಯು ಸಹಜವಾಗಿಯೇ ಬರುವುದು. ಜಂಬೂದ್ವೀಪವ ಲ್ಲಾವರಿತವಾದ ಐವತ್ತಾರು ದೇಶಗಳ ಪೈಕಿ ನಮ್ಮ ಕೊಡಗು ದೇಶವೂ ಒಂದು. ಆಗ ವಿಸ್ತೀರ್ಣದಲ್ಲಿ ನಮ್ಮ ಪ್ರಾಂತ್ಯವು ಈಗಿನ ಕಾಲದ ವಿಸ್ತೀರ್ಣಕ್ಕಿಂತ ಸುಮಾರು ನಾಲ್ಕುಪಾಲು ಹೆಚ್ಚಿತ್ತು. ಈಗ ಎಲ್ಲವೂ ರಾಜಕೀಯ ಕಾರಣಗಳಿಂದ ಒಡೆದು ಛಿದ್ರಛಿದ್ರವಾಗಿದ್ದರೂ ಆಗಿನ ಜೀವನ ವಿಧಾನದ ಕುರುಹುಗಳು ಈಗ ಅಲ್ಲಲ್ಲಿ ಸ್ವಲ್ಪ ಸ್ವಲ್ಪವಾಗಿ ಉಳಿದುಕೊಂಡಿವೆ. ಹಿಂದಿನ ಕಾಲದ ವಿಷಯ ವಿವರಣೆಗಳನ್ನು ತಿಳಿಯಲು ಈಗಿನ ಸ್ಥಿತಿಗತಿಗಳು ಬಾಧಕಕರವೆಂದೆನಿಸಿದರೂ ಗ್ರಾಮ ಗ್ರಾಮಾಂತರ ಗಳಲ್ಲಿ ಈ ವಿಚಾರಗಳನ್ನು ತಿಳಿಯಲು ಸ್ವಲ್ಪ ಮಟ್ಟಿಗಾದರೂ ಸಾಧ್ಯವಾಗದೆ ಇಲ್ಲ. ನ್ಯಾಯವಾದ, ಸಹಜವಾದ ಮತ್ತು ಸ್ವಾಭಾವಿಕವಾದ ಜೀವನ ವಿಚಾರಗಳನ್ನು ತಿಳಿಯಬೇಕಾದರೆ ನಾವು ಪಟ್ಟಣಗಳಿಂದ ಗ್ರಾಮಗಳ ಕಡೆ ಧಾವಿಸಬೇಕು. ಅಲ್ಲಿಯ ಜೀವನದ ವಿವಿಧತೆಗಳನ್ನು ಹಿಂದಣಕಾಲದ ವಾಙ್ಮಯದೊಡನೆ ಹೋಲಿಸಿದ್ದಲ್ಲಿ ಸಂಸ್ಕೃತಿಯ ವಿಶಿಷ್ಟಾಂಶಗಳನ್ನು ಹೆಕ್ಕಿ ತೆಗೆಯಲು ಸಾಧ್ಯವಿದೆ. ನಮ್ಮ ಜೀವನವು ಯಾವಾಗಲೂ ಒಂದೇ ರೀತಿಯಲ್ಲಿ ಇರಲಾರದು. ದಿವಸ ದಿವಸಕ್ಕೂ ಬದಲಾವಣೆ ಗಳಾಗುತ್ತಿರುತ್ತವೆ. ಸುಮಾರು ಇಪ್ಪತ್ತು ವರ್ಷಗಳ ಹಿಂದಿನ ಜೀವನ ಕ್ರಮವು ಇಂದಿಗಿಲ್ಲ. ಮನುಷ್ಯನು ತನ್ನ ಆಯುಷ್ಯದವಧಿಯಲ್ಲಿ ಎಷ್ಟೋ ಬದಲಾವಣೆಗಳನ್ನು ನೋಡುತ್ತಾ, ಹೃತ್ಪೂರ್ವಕವಾಗಿ ಅವನ್ನು ಅನುಭವಿಸಿ ಸಂತೋಷಪಡುವನು. ಎಲ್ಲಾ ವಿಷಯಗಳನ್ನು ತಿಳಿಯಬೇಕಾದರೆ ಮನುಷ್ಯನ ಆಯುಷ್ಯವೇ ಸ್ವಲ್ಪ! ಜೀವನದ

ಗುಟ್ಟುಗುರಿಗಳನ್ನು ವಿಮರ್ಶೆಮಾಡುವಷ್ಟು ಸಮಯವೇ ಅವನಿಗೆ ಇರುವುದಿಲ್ಲ. ತನ್ನ ಐಹಿಕ ಹಾಗೂ ಕ್ಷಣಿಕ ಜೀವನವನ್ನು ಕುರಿತು ತನ್ನಲ್ಲೇ ವಾದವನ್ನು ಹೂಡಿಕೊಳ್ಳುವನು. ಕಡೆಗೆ ವೇದಾಂತವನ್ನು ಆಶ್ರಯಿಸಬೇಕಾಗಿ ಬರುತ್ತದೆ. ಇದಕ್ಕಾಗಿಯೇ ಪ್ರಸಿದ್ಧ ಫಾರ್ಸಿ ಕವಿ ಉಮ್ಮರ್ ಖಯ್ಯಾಮನು ಹೇಳಿದ್ದರ ಕನ್ನಡಾನುವಾದವು ಹೀಗಿದೆ:—

ಈ ಜಗದಿ ನಾನಿಹುದದೇತಕೋ ತಿಳಿಯದಿಹೆ
ನೆಲ್ಲಿಂದ ಬಂದೆನೆಲ್ಲಿಗೆ ಪೋಪೆನೆನುತ,
ಬಗೆದು ಪೇಳ್ವವರಿಲ್ಲ; ಬರಿಯ ಮಾತಿಂದೇನು?
ಮಳೆಯವೋಲಿಳಿದಿಹೆನು; ಹಬೆಯವೋಲ್ ಪರಿವೆಂ.

ಈ ರೀತಿಯಲ್ಲಿ ಹೇಳಿರುವಾಗ ನಮ್ಮ ಸಂಸ್ಕೃತಿಯ ನಿಜಾಂಶವನ್ನು ಎಂದೋ ಯಾರೋ ಪರಿಭಾವಿಸಿ ಹೇಳಿದ ಉಕ್ತಿಪ್ರತ್ಯುಕ್ತಿಗಳಿಂದ ತಿಳಿದುಕೊಳ್ಳಬೇಕಾಗಿದೆ. ಸಂಸ್ಕೃತಿಯ ವಿಷಯವಾಗಿ ವಿವರಿಸುವುದೂ, ವೇದಾಂತದ ವಿಚಾರವಾಗಿ ಪರಿಶೋಧನೆ ಮಾಡುವುದೂ ಒಂದೇ ಎಂಬುದಾಗಿ ನಮಗನ್ನಿಸುವುದು.

ವಿಷಯಗಳನ್ನು ಬಹು ದೀರ್ಘವಾಗಿ ತೆಗೆದುಕೊಂಡು ಹೋಗದೆ ನಮ್ಮ ಕೊಡಗು ಪ್ರಾಂತ್ಯದ ಚರಿತ್ರೆಯನ್ನು ಬಹು ಸೂಕ್ಷ್ಮವಾಗಿ ನಿರೂಪಿಸುವೆವು. ಕ್ರಿ. ಶ. ೯೯ ನೇ ಇಸವಿಯ ಶಾಸನದ ಪ್ರಕಾರ ಕೊಡಗಿನ ಮೇರೆಯು ದಕ್ಷಿಣಕ್ಕೆ ದೇವಾಸಿ ಬೆಟ್ಟಗಳ ವರೆಗೂ, ಪೂರ್ವಕ್ಕೆ ಕೊಯಮುತ್ತೂರು ಜಿಲ್ಲೆಯ ವರೆವಿಗೂ, ಉತ್ತರಕ್ಕೆ ಗೋವಾ ಪ್ರಾಂತ್ಯದ ವರೆಗೂ ಮತ್ತು ಪಶ್ಚಿಮಕ್ಕೆ ಸಾಧಾರಣ ಬಿಸಲೆ ಘಟ್ಟದ ಪ್ರಾಂತ್ಯಗಳ ವರೆಗೂ ಹಬ್ಬಿತ್ತೆಂದು ತಿಳಿದುಬಂದಿದೆ. ಪೂರ್ವದಲ್ಲಿ ಗಂಗ ವಂಶದ ರಾಜರು ಮೈಸೂರು ಪ್ರಾಂತ್ಯದಲ್ಲಿದ್ದ 'ತಲಕಾಡು'ಯೆಂಬುದನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ. ಶ. ಎರಡನೇ ಶತಮಾನದಿಂದ ಹನ್ನೊಂದನೇ ಶತಮಾನದ ವರೆಗೆ ಆಳಿದರೆಂದು ತಿಳಿದುಬಂದಿದೆ. ಅಲ್ಲಿಂದಿತ್ತ ದಕ್ಷಿಣ ಹಿಂದೂಸ್ಥಾನವು ಚೋಳ, ಚೇರ, ಮತ್ತು ಪಾಂಡ್ಯ ರಾಜ್ಯಗಳೆಂದು ಒಡೆಯಿತು. ಚೋಳರಾಜರು ಗಂಗರಿಂದ ಕೊಡಗನ್ನು ವಶಪಡಿಸಿಕೊಂಡರು. ಕ್ರಿ. ಶ. ಹನ್ನೆರಡನೇ ಶತಮಾನದಲ್ಲಿ ಸಾಹಿತ್ಯ, ಮತ ಮತ್ತು ಸಂಸ್ಕೃತಿಯಲ್ಲಿ ಪ್ರಸಿದ್ಧಿಹೊಂದಿದ ಜೈನರು ಚೆಂಗಾಳ್ವ ರಾಜವಂಶಕ್ಕೆ ಸೇರಿದವರಾಗಿ ವಿಶೇಷ ವೈಭವದಿಂದ ಬಾಳಿದರು. ಹದಿಮೂರನೇ ಶತಮಾನದಿಂದಿತ್ತ ಹೊಯ್ಸಳರು ತಮ್ಮ ಆಳ್ವಿಕೆಗೆ ಪ್ರಾರಂಭಿಸಿದರು. ಕ್ರಿ. ಶ.

೧೧೭೪ ನೇ ಇಸವಿಯ ಶಾಸನದ ಪ್ರಕಾರ ಹೊಯ್ಸಳರು ಎರಡನೇ ವೀರಬಲ್ಲಾಳನ ಅಧೀನದಲ್ಲಿ, ಕೊಡಗು ಪ್ರಾಂತ್ಯವು ವಿಜಯನಗರ ರಾಜ್ಯಕ್ಕೆ ಸೇರಿದ್ದಾಗ, ಹತ್ತುಗಟ್ಟ ನಾಡಿನ ಪಾಲ್ಪರೆ ಕೋಟೆಯನ್ನು ಮುತ್ತಲು ಬಂದಿದ್ದರೆಂದು ಹೇಳಿದೆ. ಆಗ ಕೊಡಗು ದೇಶವು ಎಂಟು ನಾಯಕರಿಂದ ಆಳಲ್ಪಡುತ್ತಿತ್ತು. ಅವರನ್ನು ನಾಡ್‌ಬಾಚೆಕಾರ, ಅರೆಬಾಚೆಕಾರ ಎಂಬುದಾಗಿ ಕರೆಯುತ್ತಿದ್ದರು. ಕ್ರಿ. ಶ. ೧೬೩೩. ನೇ ಇಸವಿಗೆ ಹಿಂದಿನ ಚರಿತ್ರಾಂಶಗಳನ್ನೆಲ್ಲಾ ಸುಟ್ಟುಹಾಕಿರುವರೆಂದು ಪ್ರತೀತಿಯಿರುವುದರಿಂದ ಆ ಕಾಲದ ವಿಷಯಗಳು ಅಷ್ಟು ವಿಶದವಾಗಿ ನಮಗೆ ತಿಳಿದುಬಂದಿಲ್ಲ. ಹದಿನಾರನೇ ಶತಮಾನದಿಂದಿತ್ತ ಕೊಡಗನ್ನು ಇಕ್ಕೇರಿ ರಾಜ್ಯದ ರಾಜವಂಶದವರು ಆಳಲು ತೊಡಗಿ ೧೮೩೪ ರ ವರೆಗೆ ಅವರು ಕೊಡಗನ್ನು ನಿರಂಕುಶ ಪ್ರಭುತ್ವದಿಂದ ಆಳಿದರು. ಅಲ್ಲಿಂದಿತ್ತ ಆಂಗ್ಲೇಯ ಸರಕಾರವು ಕೊಡಗನ್ನು ವಶಪಡಿಸಿಕೊಂಡು ಆಳಲುಪಕ್ರಮಿಸಿತು. ಈ ಮೇಲಿನ ವರದಿಯಿಂದ ಕೊಡಗನ್ನು ಗಂಗರು, ಚೆಂಗಾಳ್ವರು, ಹೊಯ್ಸಳರು, ವಿಜಯನಗರದ ರಾಜರು, ಇಕ್ಕೇರಿ ರಾಜವಂಶದವರು ಮತ್ತು ಹಾಲೇರಿ ರಾಜರು ಆಂಗ್ಲೇಯರಿಗೆ ಹಿಂದೆ ಆಳಿದರೆಂದು ತಿಳಿದೆವು.

ಈ ವಿವಿಧ ರಾಜ್ಯಾಡಳಿತೆಯ ಕಾಲದಲ್ಲಿ ಕೊಡಗಿನ ಸಾಂಸ್ಕೃತಿಕ ಸ್ವರೂಪವು ಹೇಗೆ ಇದ್ದಿತು ಎಂಬುದನ್ನು ವಿವೇಚಿಸಬೇಕಾಗಿದೆ. 'ರಾಮರಾಜ್ಯವಾದರೇನು, ರಾಗಿಬೀಸುವುದು ತಪ್ಪೀತೇ?' ಎಂದ ಹಾಗೆ ಜನರ ಅಂತರ್ಗತಸ್ಥಿತಿಗಳು ಯಾರ ಕಾಲದಲ್ಲೂ ಒಂದೇ ರೀತಿಯಾಗಿ ಹರಿಯುತ್ತಿರುವವು. ಪ್ರತ್ಯೇಕ ಕೊಡವ ರಾಜವಂಶವೆಂಬುದು ಇತ್ತೋ ಎಂದು ನಿರ್ಧಾರವಾಗಿ ಹೇಳಲಾಗುವುದಿಲ್ಲ. ಕೊಡವರಿಗೆ ಉನ್ನತಾಧಿಕಾರವೂ, ಉತ್ಕೃಷ್ಟ ಪೌರುಷವೂ ಇದ್ದಿತೆಂದು ತಿಳಿಯುವುದೇ ವಿನಹ, ರಾಜ್ಯಾಧಿಕಾರವು ಮಾತ್ರ ಪೂರ್ವದ ಜೈನರು, ಚೋಳರು, ಕದಂಬರು, ಹಾಗೂ ಇತ್ತೀಚೆಗೆ ವೀರಶೈವರ ಅಧೀನದಲ್ಲಿದ್ದಂತೆ ಕಂಡುಬರುವುದು. ದಕ್ಷಿಣ ಹಿಂದೂಸ್ಥಾನದ ಹಲವು ಚಿಕ್ಕ ರಾಷ್ಟ್ರಗಳು ನಾಯಕರಿಂದ ಆಳಲ್ಪಡುತ್ತಿದ್ದಾಗ್ಯೆ ಕೊಡಗೂ ಸಹ ಆ ವರ್ಗಕ್ಕೆ ಸೇರಿ ಕೊಡವರೇ ತಮ್ಮ ರಾಷ್ಟ್ರದ ವೀರನಾಯಕರೂ, ಬಾಚೆಕಾರರೂ, ತಕ್ಕರೂ ಇತ್ಯಾದಿ ಅಧಿಕಾರಿಗಳಾಗಿ ಇದ್ದರೆಂಬುದನ್ನು ನಿಸ್ಸಂಶಯದಿಂದ ದೃಢೀಕರಿಸುವೆವು.

ಮೇಲಿನ ಚಾರಿತ್ರಿಕ ದೃಷ್ಟಿಯಿಂದ ವ್ಯಾಪಕವಾದ ನಮ್ಮ ಪ್ರಾಂತ್ಯಕ್ಕೆ ಸಂಬಂಧಿಸಿದ ಸಂಸ್ಕೃತಿಯನ್ನು 'ಕೊಡವ ಸಂಸ್ಕೃತಿ' ಎಂಬುದಾಗಿ ಕರೆದರೂ ಸಂಪೂರ್ಣವಾಗಿ ಕೊಡಗರಿಗೇ ಸಂಬಂಧಿಸುವುದೆಂದು ಹೇಳಲು ಸಾಧ್ಯವಿಲ್ಲ. ಪೂರ್ವಜರಲ್ಲಿ

ಭಿನ್ನಮತದವರಾದರೂ, ಅವರಲ್ಲಿದ್ದ ಐಕ್ಯಮತ್ಯ, ಅವರು ಅನುಸರಿಸುತ್ತಾ ಇದ್ದ ಪದ್ಧತಿ, ಅವರಲ್ಲಿ ಮೊಳೆತಿದ್ದ ತ್ಯಾಗಜೀವನ, ಹಾಗೂ ದೈವಿಕ ವಾದ, ಆಚಾರಾನುಸರಣೆ, ದೇಶಭಕ್ತಿ, ಸಂಪತ್ಸಮೃದ್ಧಿ ಇವು ಮೊದಲಾದುವುಗಳಲ್ಲಿ ಅಖಿಲ ಹಿಂದೂಸ್ಥಾನದ ಕೀರ್ತಿಗೆ ನಮ್ಮ ಪುಟ್ಟ ಕೊಡಗು ಪ್ರಾಂತ್ಯವೂ ಭಾಗಿಯಾಗಿತ್ತು. ಈಗಿನ ಅತೃಪ್ತಿ, ಅಕ್ರಮ, ಅಕೃತ್ಯ, ಅನರ್ಥಗಳ ಪರದೆಗಳನ್ನು ಒಂದರನಂತರ ಒಂದಾಗಿ ತೆರೆದು ಬಹು ಹಿಂದಿನ ದೃಶ್ಯಕ್ಕೆ ನಮ್ಮ ದೃಷ್ಟಿಯನ್ನು ಬೀರಿದರೆ, ಅಲ್ಲಿ ಕಾಣುವ ಸಂತೃಪ್ತಿ ಜೀವನ, ತ್ಯಾಗಲೋಲುಪತೆ, ಪರಸ್ಪರ ಅನುರಾಗ, ವಿವೇಕ ವಿವೇಚನೆಗಳ ಸಮನ್ವಯವು ಬಯಲಾಗುವುದು. ಸಂಸ್ಕೃತರಾದವರ ತಿಳುವು ಅಥವಾ ಜ್ಞಾನವು ಕೇವಲ ಅಸಂಸ್ಕೃತರಾದವರಲ್ಲೂ ಕಂಡುಬಂದರೆ ಅದನ್ನೇ ಏಕೆ ನಾವು ನಮ್ಮ ಘನ ಸಂಸ್ಕೃತಿಯೆಂದು ಕರೆದುಕೊಳ್ಳಬಾರದು? ಪೂರ್ವದಿಂದಲೇ ಕೊಡವ ಪದ್ಧತಿಯಲ್ಲಿ ಜೈನ ಮತ್ತು ಹಿಂದೂ ಮತದ ಮಿಶ್ರಣವು ಇದ್ದಂತೆ ಕಂಡುಬರುತ್ತದೆ. ಇವು ಆಯಾ ಕಾಲದ ಸನ್ನಿವೇಶಕ್ಕೆ ಅನುಗುಣವಾಗಿ ಮಾರ್ಪಡುತ್ತಾ ಹೋಗುತ್ತವೆಂಬುದನ್ನು ನಾವು ತಿಳಿಯಬಹುದು. ಒಟ್ಟಾಗಿ ಹೇಳುವುದಿದ್ದರೆ ನಮ್ಮ ದಿನದಿನದ ಬಾಳಿನಲ್ಲೂ ಕಾಣುವ ಜನರ ಸಂಸ್ಕೃತಿಯು ಜನರ ಪುರೋಭಿವೃದ್ಧಿಗೆ ಅಡ್ಡಿಯಾಗಿ ಅಥವಾ ಸಹಾಯಕವಾಗಿ ಬರುತ್ತದೆ.

ಹಿಂದಿನ ಕಾಲ ಬಹು ವೈಭವದ ಕಾಲವೆಂದು ಹಿಂದೂಸ್ಥಾನವನ್ನು ಅದರ ಸಂಪತ್ಸಮೃದ್ಧಿಯು ಅಗ್ರಸ್ಥಾನದಲ್ಲಿ ಇರಿಸಿದರೂ ಕೊಡಗು ಆ ವಿಷಯದಲ್ಲಿ ಹಿಂದೆ ಬಿದ್ದಿತ್ತೇ ಎಂದು ನಾವು ಶಂಕಿಸಬೇಕಾದ ಅವಶ್ಯಕತೆಯಿಲ್ಲ. ಅದನ್ನೇ ಇನ್ನು ನಾವು ದೃಷ್ಟಾಂತ ಸಹಿತ ವಿಶದಗೊಳಿಸುವೆವು. ಹಿಂದಿನ ಕಾಲದಲ್ಲಿ ತಮ್ಮ ಸಂತೃಪ್ತಿಯನ್ನು ಹಾಡಿಕೊಂಡ ಒಂದು ಕೊಡವ ಹೇಳಿಕೆಯ ಪೌರುಷವನ್ನು ನೋಡಿ:—

ಎಲ್ಲಾಡ ಮನೆಯಿಲ್,	ಈವೊಕ್ಕ ಮನೆಯಿಲ್,
ನೆಲ್ಲಳಂದ್ ಬೆಪ್ಪಕ;	ಪೊನ್ನಳಂದ್ ಬೆಚ್ಚತೋ!

ಎಂದರೆ ಎಂಥಾ ನಿರ್ಗತಿಕನಾದರೂ ತಮ್ಮವರು ಹೀಗಿದ್ದರೆಂದರೆ, ಒಂದು ಕ್ಷಣಕ್ಕಾದರೂ ಅವನಿಗೆ ಸಂತೋಷದಿಂದ ಹೊಟ್ಟೆ ತುಂಬುವಂತಾಗಬಹುದು! ಅಥವಾ ಇದರಲ್ಲಿ ಹೇಳಿದ್ದು ಹಿಂದಿನ ಕಾಲಮಹಿಮೆಗೆ ಅನುಗುಣವಾಗಿ ಅತಿಶಯೋಕ್ತಿಯೆಂದು ಅನ್ನಿಸುತ್ತದೆಯೇ? ಇಂಥಾ ಹೇಳಿಕೆಗಳನ್ನು ಈಗ ಏನೂ ತಿಳಿಯದ ನಾವು, ನೋಡಿಕೊಳ್ಳುವಾಗ ಕೇವಲ ೬೦ ಮೈಲು ಉದ್ದ ೪೦ ಮೈಲು ಅಗಲದ ಈಗಿನ ಕೊಡಗನ್ನು

ಚಿತ್ರಿಸಿಕೊಳ್ಳಬಾರದು! ಹಿಂದಿನ ವಿಸ್ತಾರವಾದ ಸಾಮ್ರಾಜ್ಯದ ತಕ್ಕ ರೂಪಿತ ಜನಾಂಗವೆಂದು ನಾವು ಭಾವಿಸಿಕೊಳ್ಳಬೇಕಾಗಿದೆ. ತನ್ನಲ್ಲಿದ್ದ ಐಶ್ವರ್ಯವನ್ನು ಉಪಭೋಗಿಸಲು ಸಾಕಷ್ಟು ಜನರಿಲ್ಲವೆಂಬ ನೆವದಿಂದ ಓರ್ವ ಯುವಕನು ತನ್ನ ತಾಯಿಗೆ ತಾನು ಮದುವೆ ಮಾಡಿಕೊಳ್ಳುವೆನೆಂದು ಹೇಳುವುದರ ಸಾಮ್ಯವಾದವನ್ನು ನೋಡಿ:—

ಕೇಳ್ ಕೇಳ್ ಪೆತ್ತವ್ವ,
ಪೊಂದೇಡಿ ನಡಪಿನೋ;
ಕುಟ್ಟುವತ್ ಚಿಂಗಾರ,
ಇಟ್ಟಣವಕಾಳಿಲ್ಲೆ.
ಪೊಟ್ಟಿಲುಳ್ಳ ಪಟ್ಟೋಳಿ,
ಬೀಜುಡ್‌ಪಕಾಳಿಲ್ಲ;
ಪೊಂಬತ್ತಾಯ ನೆಲ್‌ನ
ಉಂಡೊಯಿಪಕಾಳಿಲ್ಲ;
ತನ್ನಪೋಲೆ ಬಾಲಂಗ,
ಪೊಂಗಟ್ಟ ನಲಿವಕ್ಕ;
ನಾನಿನ್ನನೆ ಇಪ್ಪದಾ—?

ತನ್ನ ಬೊಕ್ಕಸದಲ್ಲಿರುವ ಆಭರಣಗಳನ್ನು ಉಪಭೋಗಿಸಲಿಕ್ಕೂ, ಪೆಟ್ಟಿಗೆಯಲ್ಲಿರ ತಕ್ಕಂಥಾ ಜರತಾರಿ ಸೀರೆಗಳನ್ನುಟ್ಟು ಅನುಭವಿಸಲಿಕ್ಕೂ, ಉಗ್ರಾಣದಲ್ಲಿ ತುಂಬಿದ ಭತ್ತವನ್ನು ಉಂಡು ಮುಗಿಸಲಿಕ್ಕೂ ಸಾಕಷ್ಟು ಜನರಿಲ್ಲವಾದ್ದರಿಂದ ನಾನು ಮದುವೆ ಮಾಡಿಕೊಳ್ಳುವೆನೆಂಬುದಾಗಿ ತಾಯಿಯೊಡನೆ ಹೇಳುವನು. ಇದರಿಂದ ಆಗಿನ ಕಾಲದ ಸಂಪತ್ಸಮೃದ್ಧಿಯ ಆಧಿಕ್ಯವು ತೋರಿಬರುವುದಲ್ಲದೆ, ವೈಭವದ ಸಂಸ್ಕೃತಿಯು ಕೂಡಿಬಿಟ್ಟಂತೆ ತೋರುವುದು.

ಇಂಥಾ ಸಂಸ್ಕೃತಿಯ ವಿನಾಶ ಯಾ ಪತನಕ್ಕೆ ಯಾರು ಹೇಗೆ ಕಾರಣರಾದರು ಎಂಬುದರ ಪ್ರಸ್ತಾಪವು ಸದ್ಯಕ್ಕೆ ಬೇಡ. ಹಿಂದಿನ ಕಾಲದವರ ಜೀವನ ಕ್ರಮವು ವೇದ ಕಾಲದವರ ಜೀವನ ವಿಧಾನವನ್ನೇ ಹೋಲುವುದು. ಕೊಡವರ ಹಿಂದಿನ ಕಾಲದವರ ಮನೆ, ಬಾಗಿಲು, ಕಿಟಕಿ, ಕಟ್ಟೋಣ ಕ್ರಮಗಳೆಲ್ಲವೂ ವೈದಿಕ ಕಾಲದ ಹಾಗೂ ಶಿಲ್ಪಶಾಸ್ತ್ರಗಳಲ್ಲಿ ವಿವರಿಸಿದಂತೆ ಕಾಣುವುದು. ಹಿಂದಿನ ಕಾಲದ ಮನೆ, ಬಾಡೆ, ಓಣಿ, ಕೈಯಾಲೆ, ಕಂಬ ಮುಂತಾದುವುಗಳಲ್ಲಿ ಹಲವು ತರದ ವೈಶಿಷ್ಟ್ಯಗಳನ್ನು ಕಾಣದೆ ಇಲ್ಲ. ನವೀನ ಶುಷ್ಕ ಆಚಾರಗಳನ್ನು ಬಿಟ್ಟರೆ, ಕೊಡವ ಸಂಸ್ಕೃತಿಯ ವಿಶಿಷ್ಟತೆಯು ಚೆನ್ನಾಗಿ ತೋರುವುದು. ಪೇಟೆ ಕೋಟೆಗಳನ್ನು ಬಿಟ್ಟು ಗ್ರಾಮ ಗಳಿಗೆ ನಾವು ಹೋದರೆ ಸಿಕ್ಕುವ ಆತಿಥ್ಯ, ಸಂಪೂರ್ಣ ವೇದ ಕಾಲದಲ್ಲಿ ಪ್ರಚಾರ ದಲ್ಲಿದ್ದ ಕ್ರಮದಲ್ಲೇ ಆಗಿದೆ. ಒಂದು ಚೆಂಬು ನೀರು ಕಾಲು ತೊಳೆಯುವುದಕ್ಕೆ ಆಯುವುದೂ, ಕೂರಲಿಕ್ಕೆ ಹಸೆ, ಕುಡಿಯಲಿಕ್ಕೆ ನೀರು, ಸಾಧಾರಣದವರಾದರೆ

ತಾಂಬೂಲವೀಯುವ ಕ್ರಮಗಳೆಲ್ಲವೂ ಹಿಂದಿನವುಗಳು. ಈ ವೈದಿಕ ಸಂಸ್ಕೃತಿಯು ನಮ್ಮಲ್ಲಿಯೇ ಅಲ್ಲ; ಇತರ ಜನಾಂಗದವರಲ್ಲೂ ಇದೆ. ಅಡಿಗೆ ಮನೆಯಲ್ಲಿರುವ ಒಂದು ಮುಕ್ಕಾಲಿ ಮಣೆಯಿಂದ ಹಿಡಿದು ಹಿಂದಿನ ರಾಜಕೀಯ ವಿಷಯದ ವರೆಗೂ ವೇದಕಾಲದ ಸಂಸ್ಕಾರ ಛಾಯೆಯು ನಮ್ಮಲ್ಲಿ ಕಾಣುವುದು. ನಿತ್ಯ ನೈಮಿತ್ತಿಕ ವ್ರತ, ಸ್ನಾನ ಸಂಧ್ಯೆಗಳ ಅಭಾವವು ಈಗ ಆಗುತ್ತಾ ಇದ್ದರೂ ಕೊಡವರಲ್ಲಿ ಸಂಪೂರ್ಣ ಆರ್ಯರ ನಿಯಮಗಳಿದ್ದುವೆಂದು ಶಾಸ್ತ್ರಾದಿಗಳ ಆಧಾರದಿಂದ ನಾವು ಹೇಳಬಲ್ಲವರಾಗಿರುವೆವು.

ಕೊಡವರ ಹಬ್ಬಗಳ ವಿಷಯವಾಗಿ ಹೇಳಿದರೆ ಇಲ್ಲಿ ಹೇಳುವ ವಿಷಯಗಳು ಕೇವಲ ಪುನರುಕ್ತಿಗಳೆಂದು ಉಪೇಕ್ಷಿಸಲಾರರೆಂದು ನಂಬುತ್ತೇವೆ. ಅಸಂಸ್ಕೃತರಲ್ಲಿ ದೈವಿಕ ಭಾವನೆ ಮೊಳೆಯಲು ಹಿಂದುಗಳು ಸಾಧಿಸಿದಷ್ಟು ಬೇರೆ ಯಾರೂ ಪ್ರಯತ್ನಿಸಿರಲಿಕ್ಕಿಲ್ಲ. ವಿಗ್ರಹಾರಾಧನೆಯು ಮೂಢರಲ್ಲಿ ಎಂತಹ ಪರಿಣಾಮ ತಂದೊಡ್ಡುವುದೆಂಬುದು ಎಲ್ಲರಿಗೂ ವಿದಿತವಾಗಿದೆ. ಅಂಥಾ ಸಾಂಸ್ಕೃತಿಕ ಸ್ವರೂಪವೂ ಕೊಡಗರಲ್ಲಿ ಯಾವ ರೀತಿಯಲ್ಲಿ ಕಳೆ ಇಟ್ಟಿತ್ತು ಎಂಬುದು ಇದರಿಂದ ಗೊತ್ತಾಗದೇ?

ನಾಡ್‌ಕೋರ್ ಮಾದೇವ, ಕೇರಿಕೋರ್ ಐಯ್ಯಪ್ಪ,
ಊರ್‌ಕೋರ್ ಪೊವ್ವದಿ; ಓಣಿಕೋರ್ ನಾಥನ್.

ಇಂಥಾ ಆರಾಧ್ಯ ದೇವತೆಗಳನ್ನು ಸ್ತುತಿಸುವುದರಿಂದ ಭಕ್ತಿ, ಜ್ಞಾನ, ಪ್ರೀತಿಗಳು ಪರಸ್ಪರ ಬೇರೂರುವವು. ನಾಡು, ಊರು, ಕೇರಿ ಅನಂತರ ಮನೆಗೊಂದು ದೇವತೆಯನ್ನಿಟ್ಟು ಅವುಗಳಲ್ಲಿಟ್ಟಂಥಾ ಅಚಲವಾದ ಶ್ರದ್ಧೆ, ಶಾಶ್ವತವಾದ ಭಕ್ತಿ ವರ್ಣಿಸಲು ಅಸಾಧ್ಯವಾಗಿದೆ. ಪ್ರಾಚೀನ ಕಾಲದಲ್ಲಿ ದ್ರಾವಿಡರು ದೇವತೆಗಳೆಂದೆಣಿಸಿದ್ದೆಲ್ಲಾ ಬ್ರಾಹ್ಮಣ ಹಿಂದೂ ಕುಲವಲ್ಲಿ ಸೇರಿತು. ದ್ರಾವಿಡರು ಎಲ್ಲಾ ವಿಷಯಗಳಲ್ಲಿ ಆರ್ಯರನ್ನೇ ಅನುಸರಿಸಿದರು. ಈ ಆರ್ಯರಾದರೋ ತಮ್ಮ ಶ್ರೇಷ್ಠತೆಯನ್ನು ಕಾಪಾಡಿಕೊಳ್ಳಲು ಇತರರೊಂದಿಗೆ ಬೆರೆಯದೆ ಜಾಗರೂಕರಾಗಿದ್ದರು. ಆದರೂ ಇದು ಫಲಕಾರಿಯಾಗದೆ ಎಲ್ಲೆಡೆಯೂ ಆರ್ಯಾನುಕರಣದಿಂದಲೇ ರಂಜಿಸಿತು. ಕಾಲವಾದರೋ ಬಹು ಹಿಂದೆ. ದ್ರಾವಿಡರ ಆರ್ಯೀಕರಣದ ಪ್ರಕರಣವನ್ನು ತಿಳಿಸುಕೊಂಡಲ್ಲಿ ಈ ಸಂಬಂಧವಾದ ವಿಷಯಗಳು ನಮ್ಮಲ್ಲಿ ಮನವಟ್ಟಾಗುವವು. ವಿಸ್ತಾರವಾಗಿ ಬರೆಯುವ ಅವಕಾಶವನ್ನು ಇಲ್ಲಿ ತೆಗೆದುಕೊಳ್ಳದೆ ಆಗಿನ ಕಾಲದ ರೀತಿನೀತಿಗಳು ಈಗ ನಾವು ದಿನಂಪ್ರತಿ ಕಾಣುವ ನಮ್ಮ ದಿನಚರ್ಯೆಯೊಳಗೆ ಎಷ್ಟು ಅಡಗಿವೆಯೆಂಬುದನ್ನು ಮುಖ್ಯವಾಗಿ ಇಲ್ಲಿ ಸೂಚಿಸುವೆವು.

ಕೊಡಗರು ಮಂದಗಳಲ್ಲಿ ಹೋಗಿ ಕುಣಿಯುವುದೂ, ತಮೂಷೆ ಮಾಡುವುದೂ ವೈದಿಕ ಕಾಲದ 'ಮಧುಪರ್ಕ'ದ ಆಚರಣೆಯನ್ನು ಜ್ಞಾಪಕಕ್ಕೆ ತರುವುದು. 'ಪೊಲಿ ಪೊಲಿ ದೇವ!' ಎಂದು 'ಪುದಯುಕ್ತಿ'ಯನ್ನು ದೇವತಾಭಾವದಿಂದ ಸಂಭೋದಿಸಿ ಹಾಡುವುದು ಮತ್ತಷ್ಟು ಉತ್ಸಾಹಕರ! ಕ್ಷತ್ರಿಯೋಚಿತವಾದ ಈ ಆಚರಣೆಯು ನಿಜವಾಗಿಯೂ ತತ್ವಗರ್ಭಿತವಾಗಿದೆ ಮತ್ತು ಮನೋರಂಜಕವಾಗಿದೆ. 'ಊರ್‌ಕೋಲ್, ನಾಡ್‌ಕೋಲ್' ಎಂಬುದಾಗಿ ಊರಿನ, ನಾಡಿನ ಜನರೆಲ್ಲರೂ ಪರಸ್ಪರ ಮಿಲನವಾಗಿ ಆಚರಿಸುವವರ ಹಿಂದೆ ಒಗ್ಗಟ್ಟಿನ ಎಂಥಾ ಅಗಾಧ ತತ್ವವು ಹೊಳೆಯುತ್ತದೆ! ಮನಸ್ತಾಪ ವೈಷಮ್ಯಗಳ ವಿಷಮತೆಯನ್ನು ಒಂದುಗೂಡಿಸಲು ಎಂಥಾ ಒಂದು ತತ್ವವನ್ನು ಪ್ರತಿಪಾದಿಸಿಟ್ಟಿರುವರು!!

ಹುತ್ರಿ ಹಬ್ಬದ ಸಮಯದಲ್ಲಿ ಕದಿರು ತೆಗೆಯುವಾಗ ಗುಂಡು ಹಾರಿಸುವರಷ್ಟೆ! ಅದರ ನಿರೂಪಣೆ ಹೀಗಿದೆ:—

ಆಡಿ ಪಾಡಿ ಪೋಯಿತ್, ಕೇಕ್‌ಕ್ ನೊಗವಾಯಿ,
ಏಳ್ ಮೂಲೆ ಆಕಡ; ದೇವರ ನೆನತಿತ್;
ಕ್‌ಕ್ಕೇರಿಲ್ ನಿಂದಿತ್; ತಿತ್ತ್ ಬೊಡಿ ಬೆಚ್ಚತ್.

ಕೊಡವರ ಹಾಡಿನಲ್ಲಿ ಇಂದೂ ಅನುಸರಿಸುತ್ತಿರುವ ಹಿಂದಿನ ಕೆಲವು ಆಚಾರಗಳನ್ನು ಪ್ರತಿಪಾದಿಸಿದ್ದರಲ್ಲಿ ಒಂದೆರಡನ್ನು ಆಧಾರಕ್ಕಾಗಿ ಕೊಡುವೆನು. ಗಂಡು ಮಗು ಹುಟ್ಟಿದರೆ ಆ ಸಂತೋಷ ಸಂಭವದಲ್ಲಿ ಗುಂಡು ಹಾರಿಸುವುದಲ್ಲದೆ ಕ್ಷತ್ರಿಯರ ಧನುರ್ವಿದ್ಯಾಭ್ಯಾಸ ಮಹತ್ವವು ನಮ್ಮಲ್ಲೂ ಇದೆಯೆನ್ನಲು ಅಂಬುಬಿಲ್ಲು ಶಾಸ್ತ್ರಕಾಲದಲ್ಲಿ;

ನೆಯಿತೋಕ್ ಕೈಕೊಂಡ್, ಬೀರಿಯತ್ ಕುಞ್ಞರ,
ತಿತ್ತ್‌ಬೊಡಿ ಬೆಚ್ಚತ್; ಕೇದಾವರೆ ಕೈಯ್ಯಿಕ್;
ಈನಂಗುಂಡ್ ಪೋರಾಂದ್, ಅಂಬ್‌ಬಿಲ್ಲ್‌ಡ್‌ಟ್ಟತ್.

ಎಂಬ ಮಾತು ಗಮನೀಯವಾಗಿದೆ. ತೊಟ್ಟಿಲು ಮಗುವಾಗಿದ್ದಾಗಲೇ ಬಿಲ್ಲನ್ನು ಕೈಗೆ ಹಿಡಿಸುವಂಥಾ ವೀರ ಕ್ಷತ್ರಿಯರ ಆಚಾರವು ಇಂದಿಗೂ ಕೊಡವರಲ್ಲಿ ಬಳಕೆಯಲ್ಲಿರುವುದು ನೋಡಿದರೆ ಅದೆಂಥಾ ವೈಚಿತ್ರ್ಯ! ವೀರನಾದ ಅಣ್ಣನು ಸಮರ ಭೂಮಿಯಲ್ಲಿ ಹತನಾದನು ಎಂದ ಮಾತ್ರಕ್ಕೆ ತನ್ಮಂದಿಯರು ತಲೆ ಚಚ್ಚಿಕೊಂಡರೆ ಅದು ಕ್ಷತ್ರಿಯ ಧರ್ಮವೆ? ಆ ವಾರ್ತೆಯನ್ನು ಕೇಳಿದ ಮಾತ್ರಕ್ಕೆ, 'ಅಣ್ಣ ಚತ್ತದ್

ನಂದಾಚಿ; ಅಂಬ್ ಬಿಲ್ಲ್ ನಾಕಾಚಿ;' ಎಂಬ ಮಾತುಗಳು ಹಿಂದಿನ ವೀರ ಸಂಸ್ಕೃತಿಯನ್ನು ಹೊರಗೆಡಹವೇ ? ನೂತನವಾಗಿ ನಮ್ಮನ್ನಾವರಿಸಿರುವ 'ಪರಾನಕರಣ' ವೆಂಬ ಅಸಂಸ್ಕೃತಿಯ ಪರದೆಯನ್ನು ಮೇಲೆತ್ತಿದರೆ ನಮಗೆ ಗೋಚರಿಸುವುದು ಶುದ್ಧ ಸಂಸ್ಕೃತಿ. ಹಿಂದಿನ ನಮ್ಮ ಹಿರಿಯರ ಹುಟ್ಟು, ಬಾಳು, ಬದುಕು, ಆರ್ಯ ತೇಜಸ್ಸು, ಸಾಹಸ ಇವೆಲ್ಲವೂ ಎಷ್ಟರ ಮಟ್ಟಿಗೆ ನೆಲೆಗೊಂಡಿವೆಯೆಂಬುದು ವ್ಯಕ್ತವಾಗುವವು. ಪೂರ್ವಿಕರು 'ನರಿ ಮಂಗಲ' ಮಾಡುತ್ತಿದ್ದುದರ ಮತ್ತು ಈಗಲೂ ಇರುವ ಆ ಪದ್ಧತಿಯ ನಿಷ್ಕೃಷ್ಟಾರ್ಥವನ್ನು ಪರಿಗಣಿಸಿ ನೋಡಿದರೆ ಅದು ಸಹ ಕ್ಷತ್ರಿಯೋಚಿತವಾದ ಪದ್ಧತಿಗಳಲ್ಲೊಂದು ಎಂಬುದಾಗಿ ಅನುಸರಿಸಿ ನಡೆದಂತೆ ಕಾಣುವುದು.

ಶ್ರುತಿ ಶಾಸ್ತ್ರಾದಿಗಳನ್ನು ಆದರಿಸುವುದು, ಕೊಡವ ಹಾಡುಗಳಲ್ಲಿ ವಿವರಿಸಿದಂತೆ ರಾಜ್ಯಾಂಗ ವ್ಯವಸ್ಥೆ, ದೇವಾಲಯಗಳಲ್ಲಿ ನಡೆಸುವ ಪೂಜಾಕ್ರಮಗಳು, ಇವೆಲ್ಲಾ ಪ್ರಾಚೀನ ಕಾಲದಿಂದ ಇಂದಿನವನ್ನುಹೋಲಿಸಿದರೆ ಏನೂ ವ್ಯತ್ಯಾಸಗಳನ್ನು ಗಮನಿಸಲಾರೆವು. 'ಪ್ರೇಯಸ್ಸಿಗಿಂತ ಶ್ರೇಯಸ್ಸು ಹೆಚ್ಚು' ಎಂಬ ಪುರಾಣ ಕ್ಷತ್ರಿಯರ ಭಾವನೆಯು ಹಿಂದಿನ ಕೊಡವರಲ್ಲಿ ಸಂಪೂರ್ಣ ಇತ್ತು ಮತ್ತು ಈಗ ಇಲ್ಲವೆಂದು ಹೇಳಲಾರೆವು. ನಮ್ಮ ಕೊಡವ ಹಾಡುಗಳನ್ನು ಸಂಪೂರ್ಣ ನಮ್ಮಲ್ಲಿ ತಿಳಿದವರಿಲ್ಲದಿದ್ದರೂ ನಾವು ನೋಡುವ ಹಾಡುಗಳ ಸ್ವರೂಪವೂ, ಪ್ರಾರಂಭಿಸಿ ಅಂತ್ಯಗೊಳಿಸುವ ವಿಧಾನವೂ ಹಿಂದಿನ ವೈದಿಕ ಮಂತ್ರಗಳ ಆದ್ಯಂತಗಳಂತೆಯೇ ಇವೆ. ಅದ್ಭುತ ಭಾವ, ಗಂಭೀರವಾಕ್ಯ, ನಿಯಮಿತ ರಾಗ, ವೀರಕಂಠ, ಸರಳ ಶೈಲಿಗಳಿಂದ ಪ್ರತಿ ಶುಭ ಕಾರ್ಯ ಸಂದರ್ಭದಲ್ಲಿ ಈಗಲೂ ಹಾಡುವ ಈ ಪದಗಳ ವೈಶಿಷ್ಟ್ಯವನ್ನು ಇಲ್ಲಿ ವಿಸ್ತರಿಸಲಸಾಧ್ಯವಾಗಿದೆ. ಕೊಡಗರಲ್ಲಿ ಮೊನ್ನೆ ಮೊನ್ನೆ ವರೆವಿಗೂ ಆಚಾರದಲ್ಲಿದ್ದ ಅಂಬುಬಿಲ್ಲು ಶಾಸ್ತ್ರ, ಕರ್ಣವೇದ ಶಾಸ್ತ್ರ, ಷೋಡಶೋಪಚಾರ ಪೂಜೆ ಎಲ್ಲವೂ ಹಿಂದಿನವುಗಳೇ. ಶುಭ ಕಾರ್ಯ ಸಂದರ್ಭಗಳಲ್ಲಿ 'ನೆಲ್ಲಕ್ಕಿ ನಡುಬಾಡೆ'ಯ ದೀಪದ ಎದುರು ನಿಂತು ನಮ್ಮ ಹಿರಿಯರು ಸ್ತುತಿಸುವ ನುಡಿಗಳು ಸಂಪೂರ್ಣ ಋಷಿಯೋಕ್ತವಾದ ಮಂತ್ರಗಳೇ. ಉದಾಹರಣೆಗೆ ಆರ್ಯ ಧರ್ಮದ ಅಚನ ಮಂತ್ರದಲ್ಲಿ:-

ಓಂ ಶನ್ನೋಭಿರವಿಷ್ಟಯೇ ಆಪೋಭವಂತು ಪೀತಯೇ ।
ಶಂ ಯೋರಭಿಶ್ರವಂತುನಃ ॥

ಈ ರೀತಿ ಹೇಳುವದನ್ನು ಕೊಡಗರೂ ಸಹ, ತಮ್ಮ ಸದ್ವಾಂಛಿತಗಳೆಲ್ಲ ಫಲಿಸುವಂತೆ ನಿನ್ನ ದಯಾಮೃತ ವರ್ಷವನ್ನು ನಮ್ಮ ಮೇಲೆ ಕರೆಯಿಸು ಎಂದು ಬೇಡುವಂತೆ:—

"ಪರಮೇಶ್ವರಾ! ಗುರುಕಾರಣೋವಾ—ಯಂಗ ಇಲ್ಲಿ (ನೆಲ್ಲಕ್ಕಿ ನಡುಬಾಡೆ) ನಲ್ಲೋರ್ ಶುಭ ಕಾರ್ಯಕ್ಕೋಸ್ಕರ ಬಂದಿತ್ ಸೇರಿಯುತ್. ಈ ಕಾರ್ಯತ್ ಎಂಗ ಅಳಪಲ್ಲಿಯೂ, ನಿಪ್ಪಲ್ಲಿಯೂ, ಎನ್ನೋರ್ ತಪ್ಪ್ ನೆಪ್ಪ್ ಉಂಡ್‌ಂದಾಚೇಗಿ ತಪ್ಪ್‌ನ ಒಪ್ಪ್ ಮಾಡಿತ್ ಎಂಗಳೆಲ್ಲಾ ಕಾಪಾಡ್."

ಇವರಲ್ಲಿ ವೈದಿಕ ಮತ್ತು ಕೊಡವ ಸಂಸ್ಕೃತಿಗಳಿಗಿರುವ ಸಾಮಿಪ್ಯವು ವ್ಯಕ್ತವಾಗುವುದು.

ಹಿಂದುಗಳಲ್ಲಿ ದಾನಕ್ಕಿರುವ ಪ್ರಾಧಾನ್ಯತೆ ಇನ್ನಾವ ಮತದವರಲ್ಲೂ ಇಲ್ಲವೆನ್ನಬಹುದು. ಅನ್ನದಾನ, ಧನದಾನ, ವಸ್ತ್ರದಾನ, ಕನ್ಯಾದಾನ ಎಂದು ಒಂದಕ್ಕಿಂತ ಒಂದು ಅಧಿಯಾಗಿ ಹೋಗುತ್ತವೆ. ಕೊಡವರಲ್ಲೂ ಸಹ ಮದುವೆ ಮುಂಜಿ ಸಂದರ್ಭಗಳಲ್ಲೂ, ಹಬ್ಬ ಹುಣ್ಣಿಮೆ ಸಂದರ್ಭಗಳಲ್ಲೂ ಮಾಡುವ ದಾನದ ಮಹತ್ವವು ವಿಶೇಷವಿದೆ. ಈಗಲೂ ಸಹ ನಮ್ಮನ್ನಾವರಿಸಿರುವ ದಾರಿದ್ರ್ಯವೊಂದನ್ನು ಬಿಟ್ಟರೆ ಧಾರಾಳಿತನವು ಈ ರೀತಿ ಹಾಡಲ್ಪಟ್ಟಿದೆ:—

ತನ್ನಡೋರ್ ಊರೋಂಗೂ, ಪಾಪಿ ಪರದೇಶಿಕೂ,
ಇಲ್ಲವಂಗೂ ಬೆಂದುಕೂ, ಜಾತಿ ನುಪ್ಪತ್ತಂಜಾಗೂ,
ಪಟ್ಟಿಮುಕೂ ಪಾರ್ವಕು, ಅನ್ನದಾನ ಕೆಯ್ಯುವ;

ನಮ್ಮ ದೇಶದ ಧರ್ಮದ ಪರಮಾವಧಿಯು ಎಲ್ಲಿಯ ವರೆಗೆ ಮುಟ್ಟಿತ್ತು ಎಂಬುದನ್ನು ಶ್ರೀ ಅಪ್ಪನೆರವಂಡ ಅಪ್ಪಚ್ಚ ಕವಿಗಳು ತಮ್ಮ ಶ್ರೀ ಕಾವೇರಿ ಮಹಾತ್ಮೆ ನಾಟಕದ ಅಂತ್ಯಭಾಗದಲ್ಲಿ ಒಂದು ಚೆಲೋ ಕಥೆಯನ್ನು ಬರೆದಿರುವರು. ಬ್ರಹ್ಮ, ವಿಷ್ಣು, ಮಹೇಶ್ವರರು ತ್ರಿಗುಣಿಯೆಂಬ ಬ್ರಾಹ್ಮಣನ ಧರ್ಮವನ್ನು ಪರೀಕ್ಷಿಸಲಿಕ್ಕೋಸ್ಕರ ಭಿಕ್ಷುಕರಾಗಿ ಬರುವರು. ತ್ರಿಗುಣಿಯು ಕೇವಲ ಬಡವನು. ರಾತ್ರಿ ಕಾಲ. ಅವನ ಮನೆಯಲ್ಲಿ ಏನೂ ಇರಲಿಲ್ಲ. ಜತೆಗೆ ಜಡಿ ಮಳೆಯ ಸಮಯ. ತ್ರಿಗುಣಿಯು ಬಹು ಬೇಸರದಿಂದ ಇವರಿಗೆ ಕೊಡಲು ಏನೂ ಇಲ್ಲದಿರುವಾಗ ತನ್ನ ಹೆಂಡತಿಯನ್ನು ಕೇಳುವನು. ಅವಳು, "ಆ ದಿವಸವೇ ನಮ್ಮ ಏಕಲಿಗೆ ಬೀಜ ಹಾಕಿರುವುದರಿಂದ ಮೊಳಕೆ ಬಂದಿರಲಿಕ್ಕಿಲ್ಲ. ಅದನ್ನೇ ಮೇಲೆ ಕೈಯಿಂದ ಹೆಕ್ಕಿ, ತಂದು, ತೊಳೆದು ಬೇಯಿಸಿ, ಗಂಜಿ ಮಾಡಿ ಕೊಡಬಹುದು" ಎಂದು ಸೂಚಿಸಲು ತ್ರಿಗುಣಿಯು ಪಕ್ಕನೆ ಆ ನಡು ರಾತ್ರಿ ಸಮಯದಲ್ಲಿ ಗದ್ದೆಗೆ ಓಡುವನು. ಈ ತನ್ಮಯತೆಯನ್ನೂ ಮತ್ತು ತ್ಯಾಗಮಯ ಹೃದಯವನ್ನೂ ಹರಿ ಹರ ರುದ್ರರು ಕಂಡು ಬೇಗನೆ ಅವನನ್ನು ಹರಸುವರು:—

ಒಡೆಯು ಪೊಣ್ಣ್‌ಡ ಧರ್ಮ ಗುಣತ್‌ನ
ನೋಟಿ ಹರಿಯೂ ಬ್ರಹ್ಮನೂ!
ಒಡಕ್ ಎಂಗಡ ಕೂಳ್‌ಕಾಯಿತ್
ಎಡ್‌ಪ ಯೊಕತ್ ಬಿತ್ತ್‌ನ!!

ಎಂದು ಅವರೇ ಸಂತೋಷದಿಂದ ಹಾಡಿಕೊಳ್ಳುವರು. ನಮ್ಮ ಈ ಚಿಕ್ಕ ಜನಾಂಗದಲ್ಲೂ ಇಂಥಾ ಕಥೆಗಳು ಲೆಕ್ಕವಿಲ್ಲದಷ್ಟು ಪ್ರಚಾರದಲ್ಲಿವೆ.

ಇದೇ ತಾತ್ವಿಕ ವಿಚಾರಗಳನ್ನು ಇನ್ನೂ ಸ್ವಲ್ಪ ದೀರ್ಘವಾಗಿ ಪರಿಶೀಲಿಸುತ್ತಾ ಹೋದರೆ ಇನ್ನಷ್ಟು ಆಶ್ಚರ್ಯವಾಗದೆ ಇಲ್ಲ. ಒಬ್ಬನು ಸಾಯಬೇಕಾದರೆ ಶನಿದೇವನ ಇಷ್ಟದಂತೆ ಎಂದೂ, ಆ ಶನಿಯು ಊರಿನ ಎಲ್ಲೋ ಒಂದು ಸ್ಥಳದಲ್ಲಿ ಇದ್ದು ಎಲ್ಲಾ ವಸ್ತುಗಳಲ್ಲೂ ತನ್ನ ಪ್ರಭಾವವನ್ನು ತೋರಿಸಿದಂತೆ ಒಬ್ಬನ ಪ್ರಾಣದ ಮೇಲೂ ತೋರಿಸುತ್ತಾನೆಂದೂ ಕೊಡವ ಹಾಡಿನಲ್ಲಿ ಉಕ್ತವಾಗಿದೆ. ಕೊಡಗರ ಹಾಡುಗಳಲ್ಲಿ 'ಚಾವು ಪಾಟ್'ನ್ನು ನಿರೂಪಿಸಿದಷ್ಟು ಕ್ರಮವಾಗಿ, ಚೆಲೋದಾಗಿ ಮತ್ತು ತತ್ವಗರ್ಭಿತವಾಗಿ ಬೇರೆ ಯಾವುದನ್ನೂ ಹಾಡಲಿಲ್ಲವೆಂದು ನಿಶ್ಚಯವಾಗಿ ಹೇಳಬಹುದು. ಉದಾಹರಣೆಗೆ:—

ನಾರಾಯಣ ದೇವಂಡೋ ಅಜ್ಜಯ್ಯ,
ನೋಟುವಳ ಕನ್ನಡಿ ,,
ಕೈತಪ್ಪಿ ನೆಲತಾಂದ್ ,,
ಬುದ್ದೊಡಂದ್ ಪೋನೋಲೆ ,,
ನಿಂಗೊಡಂದ್ ಪೋಯಿರೋ ,,

ಇವನ್ನು ಎಂಥಾ ಅಲಂಕಾರೋಕ್ತಿಯಿಂದಲೂ, ಸುಂದರವಾದ ಉಪಮಾನವೊಂದನ್ನು ಸೇರಿಸಿ ಚೆಲೋದಾಗಿಯೂ ಹೇಳಿರುವರು! ಗ್ರಹಚಾರವು ಕೆಟ್ಟು ಮನುಷ್ಯನ ಆಯುಷ್ಯವಂತ್ಯವನ್ನು ಸುಂದರವಾದ ದೃಷ್ಟಾಂತಗಳಿಂದ ಮನಮುಟ್ಟುವಂತೆ ಬಣ್ಣಿಸುತ್ತಾ ಹಾಡಿದ್ದಾರೆ. ಚೆನ್ನಾಗಿಯೂ, ಶೋಭಾಯಮಾನವಾಗಿಯೂ ಇದ್ದ ಈ ಕಾಯವು ಪಕ್ಕನೆ ಹಸಿದಾದ ಹಾಗೂ ಎಳೆದಾದ ಗರಿಕೆ ಹುಲ್ಲನ್ನು ಕಿತ್ತು ಹಾಕಿದಲ್ಲಿ ಹೇಗೆ ಬಾಡಿ ಒಣಗಿ ಬೀಳುವುದೋ ಹಾಗೆಯೇ ಬಿದ್ದು ಹೋಗುವದೆಂದು ಉಲ್ಲೇಖಿಸಿದ್ದಾರೆ. ಈ ಹಾಡನ್ನು ಹಾಡುತ್ತಾ ಹೋದಂತೆ, ಸತ್ತವನ ಜೀವನ ಚರಿತ್ರೆ ಶ್ಲಾಘನೆ ಮೊದಲಾದುವುಗಳನ್ನು ಹೇಳಿ ಕಡೆಗೆ ಹೇಳುವುದಾದರೂ ಏನು?

ಧರ್ಮರಾಯ ಮಾಧೊರೆ ಅಜ್ಜಯ್ಯ,
ಕೈಲಾಸಕ್ ಪೋನೋಲೆ ,,
ಕಾಯತೋಡೆ ಪೋಯೋಳೋ ,,

"ಧರ್ಮರಾಯ ಮಹಾರಾಜನು ತನ್ನ ಶರೀರ ಸಹಿತ ಕೈಲಾಸಕ್ಕೆಡರಿದಂತೆ ನೀನೂ ಹೋಗು," ಎಂಬುದೇ ಈ ವಚನದ ಭಾವಾರ್ಥವಾಗಿದೆ. ಇಂಥಾ ಹಾಡುಗಳನ್ನು ಕಟ್ಟಬೇಕಾದರೆ ಆಗಿನವರ ನೈಪುಣ್ಯದ ಪ್ರಭಾವವನ್ನು ಆಲೋಚಿಸಿಕೊಳ್ಳಬೇಕಾಗಿದೆ. ಎಷ್ಟರ ಮಟ್ಟಿಗೆ ತಮ್ಮ ಸಿದ್ಧಜ್ಞಾನ ಉದಧಿಯಿಂದ ಉಕ್ಕಿದ, ನಿಶ್ಚಲ ತಪಸ್ಸಿನಿಂದ ಹೊರಬಂದ ಅಮೃತ ತತ್ವವು ಯಾವ ವೇದಾಂತವನ್ನು ಹಿಂದರಿಸಲಿಕ್ಕಿಲ್ಲ? ಯಾವುದೋ ಒಂದು ಕಾಲದಲ್ಲಿ ಯಾವನೋ ಒಬ್ಬ ಋಷಿಯು ಲೇಖಿಸಿದ ಮೀಮಾಂಸಾ ಶಾಸ್ತ್ರದ ಸಿದ್ಧಾವತಾರವೋ ಎಂಬ ಹಾಗೆ ನಮ್ಮ ಪೂರ್ವಿಕರು ಇಂಥಾ ಸರಳವಾದ ಮಾತುಗಳಿಂದ, ಘನವಾದ ತತ್ವವನ್ನು, ಗಂಭೀರವಾದ ಶೈಲಿಯಲ್ಲಿ ಹಾಡಿದ ವಾಕ್ಚಾತುರ್ಯವನ್ನು ಬಣ್ಣಿಸುವವರು ನಮ್ಮಲ್ಲಿ ಯಾರಿರುವರು? ಸತ್ತ ಮೇಲೆ ಮನುಷ್ಯನು ಏನಾಗುವನೋ ಯಾರಿಗೆ ಗೊತ್ತು? ಪ್ರತಿಯೊಬ್ಬನೂ ಪುನರ್ಜನ್ಮವನ್ನು ಪ್ರಾಣವು ಇಹದಿಂದ ಬಿಟ್ಟ ಕ್ಷಣದಲ್ಲೇ ಹೊಂದುವನು ಎಂದು ಮೀಮಾಂಸಾ ಶಾಸ್ತ್ರವು ಪ್ರಸಿದ್ಧಿಗೊಳಿಸಿದೆ. ಮನುಷ್ಯನಿಗೆ ಮುಕ್ತಿ ಬೇಕೆಂದಾದರೆ ಪುನರ್ಜನ್ಮವನ್ನು ಸರ್ವಥಾ ಹೊಂದಬಾರದು; ಎಂದರೆ ಯಾರಿಗೆ ಪುನಜನ್ಮವಿಲ್ಲವೋ ಅಂಥವನಿಗೆ ಮೋಕ್ಷವು ಸಿದ್ಧವೆಂದು ವೇದಾಂತಿಗಳ ಮತವಾಗಿದೆ. ಸಾವಿನ ಮೀಮಾಂಸೆಯನ್ನು ಪ್ಲೇಟೋನಾಗಲೀ, ಪೈಥೋಗೋರಸ್ಸನಾಗಲೀ, ಜೈಮಿನಿ ಪತಂಜಲೀ ಋಷಿಗಳಾಗಲೀ, ಶಂಕರಾಚಾರ್ಯ ಮಧ್ವಾಚಾರ್ಯರಾಗಲೀ ಯಾವ ರೀತಿ ನಿರೂಪಿಸಿರುವರೋ ಯಾರಿಗೆ ಗೊತ್ತು! ಆದರೆ ಬರೇ ಅನುಭವವೆಂಬ ಸಂಸ್ಕಾರ ಬಲದಿಂದ ಬೆಳೆದು ಬಂದ ಮೆದುಳಿನಿಂದ ಸ್ಫೂರ್ತಿದಾಯಕವಾದ ವಾಗ್ಝರಿಯಲ್ಲಿ ಕೊಡಸ ಪಿತಾಮಹನಿಂದ ಏನನ್ನಿಸಿದೆ! ಸತ್ತ ಮೇಲಿನ ಆಗು ಹೋಗುಗಳನ್ನು ಪ್ರಸ್ತಾಪಿಸಲು ಎಂಥಾ ತಾತ್ವಿಕ ಜ್ಞಾನದ ತಳಹದಿ ಬೇಕು? ಎಂಥಾ ಸಂಸ್ಕಾರ ಬಲ ಬೇಕು! ಹಿಂದೂ ಸಂಸ್ಕೃತಿಯು ತನ್ನ ಜ್ಞಾನಪ್ರಭಾವವನ್ನು ಪಸರಿಸಿದ್ದರ ಸಾರ್ಥಕ್ಯವಾದರೂ ಎಂತು ಕಂಡು ಬರುವುದು! ಹನ್ನೆರಡನೇ ದಿನ ರಾತ್ರಿ ಸತ್ತವನನ್ನು ಸ್ವರ್ಗಕ್ಕೇರಿಸುವುದೆಂದು ಹಾಡುತ್ತಾ ಇಡೀ ರಾತ್ರಿ ಬೊಬ್ಬೆಹಾಕುವುದರ ತಾತ್ಪರ್ಯವೇನು?

ಚೋತಿರೋ ಅಜ್ಜಯ್ಯ,
ಚೋತನಕ್ಕೆ ಚೋತ್ಲೆ,
ಚತ್ತಲ್ಲಿ ಪರೆಯುತಿ,
ಚತ್ತಲ್ಲಿ ಪರಪೇಂಗಿ,
ಮಣ್ಣಾಯಿ ಪರೆಯುತಿ,

ಪುನರ್ಜನ್ಮವನ್ನು ತಾವು ಹೊಂದಿದರೂ ಮಣ್ಣಿನ ಜನ್ಮವನ್ನು ಹೊಂದಬೇಡಿರೆಂದು ಕೇಳಿಕೊಳ್ಳುವನು. ಏಕೆಂದರೆ ಎಲ್ಲರೂ ಅದರ ಮೇಲೆ ತುಳಿಯುವರು. ಹಾಗಾದರೆ ಕಲ್ಲಾಗಿ ಹುಟ್ಟುವುದೋ ಎಂದರೆ, ಎಲ್ಲರೂ ಅದನ್ನು ಗುಂಡು ಕಲ್ಲಾಗಿ ಉಪಯೋಗಿಸಿ ನೋವು ಮಾಡುವರು. ಹಾಗಾದರೆ ಹಸುವಾಗಿಯೋ, ಎತ್ತು ಆಡು ಯಾ ಕುರಿಗಳಾಗಿ ಹುಟ್ಟುವುದೋ ಎಂದರೆ ಎಲ್ಲಾ ವಿಧದಲ್ಲೂ ಇಹಲೋಕದಲ್ಲಿ ಒಂದಕ್ಕಿಂತ ಒಂದು ಕಷ್ಟಕರವಾಗಿಯೇ ಪರಿಣಮಿಸುತ್ತದೆ. ಯಾವ ಜನ್ಮವನ್ನು ಹೊಂದಿದರೂ ಶಂಕರಾಚಾರ್ಯರು ಹೇಳಿದಂತೆ, "ಪುನರಪಿ ಜನನಂ, ಪುನರಪಿ ಮರಣಂ" ಆದ್ದರಿಂದ ಪರಮಾತ್ಮನ ಅನುಗ್ರಹವಿದ್ದರೆ, 'ಕೃಪಾಯಪಾರೇ ಪಾಹಿ ಮುರಾರೇ' ಎಂದು ಆತನನ್ನು ನಂಬಿ ಪುನರ್ಜನ್ಮವನ್ನು ನಿವಾರಿಸಿಕೊಳ್ಳಲು ನೋಡುವುದು. ಈ ರೀತಿಯಾಗಿ ಸತ್ತವನಿಗೆ ಯಾವ ಜನ್ಮದಲ್ಲಿ ಹುಟ್ಟಿದರೂ ಕಷ್ಟ ತಪ್ಪದು. ಆ ಕಾರಣದಿಂದ ಪ್ರಾಣಿಯಾಗಿ ಜನ್ಮವನ್ನು ತಾಳಿದರೂ,

"ಜೋಜಿ ಮೇಲ್ ನೋವುಲ,
ಅನಂಗುಂಡ್ ನಿಂಗಳೋ,
ನಾರಾಯಣ ದೇವುಡೊ,
ಮುಂಡೆಕ್ಟ್ಟ ಪೂಪೋಲೆ;
ಬಾಡತೆ ಒಣಂಗತೇ
ವೈಕುಂಠ ನಗರತ್ತ್;
ತಣ್ಣನೆ ಪೂಲೆರಿರೋ !!

ಎಂದೀ ರೀತಿಯಾಗಿ ಸತ್ತವನನ್ನು ಕೈಲಾಸಕ್ಕೇರಿಸಲು ಸಾಹಸಪಡುವರು. ಅವನ ಹಿಂದೆ ನಿಂತ ಪಾಪ ಪುಣ್ಯಗಳಿಗೆ ಇತರರು ಹೊಣೆಯಲ್ಲ! ಹಾಗಿದ್ದರೂ ಇನ್ನೊಬ್ಬರ ಶುಭವನ್ನು ಹಾರೈಸುವುದೇ ವೇದೋಕ್ತವಾದ ಧರ್ಮವೆಂಬುದನ್ನು ಮನಸ್ಸಿನಲ್ಲಿಟ್ಟು ಈ ರೀತಿಯಾಗಿ ಹರಸುವರು.

ಸಂಸ್ಕೃತಿಯೆಂದರೆ ಪ್ರತಿಯೊಂದು ಜನಾಂಗಕ್ಕೂ ಹೊಸದಲ್ಲ. ಹಿಂದೂ ದೇಶದಲ್ಲಿ ಎಷ್ಟೋ ಸಾವಿರ ಚಿಕ್ಕ ಚಿಕ್ಕ ಜನಾಂಗಗಳಿರಬಹುದು. ಎಲ್ಲವೂ ಅದರದರ ಪ್ರಾಶಸ್ತ್ಯವನ್ನು ಕುರಿತು ಬಣ್ಣಿಸದೆ ಇರವು. ಹಾಗಿದ್ದರೂ ಜನಾಂಗಗಳು ಬಂದರೇನು? ಬಿದ್ದರೇನು? ಸಂಸ್ಕೃತಿಯೆಂಬುದು ಒಬ್ಬನಿಂದ ಮಾಡಲ್ಪಡುವ ಮಣ್ಣಿನ ಮುದ್ದೆಯಲ್ಲ. ಸಾವಿರಾರು ಜನರು ತಮ್ಮ ಅಮೃತವನ್ನು ಒಕ್ಕೊರಳಲ್ಲಿ ಹರಸಿ ಹಾಡಿ ಬಿಟ್ಟು ಹೋದ ಒಂದು ಜ್ಯೋತಿ! ಅದಕ್ಕೆ ನಾಶ ಇಲ್ಲ! ಧ್ರುವ ತಾರಾ ಪ್ರಕಾಶದಂತೆ ಸದಾ ಪ್ರಕಾಶಿಸುತ್ತಿರಬೇಕು. ರಾಮರಾಜ್ಯ ಹೇಗಿತ್ತೆಂದು ಯಾರಿಗೆ ಗೊತ್ತು? ಆದರೂ ವಾಲ್ಮೀಕಿ ಮಹರ್ಷಿಯು ಆಗಿನ ಸಾಂಸ್ಕೃತಿಕ ಸ್ವರೂಪವನ್ನು ಬಣ್ಣಿಸಲು ಹೋಗಿ ಸಾರ್ಥಕಗೊಂಡನೇ? ಸಾರ್ಥಕಗೊಂಡಿರಲಿಕ್ಕಿಲ್ಲ. ಅದರೂ

ತನ್ನ ಪ್ರಚಂಡ ಲೇಖನಿಯಿಂದ ಜನತೆಗೆ ಅಗಾಧವಾದ ಬುದ್ಧಿವಂತಿಗೆಯನ್ನಿತ್ತಿದ್ದಾನೆ. ಅವರ ಹಿಂದೆ ಆಗಿನ ಸಂಸ್ಕೃತಿಯ ಅವಶೇಷವೂ ಇದೆ. ಹೇಗೆ ಎಂದು ಕೇಳಿದಲ್ಲಿ ಹೇಳಲು ಸಾಧ್ಯವಾಗದು. ಭಾರತೀಯ ಸಂಸ್ಕೃತಿಯೆಲ್ಲವೂ ಗಾನರೂಪದಲ್ಲಿ ಓಲಾಡುತ್ತಿದೆ! ಕರ್ಮಕ್ಷೇತ್ರದಲ್ಲಿ ಮಾತ್ರ ಮಂಕುಗಟ್ಟಿ ಭ್ರಮೆ ಹಿಡಿದು ನಿಂತಿದೆ! ನಮ್ಮ ಕೊಡವ ಮಹಾಶಯರು ಕುಡುಮಲೆಯ ತಪ್ಪಲಿನ ಅಂಧವಾದ ಕಾನನದೊಳಗೆ ತೊಳಲಿ ತೊಳಲಿ, ಜೀವದ ರಹಸ್ಯವನ್ನು ಭೇದಿಸುವ ವಿದ್ಯೆಯನ್ನು ಸ್ವತಃ ಆಸ್ವಾದಿಸಿ ಹಾಡಿದ ಗಾನ ಸಂಸ್ಕಾರವು ನಮ್ಮನ್ನು ಈಗಲೂ ಮುಗ್ಧಗೊಳಿಸುವಂತಿದೆ. ನಾವು ಅವನ್ನು ಉಪೇಕ್ಷಿಸಿ ಅವನ್ನೆಲ್ಲಾ ನಾಚಿಕೆಪಡಿಸುತ್ತಿದ್ದರೂ, ಎಂದೋ ಒಂದು ಕಾಲದ ಉದಯಗಾನವು (ಉದಯರಾಗವಲ್ಲ) ನಿದ್ರಿತ ಪ್ರಪಂಚವನ್ನು ಎಬ್ಬಿಸುತ್ತಿದೆ. ಜನಾಂಗವನ್ನು ಒಂದು ವಿಧದ ಕಟ್ಟಿನ ಶಿಸ್ತಿನಲ್ಲಿ ಇಡುವಂಥಾ ಅಮೋಘವಾದ ಶಕ್ತಿಯನ್ನು ಸಹಜ ಸಂಸ್ಕೃತಿಯು ದಯಪಾಲಿಸುತ್ತದೆ. ಜನತೆಯ ಏಳುಬೀಳುವಿಗೆ ಕಾರಣವಿದ್ದರೆ ಇವುಗಳಲ್ಲಿ ನಾವು ಇಡುವ ಲಕ್ಷ್ಯಾಲಕ್ಷ್ಯ ಪರಿಮಾಣದಳತೆಯಲ್ಲೇ ಆಗಿದೆ. ಪ್ರತಿಯೊಂದು ಅದರ ಅಂತ್ಯಕಾಲ ಸಮೀಪಿಸಿದರೆ ಅದರಷ್ಟಕ್ಕೆ ಮಾಯವಾಗುವುದು. ಮನುಷ್ಯರ ವಿಷಯದಲ್ಲಾದರೂ ಸಹ ಇದೇ ರೀತಿಯಾಗಿದೆ. ಹಿಂದೆಯೇ ಸೂಚಿಸಿದಂತೆ ಶನಿಯ ಪ್ರತಿಭೆಯಲ್ಲಿ ಹಿಂದುಗಳ ನಂಬಿಕೆಯೊಂದು ಪ್ರಸಿದ್ಧವಾದುದಾಗಿದೆ. 'ದೋಷ ಬಪ್ಪ ಕಾಲತ್, ನಲ್ಲದೊಂದ್ ಕಾಂಬ್‌ಲೆ' ಎಂಬುದಾಗಿ ಯುಕ್ತವಾಗಿ ಹೇಳಿದ್ದಾರೆ. ಒಬ್ಬ ಮನುಷ್ಯನ ಯಾ ಊರಿನ, ನಾಡಿನ ಅಥವಾ ಸಾಮ್ರಾಜ್ಯದ ಪತನಕ್ಕಾ ಮೂಲ ರೂಪದಲ್ಲಿ ಏನೋ ಒಂದು ಇರಲೇಬೇಕು. ಪಕ್ಕನೆ ಯಾವುದೂ ಆಗಲಿಕ್ಕಿಲ್ಲ. ಅದಕ್ಕಿಂತ ಹಿಂದೆ ನಿಧಾನವಲ್ಲಿ ದೋಷವು ಒಂದಲ್ಲ ಒಂದು ವಿಧದಲ್ಲಿ, ಒಂದೊಂದು ರೂಪದಲ್ಲಿ ಸನ್ನಿಹಿತವಾಗುತ್ತಲಿರುತ್ತದೆ. ಮನುಷ್ಯನ ಬುದ್ಧಿಯೂ ವಿಪರೀತಾವಸ್ಥೆಯನ್ನು ತಾಳಿರುತ್ತದೆ. ಬಹುಮಟ್ಟಿಗೆ ಅನಿವಾರ್ಯವಾದ ಪ್ರಸಂಗಗಳು ಉದ್ಭವಿಸುತ್ತವೆ. ಏನೋ ಒಂದು ಅಶುಭ ಸೂಚನೆ ಇದೆಯೆಂದು ಭಾವಿಸಿಕೊಳ್ಳುವ ಅವಕಾಶವಿರುತ್ತದೆ. ಮನುಷ್ಯನಲ್ಲೂ ಸಹ 'ಕೇಡ್ ಕಾಲಕ್, ಕೇಡ್ ಬುದ್ಧಿ' ಎಂಬುದಾಗಿ ಬುದ್ಧಿಯ ವೈಪರೀತ್ಯವನ್ನು ಕಾಣುತ್ತೇವೆ. ಆಚಾರ ವಿಚಾರಗಳಲ್ಲೂ ಅಲಕ್ಷ್ಯತೆ ಎಂಬುದನ್ನು ಪ್ರತ್ಯೇಕ ಹೇಳುವುದವಶ್ಯವಿಲ್ಲ. ಯಾವುದಕ್ಕೂ ಹೆಚ್ಚಿನ ಶ್ರದ್ಧೆಯನ್ನಿಡುವ ತೊಂದರೆಯನ್ನು ತೆಗೆದುಕೊಳ್ಳಲಾರೆವು. ಇದಕ್ಕೆಲ್ಲಾ ನಮ್ಮ ಹಿರಿಯರು ಯುಕ್ತವಾದವನ್ನು ಬಿತ್ತಿದ್ದಾರೆ. ಸೂಕ್ಷ್ಮ ಪಾಠವನ್ನು ಬೋಧಿಸಿದ್ದಾರೆ. ತಕ್ಕ ವಚನಗಳನ್ನು ಸಲ್ಲಿಸಿ ಹೆಚ್ಚಿನ ನಿಗವಿಡಲು ಪ್ರೇರೇಪಿಸುತ್ತಾರೆ. ಆಚಾರಶೂನ್ಯರಾ

ಗಿರುವ ಅನಾಗರಿಕರಂತೆ ಇರುವುದು ಹೇಯ ವರ್ತನೆಯೆಂದು ಸಾರಿದ್ದಾರೆ. ಎಲ್ಲವನ್ನೂ ಶಾಸ್ತ್ರಪ್ರಕಾರ ಮಾಡದೆ, ಪದ್ಧತಿಯನ್ನು ಮರ್ಯಾದಿಸದೆ, ಇಚ್ಛಾನುಸಾರವಾಗಿ, 'ಮನ ಒತ್ತತೆಂಗಿ ಗಣ ಒತ್ತತ್' ಎಂಬ ನಿಕೃಷ್ಟ ಬುದ್ಧಿವಂತಿಕೆಯನ್ನು ಬಲ್ಲವರು ಖಂಡಿಸುತ್ತಾರೆ. ಆದುದರಿಂದ ನಮ್ಮ ಈ ಸಂಸ್ಕೃತಿಯನ್ನುಳಿಸಲು ಹಿರಿಯರು ಹೆಚ್ಚಿನ ಸಾಹಸಪಡುತ್ತಿದ್ದರೆಂಬುದಾಗಿ ಇವುಗಳಿಂದ ವ್ಯಕ್ತವಾಗುವುದು.

ಅದೃಷ್ಟ ಯಾ ಹಣೇಬರಹವನ್ನು ಯಾರಿಂದ ತಪ್ಪಿಸಲಿಕ್ಕೆ ಸಾಧ್ಯವಿದೆ? ಇದು ಎಂತಹ ಅಜ್ಞಾನಿಗೂ, ಮೂರ್ಖನಿಗೂ ವೇದ್ಯವಾದ ವಿಷಯ. ಆದರೆ ಪ್ರಸಿದ್ಧ ವಿದ್ವಾಂಸನಿಗೆ ಗೊತ್ತಿಲ್ಲದೇ ಇರುತ್ತದೆ. ಲೋಕೈಕ ವೀರರೂ ಈ ವಿಷಯದಲ್ಲಿ ಒಂದೊಂದು ಸಂದರ್ಭಗಳಲ್ಲಿ ಅಜ್ಞರಾಗಿರುತ್ತಾರೆ. ಮನುಷ್ಯನು ಚಿರಂಜೀವಿ ಅಲ್ಲವೆಂದು ಗೊತ್ತಿದ್ದರೂ ಎಂಥಾ ಅಕೃತ್ಯವನ್ನು ಒಂದೊಂದಾವರ್ತಿ ಒಬ್ಬೊಬ್ಬರು ಮಾಡಿಕೊಳ್ಳುವರು? ಆಳಿದು ಹೋದುದಕ್ಕೆ ಚಿಂತಿಸಿ ಪ್ರಯೋಜನವಿಲ್ಲವೆಂಬುದನ್ನು ಬಹು ಸೂಕ್ತ ವಚನಗಳಿಂದ ನಮ್ಮ ಹಿರಿಯರು ಹೇಳಿರುವರು:—

ಕೇಳಿ ಕೇಳಿ ಕುಞ್ಞ್ಯಳೆ,
ಏರ ದುಃಖ ಮಾಡಂಡ;
ಆವಿಜ ಜಳಂದಕ್ಕ,
ಅಂಗಯಿ ತಡಪ್ಲೆ;
ಕ್ಬ್ಭೂಮಿ ಕುಡ್ಂದಕ

ಅಂಗಾಲ್ ತಡ್ಪ್ಲೆ;
ದೇವ ಪಾಪ ಕೆಜ್ಜಕ,
ಆವದಿಲ್ಲೆ ನಂಗಕ್;
ಚಾವದೂ ಪರಪದೂ,
ಈ ಭೂಮಿಲ್ ಉಳ್ಳದ್!

ಮೇಲಿನ ವಚನವು ಬಹು ಸುಂದರವಾದ ದೃಷ್ಟಾಂತಗಳನ್ನು ಕೊಟ್ಟು ದಗ್ಧಹೃದಯವನ್ನೂ ಕರಗಿಸುವಂತೆ ಹೇಳಿದೆ. ಅಣುಸಮಾನನಾದ ಮನುಷ್ಯನಿಂದ ಏನು ಮಾಡಲು ಸಾಧ್ಯವಿದೆ? ನಮ್ಮ ದೃಷ್ಟಿಯಲ್ಲಿ ದೇವರು ಪಾಪಾಚರಣೆಯನ್ನು ಮಾಡಿದವನೆಂದಾದರೂ ಲೌಕಿಕ ನಿಯಮವನ್ನು ಮಾತ್ರ ಯಾವ ಕಾಲಕ್ಕೂ ಎಂಥಾ ಮನುಷ್ಯನಾದವನಿಂದಲೂ ಮೀರಲು ಸಾಧ್ಯವಿಲ್ಲವೆಂಬುದನ್ನು ಇದರಲ್ಲಿ ಹೇಳಿಕೊಟ್ಟಿರುವರು.

ಹಿಂದೂ ಮತವೆಂದರೆ ಧರ್ಮಕ್ಕೆ ತವರುಮನೆಯಾಗಿದ್ದು. ಪುರಾಣಾದಿಗಳಲ್ಲಿ ತೋರುವ ಮಿತ್ರವಾತ್ಸಲ್ಯ, ದಯಾಧರ್ಮಗಳಲ್ಲೆಲ್ಲಾ ನಮಗೂ ಒಂದು ಸ್ಥಾನವಿದೆ ಹಿಂಸೆ ಮತ್ತು ಅಹಿಂಸೆಗಳೊಳಗೆ ಅನೇಕ ಧರ್ಮಗಳಲ್ಲಿ ದೊಡ್ಡ ವಾದವಾಗಿದೆ. ಹಾಗಾದರೆ ಯುದ್ಧ ಮಾಡುವುದೂ ಒಂದು ತೆರನಾದ ಹಿಂಸೆಯೇ ಅಲ್ಲವೇ? 'ಎಷ್ಟೋ ಜನರು ಹತರಾಗಿ ಘೋರ ಪಾಪವನ್ನು ಮಾಡಿದಂತಾಗದೆ,' ಎಂದು ನಾವು ಶಂಕೆ

ಪಟ್ಟರೆ ಧರ್ಮದ ಯಥಾರ್ಥವಾದವು ಆದನ್ನು ಉಲ್ಲಂಘಿಸಿ, ಯುದ್ಧ ಮಾಡಿ ತನ್ನ ದೇಶಕ್ಕೋಸ್ಕರ ಸತ್ತರೆ, ಪುಣ್ಯವು ಅಪರಿಮಿತವಾಗಿ ಸಿಕ್ಕುವುದು ಎಂದೂ, ದುಷ್ಟ ಶಿಕ್ಷಣಾ ಕಾರ್ಯವು ಅಮೋಘವಾದದ್ದೆಂದೂ ಹೇಳುತ್ತಿದೆ. ಅರ್ಜುನನು ತನ್ನ ಸ್ವಬಾಂಧವರನ್ನು ಯುದ್ಧರಂಗದಲ್ಲಿ ಕೊಲ್ಲುವುದು ಉಚಿತವೇ ಎಂದು ದುಃಖಿಸಿ ನಿಂತಿದ್ದಾಗ ಶ್ರೀ ಕೃಷ್ಣ ಪರಮಾತ್ಮನು, 'ಪೊತ್ತಿತ್ ನೀ ಚತ್ತಕ; ವೀರ ಸ್ವರ್ಗ ಕಿಟ್ಟುವ,' ಎಂದು ಧೈರ್ಯವನ್ನು ತುಂಬಿ ಆ ಮಟ್ಟಿಗೆ ಅರ್ಜುನನನ್ನು ಯುದ್ಧ ಮಾಡಲು ಪ್ರೇರೇಪಿಸಲಿಲ್ಲವೇ? ಅಹಿಂಸೆಯನ್ನು ಪ್ರತಿಪಾದಿಸುವ ಕ್ರಮವು ಎಷ್ಟೋ ಇರಬಹುದು. ನಮ್ಮ ಕೊಡವ ಸೂಕ್ತಿಗನುಗುಣವಾಗಿ ಹೇಳುವುದಿದ್ದರೆ ಹಿಂದಿನ ಭೀಷ್ಮ, ವಿದುರ, ವಿಭೀಷಣ ಮೊದಲಾದ ಧರ್ಮಾತ್ಮರು ತಕ್ಕ ಸಂದರ್ಭಗಳಲ್ಲಿ ಅಹಿಂಸೆಯನ್ನು ಹೇಗೆ ನಿರ್ದೇಶಿಸಿದರು. ಜೈನರು ಕೇವಲ, 'ಅಹಿಂಸಾ ಪರಮೋ ಧರ್ಮಃ' ಎಂಬುದಾಗಿ ಸುಲಭ ವಾಕ್ಯದಿಂದ ಸಕಲ ವಿಷಯವನ್ನೂ ಸೂಚಿಸುವರು. ಆಧುನಿಕ ಯುಗದ ಆಚಾರ್ಯರಾದ ಮಹಾತ್ಮಾ ಗಾಂಧಿಯವರ ಅಹಿಂಸಾ ಪ್ರತಿಪಾದನೆಯ ಕ್ರಮವು ಜಗತ್ತಿಗೇ ಗೊತ್ತಿದೆ. ಸಾಯುವಾಗ ಹಿರಿಯರು ಮಕ್ಕಳನ್ನೇ ಅಲ್ಲದೆ, ಎಲ್ಲಾ ಸಂಬಂಧಿಕರನ್ನೂ ಕರೆಸಿ ಈ ಕೆಳಗೆ ಹೇಳಿದಂತೆ ಮಾಡುವ ಉಪದೇಶವು ಅವರಿಗೇ ಅಲ್ಲ, ಇಡೀ ಲೋಕಕ್ಕೇ ಅನ್ವಯಿಸುವಂಥಾ ಸೂಕ್ತಿಯಾಗಿದೆ. ಹೇಗಿದ್ದರೂ ಯಾವುದೋ ಒಂದು ಕಾಲದಲ್ಲಿ ತಮ್ಮ ಕಲ್ಪನಾ ಸಾಮ್ರಾಜ್ಯದ ಕೋಶದಿಂದ ಎಳೆತಂದ ಮುತ್ತಿನ ಮಾಲೆಯಂತೆ ತೋರುವ ಈ ಉಪದೇಶದಲ್ಲಿ ಅಹಿಂಸೆ, ಧರ್ಮ ಹಾಗೂ ಅದರ ಹಿಂದೆ ಬೆಳಗುವ ಸಂಸ್ಕೃತಿ ವಿಶೇಷವು ಗಣ್ಯವಾಗಿದೆ. ಅಲ್ಲದೆ ದೇವ, ಪ್ರಭು, ಭೂತಗಳಲ್ಲೆಲ್ಲಾ ಎಂಥಾ ನಿಶ್ಚಲ ಭಾವನೆಯಿದ್ದುವೆಂದು ವ್ಯಕ್ತವಾಗುವುದು. 'ಶುಭಕಾಲದಲ್ಲಿ ಆರೋಗ್ಯಪೂರ್ಣವಾಗಿದ್ದು ಈ ರೀತಿ ಬುದ್ಧಿ ಹೇಳುತ್ತಾ ಇದ್ದು, ಮರುಕ್ಷಣದಲ್ಲೇ ಗೂಡಿನಿಂದ ಹಾರಿದ ಹಕ್ಕಿಯ ಹಾಗೆ, ಇಂದು ಪ್ರಾಣವನ್ನು ನೀಗಿ ಕಣ್ಣು ಮುಚ್ಚಿದೆಯೂ!' ಎಂದು ಆ ಮೇಲೆ ಮರುಗುತ್ತಾ ಹೇಳುವುದರ ತಾತ್ಪರ್ಯಾರ್ಥವು ಈ ರೀತಿ ಹಾಡಿನಲ್ಲಿ ಉಕ್ತವಾಗಿದೆ:—

ಶತ್ರುರುನೆಣಂಗತಿ ‖ಕುಞ್ಯಳೆ‖ ಕೇರಿಲ್ಲತೆ ಕೆಟ್ಟಿತ್, ‖ಕುಞ್ಯಳೆ‖
ಮಿತ್ರುರನ ದೂರತಿ, ,, ಕೋಲಿಲ್ಲತೆ ಪೊಜ್ಜಿತ್, ,,
ಚಂಜಾದಿ ಚದಿಯತಿ ,, ನೂತನ ತಡಕಿರೋ ,,
ಪೊಂಬಣ ಕೊಡಿಚಿತ್ ,, ದೇವರ ಮರೆಯತಿ ,,
ಒಬ್ಬರೋ ಕೆಡ್‌ತತಿ, ,, ಆಯಂಗ್ ಮಿನಿಯತಿ; ,,
ನಿಂಗ ಕೆಡ್‌ರಾಸವಸ; ,, ಕೂಳಿನ ಕೊದಿಯತಿ ,,

ಪೆತ್ತವ್ವನ ಬಯ್ಯತಿ ,, ನಿಂಗವ್ವನೂ ಮಕ್ಕಳೂ ,,
ಒಕ್ಕಳ ಕಳೆಯಂತಿ ,, ಪೂಪೋಲೆ ಪೊಲಂದೋಳಿ ,,

ಎಂದು ಹೇಳುವಾಗ ಒಂದು ಕ್ಷಣಕ್ಕಾದರೂ ಆಗುವ ಸಂತೋಷವು ಅಪಾರವಾಗಿದೆ. ಮೇಲೆ ಹೇಳುವಂತೆ ಶತ್ರುವನ್ನು ಮಿತ್ರನಂತೆ ಕಾಣಬೇಕೆಂದೂ, ವಿರೋಧಿಯನ್ನು ಕೋಲಿಲ್ಲದೆ ಆತ್ಮ ಸಂಸ್ಕಾರದ ಬಲದಿಂದ ಅಡಗಿಸಬೇಕೆಂದೂ, ದೇವರನ್ನು ಮರೆಯದೆ ವರ್ತಿಸಬೇಕೆಂದೂ ಅಪ್ಪಣೆ ಕೊಡಿಸಿದ್ದು ಪಾವನತಮವಾದ ವಚನಗಳಾಗಿವೆ. ಸ್ವಾಮಿಭಕ್ತಿಯನ್ನು ಧರ್ಮಬದ್ಧವಾಗಿ ಭಾವಿಸುತ್ತಿದ್ದರೆಂದೂ, 'ಕೂಳಿನ ಕೊಡಿಯಂತಿ' ಎಂದು ಹೇಳಿ, ಮೂಢನಂಬಿಕೆ ಮೊದಲಾದುವುಗಳಿಗೆ ಅವಕಾಶವೇ ಆಗ ಇರಲಿಲ್ಲವೆಂಬುದಾಗಿಯೂ ವ್ಯಕ್ತವಾಗುತ್ತದೆ. ಔದಾರ್ಯಭಾವದಿಂದಲೂ, ಭಕ್ತಿ ಸಮನ್ವಯದ ದೃಷ್ಟಿಯಿಂದಲೂ ಓದುತ್ತಾ ಓದುತ್ತಾ 'ಹಾ' ಯೆಂದು ಹಿಂದಿನ ಜಾಣ್ಮೆಯನ್ನು ನೋಡಿ ತಲೆತೂಗುತ್ತಾ ಇದ್ದು ಕಡೆಗೆ, 'ನಿಂಗವ್ವನೂ ಮಕ್ಕಳೂ, ಪೂಪ್ಪೋಲೆ ಪೊಲಂದೋಳಿ,' ಎಂದರೆ ಆತ್ಮಾನಂದವಾಗದಿದ್ದರೆ ಅದು ಶುಷ್ಕಹೃದಯವಲ್ಲದೆ ಮತ್ತೇನು ?

ಕೊಡವರ ಸಾಂಸಾರಿಕ ವ್ಯವಸ್ಥೆಯು ನಿಯಮಬದ್ಧವಾದ ಕ್ರಮದಲ್ಲಿತ್ತೆಂದು ಹೇಳಬಹುದು. ಭಾಷೆ ಮತ್ತು ಉಡುಪುಗಳಲ್ಲೂ ತಮ್ಮದೇ ಆದ ಸಂಸ್ಕೃತಿಯು ಹಿಂಗಡೆಯಲ್ಲಿ ಕಾಣಲ್ಪಡುತ್ತಿದೆ. ಸ್ತ್ರೀಯರು ಸಾಮಾಜಿಕ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸಲು ಆಧಾರಪ್ರಾಯರಾಗಿದ್ದರು. ಅವರ ಉಡುಪು ದಕ್ಷಿಣ ಹಿಂದೂಸ್ಥಾನದಲ್ಲೇ ಪ್ರಖ್ಯಾತಿಗೊಂಡಿದೆಯೆಂದರೆ ಹೆಚ್ಚಲ್ಲ. ಹಿಂದಕ್ಕೆ ನಿರಿಯನ್ನಿಡುವ ಅಪೂರ್ವ ಪದ್ಧತಿಗೆ ಕಾವೇರಿ ಪುರಾಣವೇ ಸಾಕ್ಷ್ಯರೂಪವಾಗಿದೆಯೆಂದರೂ ಅದು ನಂಬಲು ಅರ್ಹವಾಗಿರುವುದೋ ಎಂಬ ಸಂದೇಹವಿದೆ. ಹೇಗೂ ಈ ಉಡುಪು ಆಕರ್ಷಣೀಯವಾಗಿ ಬಹು ವೈಚಿತ್ರ್ಯದಿಂದ ಕೂಡಿದೆಯೆಂಬುದು ಸಿದ್ಧವಾಗಿದೆ. ಅಲ್ಲದೆ 'ಕೊಡವ ಸ್ತ್ರೀಯರು ಮತ್ತು ಗಂಗಾ ಪೂಜೆ'ಯೆಂಬುದಾಗಿ ಪ್ರತ್ಯೇಕ ಪ್ರಕರಣವನ್ನೇ ಬರೆಯಲವಕಾಶವಿದೆ. ಹಿಂದೂಗಳು ಗಂಗೆಗೆ ನಿವೇದಿಸುವ ಭಕ್ತಿ, ಹಾಗೂ ಅವಳಿಗೆ ಕೊಡುವ ಪ್ರಾಶಸ್ತ್ಯವು ವಿಶೇಷವಾಗಿದೆ. ಗಂಗಾ ತೀರ್ಥ ಮಹಿಮೆಯನ್ನು ಪ್ರತಿ ಶುಭಕಾರ್ಯಗಳಲ್ಲೂ ಎತ್ತಿ ಕೊಂಡಾಡುತ್ತಾರೆ. ಗಂಗಾ ಪೂಜೆಯು ಆರ್ಯರ ದೈನಿಕ ಪೂಜೆಗಳಲ್ಲೊಂದು. ಗಂಗಾ ದೇವಿಯೆಂದರೆ ಸ್ವರ್ಗ, ಭೂಮಿ, ಪಾತಾಳಗಳನ್ನೊಂದುಗೂಡಿಸಿದ ಮಹಾಮಹಿಮಳು. ಪರಮೇಶ್ವರನ ಜಟಾಧಾರಿಣಿಯಾಗಿ ಪ್ರಕಾಶಿಸುವ ಮಂಗಳ ಸ್ವರೂಪಳು. ಇವಳ ತೀರ್ಥಮಹಿಮೆಯನ್ನು ಮಾರ್ತೀ

ಗೊಳಿಸಲು ಇರುವ ಕಾಶೀ ಹರಿದ್ವಾರಗಳಂಥಾ ಪುಣ್ಯಕ್ಷೇತ್ರಗಳು ಲೋಕಪ್ರಸಿದ್ಧವಾಗಿವೆ. ಹೀಗಿರುವಾಗ ಕೊಡವರು ಸಹ ತಮ್ಮ ನಿತ್ಯಕರ್ಮಗಳಲ್ಲಿ ಗಂಗಾಪೂಜೆಯನ್ನು ಮಾಡುವ ರೂಢಿಯನ್ನು ಹಿಂದಿನಿಂದಲೇ ಇಟ್ಟುಕೊಂಡು, ಆರ್ಯ ಮಹಿಳೆಯರ ಪೂಜಾನುಕರಣವನ್ನು ಸಂಕಲ್ಪಸ್ವರೂಪದಲ್ಲಿ ನೆರವೇರಿಸುವರು. ಹೆತ್ತು ಅರುವತ್ತು ದಿವಸದಲ್ಲಿ 'ನೀರ್ ಎಡ್'ಪ' ಎಂಬುದಾಗಿ ಮಾಡುವ ಗಂಗಾ ಪೂಜೆಯು ಕೊಡವ ಸ್ತ್ರೀಯು ಆದ್ಯ ಕರ್ಮಗಳಲ್ಲೊಂದಾಗಿದೆ. ಎರಡನೆಯದಾಗಿ ಮದುವೆ ಹುಡುಗಿಯು ಪತೀ ಭವನಕ್ಕೆ ಬಂದು ನೀರು ತೆಗೆಯುವ ಶಾಸ್ತ್ರವು ಬಹು ಉತ್ಸವಭರಿತವಾಗಿ ನೆರವೇರಿಸಲ್ಪಡುವುದು. ಕಾವೇರಿ ಸಂಕ್ರಮಣ ಕಾಲದಲ್ಲಿ ಹೆಂಗಸರು ಗಂಗಾ ಪೂಜೆ ಮಾಡಿ ಬಂದು ಕಣಿ ಪೂಜಿಸಬೇಕು. ಬಾವಿಗೆ, ಕೆರೆಗೆ ಇತ್ಯಾದಿ, ಗಂಗಾ ದೇವಿಯ ಸ್ವರೂಪಗಳೆಲ್ಲೆಲ್ಲಿ ಕಾಣುವುವೋ ಅಲ್ಲಿಗೆ ಬೊತ್ತುಗಳನ್ನು ಹಾಕುವರು. ಬಾವಿಯ ಬದಿಯಲ್ಲಿರುವ ಬೊತ್ತಿಗೆ ಕಣಿಪೂಜಿಸಿ ಜಲತರ್ಪಣ ಮಾಡಿ ಗಂಗಾಸ್ತವವನ್ನು ಮಾಡಬೇಕು. ಹಬ್ಬ ಕಳೆದನಂತರ ಕಣಿಪೂಜಿಸಿದ ಹೂವಿನ ರಾಶಿಯನ್ನೆಲ್ಲಾ ಎತ್ತಿ ಸಮೀಪದ ತೋಡಿನಲ್ಲಿ ಹರಿಯಿಸಿ ಗಂಗೆಯಲ್ಲಿ ಬಿಟ್ಟಂತೆ ಭಾವಿಸುವರು. ಪೂಜಾ ಸಾಮಗ್ರಿಗಳು— ತೆಂಗಿನಕಾಯಿ, ವೀಳ್ಯದೆಲೆ, ಕರ್ಪೂರದಾರತಿಗಳಿಂದ ಭಕ್ತಿಗರ್ಭಿತವಾಗಿ ಸರ್ವ ವಿಘ್ನ ವಿಜಯಗಳೆಲ್ಲವೂ ಗಂಗಾರ್ಪಣವೆಂಬ ಭಾವದಿಂದ ನಡೆಸುವರು. ಸಾವಿನ ಸಂದರ್ಭದಲ್ಲಿ ಸತ್ತವನಿಗಿಂತ ಕಿರಿಯರು, 'ನೀರ್‌ಕ್ ಇಳಿಯುವ' ಎಂಬ ಉಚ್ಚ ವಿಧಿಕರ್ಮವನ್ನು ಕೈಕೊಳ್ಳುವರು. ಅಲ್ಲದೆ ಶವವನ್ನು ಸುಟ್ಟು ಮರುದಿನ ಬೆಳಿಗ್ಗೆ ಆ ಭಸ್ಮವನ್ನು ಸಮೀಪದ ತೋಡು ಅಥವಾ ಹೊಳೆಯಲ್ಲಿ ಹರಿಯಿಸುವರು. ಇದನ್ನು ಗಂಗೆಗೆ ಬಿಡುವುದೆಂದು ಹೇಳುವರು. 'ಚುಟ್ಟ್ ಸ್ವರ್ಗ ಪೋನ ವಂಡ, ಚುಟ್ಟ್‌ಬುದ್ದ ಭೂಮಿನ; ಗಂಗೆಕ್‌ಟ್ಟ್‌ಕೊಂಡತ್' ಎಂದು ಹಾಡುವರು. ಈ ರೀತಿಯಾಗಿ ಭಾರತೀಯರ ಭಾವೀ ಮೂರ್ತಿಯಾದ, ಆರ್ಯರ ದೈನಿಕ ಸಂಸ್ಕಾರದ ಸ್ವಚ್ಛಸ್ವರೂಪಿಣಿಯಾದ ಗಂಗಾದೇವಿಯ ಪೂಜೆಯಲ್ಲಿ ಕೊಡವರೂ ಇಟ್ಟ ಆಸಕ್ತಿ ಹಾಗೂ ಭಕ್ತಿಯು ವರ್ಣಿಸಲಸಾಧ್ಯವಾಗಿದೆ.

ಹಿಂದೂ ಮತವು ಆಚಾರ ವ್ಯವಹಾರಗಳಲ್ಲಿ ಮನುಸ್ಮೃತಿಯನ್ನನುಸರಿಸಿ ನಡೆದಿದೆ. ಮನುವು ಸ್ತ್ರೀಯರನ್ನು ಏಕೋ ವಕ್ರ ದೃಷ್ಟಿಯಿಂದ ಕಂಡಿದ್ದಾನೆ. ಸ್ತ್ರೀಯರಿಗೆ ಸ್ವಾತಂತ್ರ್ಯ ಕೊಡುವುದರ ವಿಷಯವಾಗಿ ಅವನು ಕೊಟ್ಟ ಸಿದ್ಧಾಂತವು ಸಂಪೂರ್ಣ ಅಪಕ್ವತವಾಗಿದೆ. ಅದನಂದಂತೆ:—

ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ,
ವಾರ್ಧಕೇ ರಕ್ಷಂತಿ ಪುತ್ರಾಃ ನಸ್ತ್ರೀ ಸ್ವಾತಂತ್ರ್ಯಮರ್ಹತಿ ॥

ಎಂದರೆ ಬಾಲ್ಯದಲ್ಲಿ ತಂದೆಯೂ, ಯೌವನದಲ್ಲಿ ಪತಿಯೂ, ವಾರ್ಧಕ್ಯದಲ್ಲಿ ಮಗನೂ ಸ್ತ್ರೀಯನ್ನು ರಕ್ಷಿಸುತ್ತಾರೆಂದ ಮೇಲೆ ಸ್ತ್ರೀಯು ಸ್ವಾತಂತ್ರ್ಯಕ್ಕೆ ಅರ್ಹಳಾಗಳು. ಈ ರೀತಿಯು ಸ್ಮೃತಿಯಿಂದ ಸ್ತ್ರೀಯರನ್ನು ದಾಸ್ಯರೀತಿಯಲ್ಲೇ ಹಿಂದುಗಳು ಪೂರ್ವದಿಂದಲೇ ಕಂಡುಕೊಂಡು ಬಂದರು. ನಮ್ಮ ಸ್ತ್ರೀಯರು ಅದೇ ತೆರನೆಂದರೆ ಬೇರೆಯಲ್ಲ ಸ್ವಾತಂತ್ರ್ಯದ ಮಟ್ಟಿಗೆ ಹೀಗಾದರೂ ಇತರ ವಿಚಾರಗಳಲ್ಲಿ ಸ್ತ್ರೀಯೇ ಪುರುಷನಿಗಿಂತ ಒಂದು ಕೈ ಮೇಲಿದ್ದಳೆಂದರೆ ವಿಪರೀತವಾಗಲಾರದು. ಸಮರ ಭೂಮಿಗೆ ಹೊರಡುವ ಪತಿಗೆ 'ಶುಭವಾಗಲಿ' ಎಂದು ಆರ್ಯ ಸ್ತ್ರೀಯರಂತೆ ನಮ್ಮ ಸ್ತ್ರೀಯರು ಪತಿಗಳನ್ನು ಕಳುಹಿಸಿರುವರಲ್ಲದೆ ಬೇಡವೆಂದು ತಡೆದಿಡಲಿಲ್ಲ. ಈಗಿನ ಕಾಲಕ್ಕೆ ಸ್ಥಿತಿಗತಿಗಳು ಕೆಟ್ಟಿದ್ದರೂ ಹಿಂದಣದನ್ನು ಈಗ ಹೇಳದೆ ನಿರ್ವಾಹವಿಲ್ಲ. ಗೃಹಕೃತ್ಯದ ಸಕಲ ಕಾರ್ಯಭಾರಗಳೂ ಸ್ತ್ರೀಯರಿಂದಲೇ ನಡೆಯುತ್ತಿವೆ. ಅಳಿಮುಂಡ ದೊಡ್ಡವ್ವನ ಕಥೆಯು ಈ ವಿಚಾರದಲ್ಲಿ ಬಹು ಆದರಣೀಯವಾಗಿದೆ. ಅಡ್ಡಿಯೊಗುವಂಥಾ ಎಲ್ಲಾ ತರದ ಅನಿವಾರ್ಯವಾದ ಆಪತ್ತುಗಳನ್ನು ಬದಿಗಿರಿಸಿ ನೆಟ್ಟ ಮನಸ್ಸಿನಿಂದ ತಮ್ಮ ಕಾರ್ಯಕಲಾಪಗಳನ್ನು ಸಾಗಿಸುವುದರಲ್ಲಿ ಕೊಡವ ಸ್ತ್ರೀಯರು ಬಹು ಪ್ರಖ್ಯಾತರಾಗಿರುವರು. 'ಪನ್ನಂಗಾಲ ತಮ್ಮೆ'ಯ ಕಥೆಯು (ಇವರು ಹುಟ್ಟು ಮಲೆಯೊಳಪವರಾದರೂ) ಎಂಥಾ ವಾದವಿವಾದಗಳಿಂದ ಕಳೆಗೊಂಡಿದೆ! ಬಹುವಾಗಿ ಬಳಲಿದ ತನ್ನ ಇಗ್ಗುತಪ್ಪ ಮೊದಲಾದ ಅಣ್ಣಂದಿಯರಿಗೆ ಬೆಂಕಿ ಇಲ್ಲದಿದ್ದರೂ ಅನ್ನ ಬೇಯಿಸಿ ಇಕ್ಕುವೆನೆಂದು,

ಅಣ್ಣಂಗಳೆ ಕೇಳಿರೋ   ತಿತ್ತಿಲ್ಲತೆ ಕೂಬೆಪ್ಪಿ;
ಉಪ್ಪಿಲ್ಲತೆ ಉಂಬೇಂಗಿ;

ಎಂದು ಕಾದ ಮರಳನ್ನು ಒಟ್ಟುಗೂಡಿಸಿ ಮಡಿಕೆಯನ್ನು ಅದರ ಮೇಲಿಟ್ಟು, ಅಕ್ಕಿಯನ್ನು ಬೇಯಿಸಿ ಕಡೆಗೆ ಅಣ್ಣಂದಿಯರಿಗೆ, 'ಅಣ್ಣಂಗಳೇ ಏಳಿರೋ; ತಿತ್ತಿಲ್ಲತೆ ಕೂಬೆಚ್ಚ, ಉಪ್ಪಿಲ್ಲತೆ ಉಂಡೋಳಿ,' ಎಂದು ಹೇಳಿದ ತನ್ನ ಕಾರ್ಯಸಾಧನೆಯು ಮಾತು ಬಹು ಅಚ್ಚುಮೆಚ್ಚಾಗಿದೆ.

ಹೆಣ್ಣನ್ನು ಹುಡುಕುತ್ತಾ ಊರೂರಿಗೆ ಹೋಗಿ ಬಂದ ಓರ್ವ ಮಗನನ್ನು ತನ್ನ ತಾಯಿಯು ಯಾವ ರೀತಿ ಆದರಿಸುವಳು ಎಂಬುದನ್ನು ನೋಡುವ. ಪೂರ್ವ ಕಾಲದಲ್ಲಿ ಸಾವಿತ್ರಿಗೆ ಒಪ್ಪಿಸಿದ ಸ್ವಾತಂತ್ರ್ಯದಂತೆ ಸ್ತ್ರೀಯರು ತಮಗೆ ಬೇಕಾದ ಪತಿಗಳ ಅನ್ವೇಷಣಕ್ಕಾಗಿ ಹೋಗಬಹುದಿತ್ತು. ಆದರೆ ಕಾಲಕ್ರಮೇಣ ಸ್ತ್ರೀಯರಿಗಿದ್ದ ಆ ಸ್ವಾತಂತ್ರ್ಯವು ತಪ್ಪಿ ಸಂಪೂರ್ಣ ಗಂಡಸರಲ್ಲೇ ಆ ಭಾರವು ಬಿತ್ತು. ಹಿಂದೂ

ಮಾತವು ಈ ರೀತಿಯಾಗಿ ಹಲವು ಸುಧಾರಣಾ ಸಮಸ್ಯೆಗಳನ್ನೊಳಗೊಂಡಿದೆ. ಮಾತನ್ನಾಡುವುದೂ ಸತ್ಪುರುಷರಲ್ಲಿ ಒಂದು ಕಲೆಯೆಂದೆನ್ನಿಸದೇ? ಮಾತಿನ ಆದರಣೆಯೆಂದರೆ ಸರ್ವೋತ್ಕೃಷ್ಟವಾದ ಒಂದು ಸತ್ಕಾರವೇ ಸರಿ. ಅನೇಕ ದಿವಸಗಳಿಂದ ಊರೂರೆಲ್ಲಾ ತಿರುಗಿ ಕಡೆಗೆ ಮದುವೆಮಾಡಲು ತನಗೆ ಯೋಗ್ಯಳಾದ ಓರ್ವ ಕನ್ಯೆಗಾಗಿ ಒಂದು ಸ್ಥಳದಲ್ಲಿ ಹೀಗೆಂದು ವಿಚಾರಿಸುವನು: 'ಈ ನಾಡ್ ನಡುವುಲ್, ಮಾರುಪೋರ್ ಎತ್ತುಂಡ? ಕೊಡ್‌ಪೋರ್ ಪೊಣ್ಣುಂಡ?' ಎಂದು ಯೋಗ್ಯ ರೀತಿಯಲ್ಲಿ ಕೇಳಲು ಆ ಅಪರಿಚಿತನು, ಈ ಯುವಕನಿಗೆ ತಕ್ಕ ಮನಸ್ಥಾನದ ಹೆಸರನ್ನು ಸೂಚಿಸುವನು. ಆಗ ಪುನಃ ಇವನು:-

ನಾಕೊತ್ತೋರ್ ಪೊಂಗಳ,   **ತಣ್ಣನೆ ಪೊಲವಡ್,**
ಎಲ್ಲೆಲ್ಲಿಯೂ ಕ್‌ಟ್ಟ್‌ಲೆ;   **ನಾಕೊತ್ತ ಪೊಣ್ಣುಂಡೇಗಿ;**
ಬಾಳ್‌ಬಾಕೆ ಪೋನೋಳೊ,   **ಆಂಜಿ ನೋಟತೆಣ್ಣೊಮ್ಮ.**

ಎಂಬ ಉತ್ಕೃಷ್ಟವಾದ ದೈನ್ಯಭಾವದಿಂದ ಕೇಳುವಾಗ್ಯ, ಆ ಅಪರಿಚಿತನಾದ ಮುದುಕನಿಗೆ ಉಂಟಾದ ಸಂತೋಷವು ಸ್ವಲ್ಪವೇನಲ್ಲ. ಅವನು ಈ ಯುವಕನಿಗೆ ಪ್ರತಿಯಾಗಿ ಏನು ಹೇಳುವನು ಎಂದರೆ:-

ಉಯಿ! ಅಂದಕ ಬಾಲನೆ,   **ನೀಕೊತ್ತೋರ್ ಪೊಂಗಳ,**
ಚೆಪ್ಪ್‌ಕೊತ್ತ್ ಮುಚ್‌ಟ್ನ;   **ನಾನ್ ಕಂಡ್ ಬೆಚ್ಚಿಯೆ!**
ಮಾಲೆಕೊತ್ತ ಕೀಲ್‌ನ,

ಅಹಾ! ಎಂಥಾ ರಮಣೀಯವಾದ ಮಾತು! ಯೋಗ್ಯತೆಗೆ ಸರಿಯಾಗಿ ಅದೆಂಥಾ ಪ್ರತಿ ಸತ್ಕಾರ! ಅದೆಂಥಾ ಸೌಮ್ಯವಾಣಿ! ಮಾತಿನಲ್ಲಿ ಹೆಣೆದ ಸಾಮ್ಯ, ಸೊಬಗು, ನಿರೂಪಿತ ಶೈಲಿ ಎಲ್ಲವೂ ಎಷ್ಟು ಮನೋಹರವಾಗಿದೆ. ಕೊಡವ ಬಾಂಧವರೇ, ಪುನಃ ಪುನಃ ಮೇಲಿನ ಮಾತುಗಳನ್ನು ಓದಿ ಆಸ್ವಾದಿಸಿರಿ! ಈ ಯುವಕನು ತನಗೆ ತಕ್ಕವಳನ್ನು ಸಿಕ್ಕಿತೆಂಬ ನಿರ್ಧಾರಕ್ಕೆ ಬಂದನಂತರ ತನ್ನ ಮಾತೆಯ ಹತ್ತಿರಕ್ಕೆ ಮರಳುವನು. ತಾಯಿಯಾದರೋ ಕನ್ಯಾರ್ಥಿಯಾಗಿ ಬಹು ದೂರ ಹೋದ ತನ್ನ ಬಾಲಕನನ್ನು ಚೆನ್ನಾಗಿ ಆದರಿಸಿ ಕಡೆಗೆ ಊಟವೆಲ್ಲಾ ಮುಗಿದು ಬಹು ಸಮಯದ ನಂತರ, ಮಗನು ವಿಶ್ರಾಂತಿಯನ್ನೂ ಅನುಭವಿಸಿದ ಮೇಲೆ ತಾಯಿಯು ವಿಚಾರಿಸುವ ಕ್ರಮವನ್ನು ನೋಡಿ:-

ಉಯಿ! ಎನ್ನಡ ಕುಞಾಯೇ;   **ಕಲ್ಲೋ ಮುಳ್ಳೋ ಇಂಜತ?**
ನೀ ಪೋನೋರ್ ಬಟ್ಟೆಲ್   **ಕಾರಿಯ ಕೈಗೂಡ್‌ಚ?**

ಎಂಬದಾಗಿ ತಾಯಿಯು ತನ್ನ ಮನಸ್ಸಿನ ಆಕಾಂಕ್ಷೆಯನ್ನು ಮಗನಲ್ಲಿ ಬಹು ಸಂಕೋಚಪಟ್ಟು ಕೇಳಲು, ಮಗನು:- 'ಕೇಳ್‌ಕೇಳ್ ಪೆತ್ತವ್ವ, ನಿನ್ನಡ ಪಯಾರ್ತ್‌ಲ್; ಕಾರಿಯತೆ ನಾಬಂದ;' ಎಂದು ಕಾರ್ಯನೆರವೇರಿತೆಂಬದಾಗಿ ಸಂತೋಷದ ವಿಷಯ ವನ್ನು ನಿವೇದಿಸುವನು. ಕಡೆಗೆ ಇತರ ವಿಷಯಗಳನ್ನು ಕುರಿತು:-

ಆಚೆಕ್ಕಾಚೆ ಎಟ್ಟಾಚೆ,
ಮಂಗ್‌ಲಕ್ ಸನ್ನಾಯ;
ಆನಗುಂಡ್ ಅವ್ವಯ್ಯ:
ಎಲ್ಲಾ ಜೋಡ್ ಕೂಟಂಡು.

ದೂರತುಳ್ಳ ಬೆಂದುಕ್,
ಓಲೆ ಆಳಯಿಕಂಡು.
ಪಕ್ಕಲುಳ್ಳ ಬೆಂದುಕ್,
ನಾನೇ ಪೋಯಿತೆಣ್ಣುವಿ!

ಇದರಿಂದ ಹಿಂದಿನ ಮದುವೆಯು, ಹಾಗೂ ತಮ್ಮ ಇಷ್ಟಮಿತ್ರರಿಗೆ ತಿಳಿಸುವ ಕ್ರಮ ವನ್ನು ಸಾಧಾರಣ ಮಟ್ಟಿಗೆ ತಿಳಿದುಕೊಳ್ಳಬಹುದು. ಹಿಂದಿನ ನಡತೆ ನೀತಿಗಳನ್ನು ಬರೇ ನಮ್ಮ ಊಹನಾ ಜಾಲದಿಂದ ಪೂರೈಸಿದರೂ ಅದರ ಹಿಂದೆ ಅಡಗಿರತಕ್ಕಂಥಾ ಯಥಾರ್ಥ್ಯವನ್ನು ಯಾರಿಂದೆ ತಾನೇ ಅಲ್ಲಗಳೆಯಲು ಸಾಧ್ಯವಿದೆ! ಹಿಂದಿನವರ ಅದೊಂದು ತರದ ನಿಷ್ಕಾಮ ಕರ್ಮ ಜೀವನದ ಪರಿಪೂರ್ಣತೆಯು ಇಾವು ನಮಗೆ ಪಾಠವನ್ನು ಭೋದಿಸದಿದ್ದರೆ ಆಧುನಿಕ ಪ್ರಪಂಚವು ಸಂಪೂರ್ಣ ನ್ಯಾಯ ಮಾರ್ಗ ದಲ್ಲಿ ನಡೆಯುತ್ತಿದೆಯೆಂದರೆ ಒಪ್ಪುವ ಆ ದುರ್ಘಟವಾದ ಪ್ರಸಂಗವೂ ಬರಬಹುದು.

ಪ್ರೇಮ ಸಂಸ್ಕೃತಿಯ ಚಿತ್ರವನ್ನು ಇಂದು ವಾಚಕರ ಎದುರಿಗಿಡದಿದ್ದರೆ ನಮಗೆ ತೃಪ್ತಿಯಾಗದೆಂದೆಣಿಸುವುದು! ಎಷ್ಟೆಷ್ಟು ಕವಿಗಳು ಎಂಥಾ ಆದರಣೀ ಯವಾದ ಶೈಲಿಯಿಂದ ಮತ್ತು ಸ್ಫೂರ್ತಿದಾಯಕವಾದ ಭಾಷೆಗಳಿಂದ ಪ್ರೇಮಗಾ ನವನ್ನು ಹಾಡಲಿಲ್ಲ! ಪ್ರೇಮಾಂಕುರವು ತರುಣ ತರುಣಿಯರಲ್ಲಿ ಬೆಳೆಯಬೇಕಾದರೆ ವೈಜ್ಞಾನಿಕ ವಿಶೇಷತೆ ಎಂಬುದು ಇರಬೇಕು. ಲೋಕದಲ್ಲಿ ಅದೆಷ್ಟು ಕವಿಗಳು ಶೃಂಗಾರರಸಮಗ್ನರಾಗಿ ಪ್ರೇಮವಾಣಿಗಳನ್ನು ಹೆಣೆಯಲು ಹೋಗಿ ಸಾರ್ಥಕ ಗೊಳ್ಳದೆ ಕತ್ತಲಲ್ಲಿ ಹೊರಳಾಡುವರು! ಅದಕ್ಕೆ ತತ್ವತಃ ಪ್ರತ್ಯೇಕ ನೈಪುಣ್ಯವನ್ನು ಗಳಿಸಬೇಕೆಂದರೆ ಸುಲಭವಲ್ಲ. ಅವು ಹೃದಯಾಂತರಾಳದಿಂದ ಉಕ್ಕತಕ್ಕಂಥಾ ಒಂದು ಅಮೋಘವಾದ ಹಾಗೂ ಅಮೃತತುಲ್ಯವಾದ ಗಾನರಸವಾಗಿದೆ. ಇದಕ್ಕೆ ತಕ್ಕಂಥಾ ಒಂದು ಪುಟ್ಟ ಉದಾಹರಣೆಯನ್ನು ನಮ್ಮ ಕೊಡವ ಹಾಡಿನಿಂದ ಎತ್ತಿ ಹಾಕುವೆವು.

ಕನ್ಯಾರ್ಥಿಯಾಗಿ ಹೋದ ಓರ್ವ ಯುವಕನು ತನಗೆ ತಕ್ಕುದಾದ ಒಂದು ಮನಸ್ಥಾನದ ಕೀರ್ತಿಯನ್ನು ಕೇಳಿ ಅಲ್ಲಿಗೆ ಹೋಗುವನು. ಅಷ್ಟರಲ್ಲಿ ಆ

ಮನೆಯೊಳಗೆ ಯಾರನ್ನೂ ಕಾಣಲಿಕ್ಕೆ ಸಿಕ್ಕದೆ ಈ ಯುವಕನೊಬ್ಬನೇ ಆಲೋಚಿಸುತ್ತಾ ಹೊರಗೆ ಎಲೆಮರದಲ್ಲಿ ಕುಳಿತುಕೊಳ್ಳುವನು. ಅಷ್ಟಕ್ಕೆ ನಾಯಿ ಬೊಗಳಿದ ಶಬ್ದಕ್ಕೆ ಮನೆಯೊಳಗಿಂದ ಓರ್ವ ತರುಣಿಯು ಮೆಲ್ಲಗೆ ಒಳಗಿನಿಂದಲೇ ಇಣಿಕಿ ನೋಡಿ ಕನ್ಯಾರ್ಥಿಯಾಗಿ ಬಂದ ಯುವಕನೆಂದು ತನ್ನ ಸ್ತ್ರೀ ಸಹಜವಾದ ಚಾತುರ್ಯದಿಂದ ಗೊತ್ತುಮಾಡಿ ಒಳಗೆ ಇದ್ದ ಒಂದು ಚಿಕ್ಕ ಕನ್ನಡಿ ಕಿಟಿಕಿಯ ಮುಖಾಂತರವಾಗಿ ಹೊರಗೆ ಕೂತಿದ್ದ ಈ ಯುವಕನ ರೂಪವನ್ನು ನೋಡಿಕೊಂಡು ಮನಸ್ಸಿನಲ್ಲಿಯೇ ಕಳವಳ ಪಡುವಳು. ಅಲ್ಲಾವುದ್ದೀನನು ಪದ್ಮಿನಿಯನ್ನು ನೋಡಿದ ದೃಶ್ಯವನ್ನು ಮಾತ್ರ ಜ್ಞಾಪಕಕ್ಕೆ ತಂದುಕೊಳ್ಳಬೇಕಾಗುವದು. ಈ ಯುವಕನ ಇರವ ಸ್ಥಿತಿಯನ್ನು ಚೆನ್ನಾಗಿ ನೋಡಿಕೊಂಡು ಚತುರೆಯಾದ ಈ ತರುಣಿಯು, 'ಎಳ್ಳೋಳ ಕೊರುವಿಲ್ಲೆ; ಕ್ಟ್ಟ್ಟ್ಚೇಂಗಿ ಕೂಡಲು,' ಎಂದು ಹೇಳಿಕೊಳ್ಳುವಳು, ಅನಂತರ ಒಳಗೆ ಹೋಗಿ ಪುನಃ ಚಂಚಲವೇಗದಿಂದ ಹಿಂದೂ ಪದ್ಧತಿಯಂತೆ ಒಂದು ಚೆಂಬು ನೀರನ್ನು ಬಂದ ಅತಿಥಿಗೆಂದು ಹೊರಗೆ ತೆಗೆದುಕೊಂಡು ಹೋಗಿ ಇಡುವಳು. ಈ ತರುಣಿಯ ಮುಖಾವಲೋಕನದಿಂದ ಸಂತೃಪ್ತನಾದ, ಹೊರಗೆ ಕೂತಿದ್ದ ಆ ಯುವಕನು ತನಗೆ ದಾರಿಯಲ್ಲಿ ಒಬ್ಬ ಅಪರಿಚಿತನು, 'ಇದೇ ಮನೆಗೆ ಹೋಗು' ಎಂದು ಮೊದಲಾಗಿ ಸೂಚನೆ ಕೊಟ್ಟದ್ದು ಯಥಾರ್ಥವೆಂದು ಆಲೋಚಿಸಿಕೊಂಡು, 'ಚೇಲನಲ್ಲ ಮಾಜೆನೀಗಿ, ಎಣ್ಣನದ್ ನೇರನ್ನೆ!' ಎಂದು ಆಶ್ಚರ್ಯಪಟ್ಟುಕೊಳ್ಳುವನು. ಹೀಗೆ ಈ ತರುಣ ತರುಣಿಯರಲ್ಲಿ ಪ್ರೇಮಾಂಕುರವಾಗುವ ಪ್ರಸಂಗವು ಮತ್ತು ಆ ಸನ್ನಿವೇಶವು ಅದೆಷ್ಟು ರಮಣೀಯವಾಗಿದೆ! ಈ ಯುವಕನು ತನಗಾಗಿ ಇಟ್ಟಿದ್ದ ನೀರಿನಿಂದ ಕಾಲು ತೊಳೆಯದೇ ಇರಲು, ಈ ತರುಣಿಯು ಲಜ್ಜಾವದನಳಾಗಿ ಪಕ್ಕನೆ ಹೊರಗೆ ಬಂದು ಕಾಲು ತೊಳೆಯಲಿಕ್ಕೆಂದು ಸೂಚನೆ ಕೊಡಲು ಆ ಯುವಕನಾದರೋ:–

ಉಯಿ! ಅಂದಕ ಪೊಂಗಳೆ, ಎಂದೂ ನೀರ್ ಬೆಪ್ಪೇಂಗಿ,
ಇಂದ್ ನೀರ್ ಬೆಚ್ಚೊಲೆ; ಬೆಚ್ಚನೀಲೆಡ್ ಪಿನೋ.

ಎಂದು ಹೇಳಲು ಕಂಪಿತ ಹೃದಯ ಮನಸ್ಕಳಾಗಿ ಜೇಡಿಕೆಯ ಬೊಗಸೆಯ ಮೇಲೆ ಪ್ರೇಮಾಮೃತವನ್ನು ಸುರಿಯುವ ಆ ಕೊಡವ ತರುಣಿಯ ಪ್ರತ್ಯುತ್ತರದ ಸಾಮ್ಯವನ್ನು ನೋಡಿ:–

ಉಯಿ! ಅಂದಕ ಬೆಂಡುವೆ! ಎಂದೂ ನಿಂಗ ಬಂದಿನೊ;
ಇಂದ್ ಬಂದ ನಿಂಗಳೊ; ಎಂದೂ ನೀರ್ ಬೆಪ್ಪಿನೊ.

ಎಂದು ಹೇಳಲು ಈರ್ವರಲ್ಲಿಯೂ ಇದ್ದ ಆಶಾಜ್ಯೋತಿಗೆ ಶುಭ್ರ ತೈಲವನ್ನೆರೆದಂತಾಯಿತು. ಎಂಥಾ ಒಂದು ಸುಸಂದರ್ಭ! ತಂದೆ ತಾಯಿಗಳಿಲ್ಲ! ಕೇವಲ ತರುಣ ತರುಣಿಯರೀರ್ವರೇ ತಮ್ಮ ಪ್ರಣಯಗಾನವನ್ನು ಮನಃಪೂರ್ವಕವಾಗಿ ಹಾಡಿಕೊಂಡ ನಂತರ ಈ ತರುಣಿಯು ಅವನಿಗೆ ತಕ್ಕ ರೀತಿಯಲ್ಲಿ ಅತಿಥಿ ಸತ್ಕಾರವನ್ನು ಮಾಡುವಳು. ಅಷ್ಟರಲ್ಲಿ ತಂದೆ ತಾಯಿಗಳು ಬರುವರು. ಈ ಎಲ್ಲಾ ವಿಷಯಗಳನ್ನು ಅವರು ತಿಳಿದು, ಇವರ ಆಶೆಗೆ ವಿರುದ್ಧವಾಗುವ ಅಸಂಸ್ಕೃತ ನೀತಿಯನ್ನು ಉಪಯೋಗಿಸದೆ ತಕ್ಕ ನ್ಯಾಯವನ್ನು ಅವಲಂಬಿಸಿ ಕನ್ಯಾಧಾರೆಯನ್ನು ಎರೆಯಲು ನೋಡುವರು. ಈ ಪ್ರಸಂಗವು ಕೊಡವ ಮದುವೆ ಹಾಡಿನಲ್ಲಿ ಮನೋಹರವಾಗಿ ಚಿತ್ರಿಸಲ್ಪಟ್ಟಿದೆ.

ಅಲ್ಲದೆ ಹಳ್ಳಿ ಹಳ್ಳಿಗಳಲ್ಲಿ ಕಾಣುವ ಜನಜೀವನದಲ್ಲಿ ವೈದಿಕ ಅಥವಾ ಕರ್ಣಾಟಕ ಸಂಸ್ಕೃತಿಗಳ ಛಾಯೆಯು ಎಷ್ಟರ ಮಟ್ಟಿಗೆ ಕಾಣಿಸಿಕೊಳ್ಳುತ್ತಿದೆಯೆಂಬುದನ್ನು ಪ್ರತ್ಯೇಕವಾಗಿ ಆಲೋಚಿಸೋಣ. ಕೊಡಗು ದೇಶದ ಪೂರ್ವಕಾಲದ ವಿಸ್ತಾರ, ಆಗಿನ ಆಳ್ವಿಕೆ, ಆಗಿನ ಜನತೆ, ಆಗಿನ ಕಲಾಸಂಸ್ಕೃತಿಗಳ ಸಂಪೂರ್ಣ ಸಾರವನ್ನು ಈಗ ಸ್ವಚ್ಛವಾಗಿ ಶೋಧಿಸಲಸಾಧ್ಯವಾಗಿದ್ದರೂ ಸಾಧಾರಣ ಮಟ್ಟಿಗೆ ಹೇಳುವದಿದ್ದರೆ ಚರ್ವಿತ ಚರ್ವಣವಾಗಿ ವಿಷಯಗಳು ಬರಬಹುದು. 'ಪನ್ನೆರಂಡ್ ಕೊಂಬಾಯಿ, ಈ ದೇಶ ಪವ್ರತತ್,' ಎಂದು ಹೇಳಿದ್ದಾರೆ. ಹನ್ನೆರಡು ಕೊಂಬು ಅಥವಾ ಭಾಗಗಳಾಗಿ ವಿಭಾಗಿಸಿದ ಕೊಡಗು ದೇಶವನ್ನು ಮುಖ್ಯವಾಗಿ ಎರಡು ಭಾಗವಾಗಿ ಮಾಡಿದರು. ಅದರ ವಿವರಣೆಯನ್ನು ಈ ರೀತಿಯಾಗಿ ಕೊಟ್ಟಿರುವರು.

ಕಾವೇರಿ ಕೊಂಡಾಕರೆ,
ಗುದ್ದ್‌ನ ಕಲಪ್ರೋಲೆ,
ಗುದ್ದಗುದ್ದ ನಾಡೋನ್;
ಕೆಂಗಳನೆ ಕ್‌ಗ್ಗಟ್ಟ್.

ಕಾವೇರಿ ಕೊಂಡೀಕರೆ,
ಬೊಳ್ಳೋಟೆ ನೆಡಿಪ್ರೋಲೆ,
ಪಾಬೊಳಿಯ ಮೇಂದಲೆ.

ಎಂದು ಕಾವೇರಿ ನದಿಯ ದಕ್ಷಿಣಕ್ಕೆ ಕೆಳಗಿನ + ಕಟ್ಟು; ಕಿಕ್ಕಟ್ಟು ಅಥವಾ 'ಕಿಗ್ಗಟ್ಟು' ನಾಡು ಎಂಬುದಾಗಿಯೂ, ಕಾವೇರಿ ನದಿಯ ಮೇಲಿನ ಭಾಗಕ್ಕೆ ಮೇಲಿನ + ತಲೆ; ಮೇಲ್ತಲೆ ಅಥವಾ 'ಮೇಂದಲೆ' ನಾಡು ಎಂಬುದಾಗಿಯೂ ಕರೆದರು. ಅಲ್ಲದೆ ಉಪ ನಾಡುಗಳಾಗಿ ಮೂವತ್ತೈದು ನಾಡುಗಳನ್ನು ನಿರ್ಮಿಸಿದ್ದರೆಂದು ತಿಳಿದುಬರುತ್ತದೆ. ಹಾಗಾದರೆ ಪ್ರತಿಯೊಂದು ಊರಿನಲ್ಲೂ ಯಾವ

ರೀತಿಯಲ್ಲಿ ಸಮಸ್ಯೆಗಳು ನೆರವೇರಿಸಲ್ಪಡುತ್ತಿದ್ದುವು ಎಂದರೆ ಪ್ರಾಚೀನ ಭಾರತೀಯ ರಾಜನೀತಿಯನ್ನೇ ಅನುಸರಿಸುತ್ತಿದ್ದರೆಂದು ಹೇಳಬೇಕಾಗಿದೆ. 'ತಕ್ಕ' ಎಂದರೆ ಒಂದೊಂದು ನಾಡಿನ ಮುಖ್ಯಸ್ಥನು. ಯಾವುದೊಂದು ಕೆಲಸ ಮಾಡಬೇಕಾದರೂ ಅವನ ಆಜ್ಞಾಧಾರಣವಾಗಬೇಕು. ತಕ್ಕರ ಮನಸ್ಥಾನವು ವಿಶೇಷವಾದ ಗೌರವಕ್ಕೆ ಒಳಗಾಗಿರುತ್ತದೆ. ಊರೂರುಗಳಲ್ಲಾಗುವ ಅಂತಃಕಲಹಗಳನ್ನು ತಕ್ಕರು ನ್ಯಾಯಾಧಿಪತಿಗಳಂತೆ ಎರಡೆರಡು ಸಮಂಜಸವಾದ ಹಿತವಾದಗಳಿಂದ ಮುಗಿಸುವರು. ಗ್ರಾಮದ ಅಥವಾ ಊರಿನ ಎಲ್ಲಾ ಅಂತಃಕಲಹಗಳನ್ನು ತಿದ್ದುವುದಾಗಲೀ, ಹೊಸ ಏರ್ಪಾಡುಗಳನ್ನು ಮಾಡುವುದಾಗಲೀ ಇದ್ದರೆ ಅಥವಾ ಹೊಸ ತೀರ್ಮಾನ, ಸಭೆ ಇತ್ಯಾದಿಗಳನ್ನು ಜರುಗಿಸಬೇಕಾದರೆ ಒಂದೊಂದು ನಾಡಿನಲ್ಲಿ ಮತ್ತು ಊರಿನಲ್ಲಿ 'ಅಂಬಲ'ಗಳಿರುತ್ತವೆ. ಅಲ್ಲಿ ತಕ್ಕರಿಗೆ ರಾಜಪೀಠದಂಥಾ ಆಸನ. ಎಲ್ಲಾ ಕಡೆಗಳಿಂದಲೂ ಸನ್ಮಾನವು ಅವನಿಗೇ ಮುಂಚೆ. ಈಗಿನಂತೆ ಬೆಂಚುಕೋರ್ಟು, ಪಂಚಾಯಿತ ಕೋರ್ಟು, ಮುನ್ಸೀಫ್ ಕೋರ್ಟು, ಮ್ಯಾಜಿಸ್ಟ್ರೇಟರ ಕೋರ್ಟುಗಳು ಆಗ ಇರಲಿಲ್ಲ. ಚಂದ್ರಗುಪ್ತ ಚಕ್ರವರ್ತಿಯ ಕಾಲವಲ್ಲಿದ್ದ ಹಿಂದೂಸ್ಥಾನ, ಹುಯೂನ್ ತ್ಸಾಂಗನು ಹೇಳಿದಂತೆ, ಹರ್ಷ ಚಕ್ರವರ್ತಿಯ ಕಾಲದ ಹಿಂದೂಸ್ಥಾನ ಹೇಗಿತ್ತೆಂದರೆ ನಮ್ಮ ಕೊಡವ ರಾಜಕೀಯ ಸಂಸ್ಕೃತಿಯು ಒಂದು ಚಿಕ್ಕ ಉದಾಹರಣೆಯನ್ನು ಅಲ್ಲಿಗೆ ನಿವೇದಿಸಬಹುದು. ಆರ್ಯ ಜೀವನದಿಂದ ಕೊಡವ ಜೀವನವು ಬಹು ದೂರವಿರಲಿಲ್ಲ. ಹಿಂದಿನ ತಕ್ಕರ ಮನಸ್ಥಾನವು ಈಗ ಕೆಲವು ಇವೆ; ಕೆಲವು ಅಳಿದಿವೆಯೆಂದರೂ ಅದೊಂದು ಭಕ್ತಿ ಅಥವಾ ಗೌರವವು ಈಗಲೂ ಆ ಹೆಸರು ಕೇಳಿದಾಕ್ಷಣಕ್ಕೆ ನಮಗೆ ಉಂಟಾಗುವದು. ಕಳ್ಳಿಯು ಬೊಳ್ಳಿಯು, ಮಾತನು ಬಡುವನು, ಪಾಂಡಿಯು ಪರದನು, ಪೂರಿಯು ಪರುವನು; ಎಂದು ತಕ್ಕರ ಮನೆಯ ಹೆಸರುಗಳನ್ನು ದ್ವಂದ್ವ ಪದಗಳಿಂದ ಹೇಳುವರು. ಇವರು ತಮ್ಮ ತಮ್ಮ ಸ್ಥಾನದ ಪ್ರತಿಯೊಂದು ಶುಭಕಾರ್ಯೋತ್ಸವಗಳಿಗೂ ಮಾರ್ಗದರ್ಶಿಗಳಾಗಿರುವರು. ಇವರ ಮೂಲಕವೇ ಗ್ರಾಮದ ಅಥವಾ ನಾಡಿನ ವಿಶೇಷ ವರದಿಗಳು ಅರಸರಿಗೆ ಮುಟ್ಟುತ್ತಿದ್ದವು. ಅಲ್ಲದೆ ಹಿಂದಿನ ಕಾಲದಲ್ಲಿ ರಾಜನ ಏನಾದರೂ ರಾಜ್ಯಾಡಳಿತ ನೌಕರಿಗಳೂ ಅಥವಾ ಇನ್ನಿತರ ಸಂದರ್ಭಗಳಲ್ಲಿ 'ಅರಮನೆ ಚಾಕರಿ' ಎಂಬ ಕೆಲಸಗಳಿಗೂ ಪ್ರತಿಯೊಂದು ಕುಟುಂಬದಿಂದ ಒಬ್ಬೊಬ್ಬನನ್ನಾದರೂ ಕಳುಹಿಸುತ್ತಿದ್ದರು. ಹಬ್ಬಗಳನ್ನೆಲ್ಲಾ ವಿಶೇಷ ವಿಜೃಂಭಣೆಯಿಂದ ನೆರವೇರಿಸುತ್ತಿದ್ದರು. ತಮ್ಮ ಎಂಥ ವ್ಯಾಜ್ಯಗಳಿದ್ದರೂ ಪ್ರತಿ ಕುಟುಂಬದವನೂ ಅಲ್ಲಿ ಭಾಗವಹಿಸಿ ಅವರಲ್ಲಿದ್ದ ಕಲಹಗಳನ್ನೆಲ್ಲ ತೀರಿಸಿಕೊಂಡು, ಸರ್ವರೂ ಐಕ್ಯತೆಯಿಂದ ಒಂದುಗೂಡಿ ನಲಿಯುವುದು ಆಗಿನ

ಸಂಪ್ರದಾಯವಾಗಿತ್ತು. ಇದರ ಪರಿಣಾಮವಾಗಿ ಎಲ್ಲ ನಾಡಿನವರ ಅನುಕೂಲತೆಗನುವಾಗುವಂತೆ ಮತ್ತು ಪರಸ್ಪರ ಜನ ಮಿಲನವಾಗುವ ಸಂದರ್ಭದಂತೆ, ಬೇರೆ ಬೇರೆ ನಾಡಿನವರು ಬೇರೆ ಬೇರೆ ದಿವಸ ಇಂಥಾ ಹಬ್ಬ ಇತ್ಯಾದಿಗಳನ್ನು ಆಚರಿಸುವ ರೂಢಿಯೂ ಉಂಟಾಯಿತು. ಅಲ್ಲದೆ ನಿತ್ಯ ಕಾರ್ಯಗಳು ಶಾಸ್ತ್ರೋಕ್ತವಾಗಿ ನಡೆಯಬೇಕೆಂಬ ಕಟ್ಟಾಜ್ಞೆಯೂ, ಮೀರಿ ನಡೆದವರಿಗೆ ಕಠಿಣ ಶಿಕ್ಷೆಯ ವಿಧಿಯೂ ಇದ್ದುವು. ಅರಸನೂ, ಇತರ ಅಧಿಕಾರ ವರ್ಗವೂ ತಮ್ಮ ನಿತ್ಯಾಚರಣೆಯ ವಿಷಯವಾಗಿ ವಿಶೇಷ ಜಾಗರೂಕತೆಯಿಂದರುತ್ತಿದ್ದರು. ಅದರಲ್ಲೂ ವೀರಶೈವರು ತಮ್ಮ ಪೂಜಾ ವಿಧಿಯನ್ನು ವಿಶೇಷ ಶ್ರದ್ಧೆಯಿಂದ ಸಾಗಿಸುತ್ತಿದ್ದರು. ಇದಕ್ಕೆ ಉದಾಹರಣೆಗಾಗಿ ಲಿಂಗರಾಜರ ವಿಷಯವಾಗಿ ಒಂದು ಚಿಲೋ ಹೇಳಿಕೆಯಿದೆ. ಲಿಂಗರಾಜನು ಬೆಳಿಗ್ಯೆ ಸದಾ ನಾಲ್ಕು ಗಂಟೆಗೆ ಎದ್ದು ಶಿವಪೂಜೆ ಮಾಡುವದೂ, ಶಿವಸ್ತುತಿ ಹಾಡುವುದೂ ಇತ್ಯಾದಿ ಕರ್ಮಗಳನ್ನು ಕ್ರಮಪ್ರಕಾರ ನಡೆಸುತ್ತಿದ್ದನಂತೆ. ಕಾಲಕ್ಕೆ ಸರಿಯಾಗಿ ಎದ್ದೇಳಲನುಕೂಲವಾಗುವಂತೆ ಎರಡು ಆನೆಗಳನ್ನು ಬಹು ದೂರದಿಂದ ತರಿಸಿ, ಅವುಗಳಿಗೆ ಬೆಳಿಗ್ಯೆ ಸಮಯಕ್ಕೆ ಸರಿಯಾಗಿ ಕೂಗಿ ಎಬ್ಬಿಸುವಂತೆ ತರಬೇತು ಮಾಡಿಸಿದ್ದನು. ಆ ಆನೆಗಳೂ ಅದೇ ರೀತಿ ಇವನನ್ನು ಸಮಯಕ್ಕೆ ಸರಿಯಾಗಿ ಕಹಳೆಯಂತೆ ಕೂಗಿ ಎಬ್ಬಿಸುತ್ತಾ ಎಲ್ಲಾ ವಿಧದಲ್ಲೂ ರಾಜನ ಪ್ರೇಮಕ್ಕೆ ಪಾತ್ರವಾಗಿದ್ದವು. ರಾಜನಿಗೂ ಆ ಆನೆಗಳೆಂದರೆ ಪ್ರಾಣ. ಅವುಗಳನ್ನು ಮಕ್ಕಳಂತೆ ಸಾಕುತ್ತಿದ್ದನು. ತನ್ನ ಕೋಣೆಯ ಸಮೀಪ ಹೊರಪಾರ್ಶ್ವದ ಕಿಟಕಿಯ ಬದಿಯಲ್ಲಿ ಅವುಗಳನ್ನು ಸಾಕುತ್ತಾ ನೋಡಿಕೊಳ್ಳುತ್ತಿದ್ದನು. ಹೀಗಿರಲು ಒಂದು ದಿನ ಬೆಳಿಗ್ಯೆ ರಾಜನು ತನ್ನನ್ನು ಎಬ್ಬಿಸಬೇಡಿರೆಂದು ಮುಂಚಿತವಾಗಿ ಆಜ್ಞಾಪಿಸಿದ್ದನು. ಈ ರಾಜಾಜ್ಞೆಯು ಆ ಆನೆಗಳನ್ನು ನೋಡುವ ಮಾಹುತನಿಗೆ ಸಿಕ್ಕದ್ದರಿಂದ ಈ ಆನೆಗಳು ಎಂದಿನಂತೆ ಕೂಗಿದವು. ರಾಜನಿಗೆ ಆ ದಿನ ಅಸ್ವಸ್ಥತೆ ಕಾರಣದಿಂದ ಕೂಗಿಸಬೇಡವೆಂದಿದ್ದರೂ, ಈ ಆನೆಗಳ ಸ್ವರಕ್ಕೆ ಎಚ್ಚರವಾಗಿ ನಿದ್ರಾಭಂಗವನ್ನು ಹೊಂದಿದನು. ಅರಸನು ಫಕ್ಕನೆ ಸಿಟ್ಟಿನಿಂದ ಆ ಆನೆಗಳನ್ನು ಕೊಲ್ಲಲು ಆಜ್ಞಾಪಿಸಿದನು. ಮರುದಿನ ಇವನನ್ನು ಎಬ್ಬಿಸಲು ಮತ್ತು ಶಿವಧ್ಯಾನ ಇತ್ಯಾದಿ ಕಾರ್ಯಗಳನ್ನು ನಡೆಸಲು ತೊಂದರೆಯಾಯಿತು. ಅಷ್ಟು ಪ್ರೀತಿಯಿಂದ ಸಾಕಿಕೊಂಡಿದ್ದ ಆನೆಗಳನ್ನು ನೆನೆದು ನೆನೆದು ದುಃಖಿಸಿದನು. ತನ್ನ ದುಡುಕಿಗೂ, ಕ್ರೋಧಕ್ಕೂ ಪಶ್ಚಾತ್ತಾಪಪಟ್ಟುಕೊಂಡನು. ತನ್ನ ಎರಡು ಕೈಗಳನ್ನೇ ಕಳಕೊಂಡಂತೆ ಆಯಿತೆಂದು ಅಂದುಕೊಂಡನು. ಅನಂತರ ಆ ಆನೆಗಳ ಸ್ಮಾರಕವಾಗಿ ಮತ್ತು ತನ್ನ ಪಶ್ಚಾತ್ತಾಪವನ್ನು ನಿವೇದಿಸಲಿಕ್ಕಾಗಿ ತನ್ನ ಅರಮನೆಯ ಮುಂದೆ ಅವುಗಳ ಪ್ರತಿಮೆ

ಗಳನ್ನು ಇಡುವಂತೆ ಆಜ್ಞಾಪಿಸಿ ಇಡಿಸಿದನು. ಅವುಗಳು ಇಂದಿಗೂ ಅಚ್ಚಳಿಯದೆ ದಿವ್ಯತಮವಾಗಿ ಶೋಭಿಸುತ್ತವೆ. ಕೊಡಗು ರಾಜರು ನಿರಂಕುಶಶೀಲರಾಗಿ ವರ್ತಿಸಿದುದರಿಂದ ಇಂಥಾ ಕ್ರೌರ್ಯ ಸಾಹಸಗಳನ್ನು ಅನೇಕಾವರ್ತಿ ಮಾಡಿದ ವಿಚಿತ್ರ ಕಥೆಗಳು ಬೇಕಾದಷ್ಟಿವೆ. ಉದಾಹರಣೆಗೆಂದು ಇದೊಂದನ್ನು ಮೇಲೆ ಕೊಟ್ಟೆವು.

ಸಂತೃಪ್ತಿ ಜೀವನವೇ ಎಲ್ಲದಕ್ಕೂ ಮುಖ್ಯವೆಂದಮೇಲೆ ಪೂರ್ವದಲ್ಲಿ ಅದಕ್ಕೆ ಕೊರತೆಯೇನೂ ಇರಲಿಲ್ಲ. ಎಲ್ಲೆಲ್ಲೂ ಐಶ್ವರ್ಯ, ಆರೋಗ್ಯ ಸಮೃದ್ಧಿಯಾಗಿ ಇದ್ದ ಮೇಲೆ ಇನ್ನಾವುದರಲ್ಲೂ ಜನತೆಗೆ ಬೇಸರವೆಂಬುದಿರಲಿಲ್ಲ. ಗ್ರಾಮ ಗ್ರಾಮಗಳಲ್ಲಿ ಎಲ್ಲಾ ಜನರಿಗೂ ತಕ್ಕ ಅನುಕೂಲಗಳುಂಟಾಗುವ ಹಾಗೆ ತಕ್ಕ ವ್ಯವಸ್ಥೆಗಳನ್ನು ಮಾಡಿದ್ದರು. ಒಂದು ಚಿಕ್ಕ ಉದಾಹರಣೆಯನ್ನು ವಾಚಕರ ಅವಗಾಹನೆಗಾಗಿ ಕೊಡುವೆವು.

ನುಪ್ಪತ್ತ್ಂಜಿ ನಾಡ್ಲ್,	**ನುಪ್ಪತ್ತ್ಂಜಿ ಪಾಕೆರೆ.**
'ತಕ್ಕಪ್ಪೋಯೆಳಪಕ್;	**ಚಿಕ್ಕಬಂದ ಚೋಮಂಗ್;**
ನುಪ್ಪತ್ತ್ಂಜಿ ಅಂಬ್ಲ'	**ನೀಕುಡಿ ಕುಡಿಪಕ್;**
ದೇಬುವ ಕುಳಿಪಕ್,	**ನುಪ್ಪತ್ತ್ಂಜಿ ನೀಕೆರೆ.**

ಎಂಬುದಾಗಿ ವೈಭವದ ಪರಮಾವಧಿಯನ್ನೂ, ನೆಮ್ಮದಿಯ ತೃಪ್ತತೆಯನ್ನೂ ಸೂಚಿಸುವ ಹಾಡುಗಳು ಉಲ್ಲೇಖಿಸಲ್ಪಟ್ಟಿವೆ. ತಕ್ಕರಲ್ಲಿ ದೇಶತಕ್ಕ, ನಾಡುತಕ್ಕ, ಊರುತಕ್ಕ ಎಂದು ಹಲವು ವಿಭಗಳಿವೆ. ಅವರವರ ಸ್ಥಿತಿಗನುಸಾರವಾಗಿ ಅಧಿಕಾರವನ್ನು ಕೊಟ್ಟಿರುತ್ತಾರೆ. ದೇಶತಕ್ಕ ಎಂದರೆ ಇಡೀ ದೇಶದ ಆಳ್ವಿಕೆಯ ವಿಚಾರ, ಶಿಸ್ತುಪಾಲನೆ, ಕಾನೂನು ಚಲಾವಣೆಗಳಿಗೆ ಜವಾಬ್ದಾರರಾಗಿರುತ್ತಾರೆ. ಇದು ಹಿಂದೆ ಕೊಡಗಿನಲ್ಲಿ ಮಾತ್ರವಲ್ಲ, ಎಲ್ಲಾ ದೇಶಗಳಲ್ಲೂ ಈ ರೀತಿಯ ವ್ಯವಸ್ಥೆಗಳಿದ್ದುವು. ಇದೇ ತಕ್ಕರಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಗುರಿಕಾರ'ನೆಂತಲೂ, ಮೈಸೂರು ದೇಶದಲ್ಲಿ 'ಯಜಮಾನ'ನೆಂತಲೂ, ಮಲೆಯಾಳ ಸೀಮೆಯಲ್ಲಿ 'ಮೂತಣ್ಣ'ನೆಂತಲೂ ಹೇಳುವರು. ತಕ್ಕರು ದೇಶದ ನೆಮ್ಮದಿಗೆ ಎಷ್ಟು ಜವಾಬ್ದಾರರಾಗಿದ್ದರೋ ಅಷ್ಟೇ ಮಟ್ಟಿಗೆ ಊರಿನ, ಯಾ ಗ್ರಾಮದ, ಹಿರಿಯನು, ಮನೆಯ ಯಜಮಾನ (ಕೊರೋಕಾರ), ಊರಿನ ಪ್ರಾಯಪ್ರಬುದ್ಧರಾದ ಹಳಬರೂ ಜವಾಬ್ದಾರರಾಗಿದ್ದರು. ತಾವೊಬ್ಬರೇ ಜೀವಿಸಿದರೆ ಪ್ರಯೋಜನವಿಲ್ಲೆಂದೂ, ಊರಿನ, ನಾಡಿನ, ದೇಶದ ಎಲ್ಲಾ ಜನರೂ ಒಂದೇ ರೀತಿಯಲ್ಲಿ ತೃಪ್ತತೆಯ ಜೀವನದಿಂದ ಬಾಳಬೇಕೆಂಬ ವಿಶಾಲಬುದ್ಧಿಯನ್ನಿತ್ತು ಕಾರ್ಯವನ್ನು ನಿರ್ವಹಿಸುತ್ತಿದ್ದರು. ಸ್ವಾರ್ಥ

ತೆಯೆಂಬುದರ ಸುಳಿವೇ ಆಗ ಇರಲಿಲ್ಲ. ಆದ್ದರಿಂದ ಜನರು ಹೆಚ್ಚಿನ ಗೌರವ ಮತ್ತು ಅಭಿಮಾನಕ್ಕೆ ಪಾತ್ರರಾಗಿರುತ್ತಿದ್ದರು. 'ತಕ್ಕಂಡ ಕುಞ್ಞನ ತೆಕ್ಕಿ ಕಾಂಗುಡು' ಎಂಬುದಾಗಿ ಇದಕ್ಕಾಗಿಯೇ ಹೇಳುತ್ತಿದ್ದರು. ಪ್ರತ್ಯೇಕವಾಗಿ ತಮ್ಮ ವ್ಯವಹಾರ ಗಳನ್ನು ನಿರ್ವಹಿಸಿಕೊಳ್ಳುತ್ತಾ ಇನ್ನೊಬ್ಬರ ಸುಖವನ್ನು ಕೋರುತ್ತಾ ತಮ್ಮ ಜೀವ ನೋಪಾಯವನ್ನು ಸಾಗಿಸುತ್ತಿದ್ದರು.

ಹಿಂದೆ ಸೂಚಿಸಿದಂತೆ ಕನ್ಯಾರ್ಥಿಯಾಗಿ ಹೋಗಿದ್ದ ಯುವಕನು ತನ್ನ ಪ್ರಿಯೆಯ ಮನೆಗೆ ಪ್ರಥಮ ಬಾರಿಗೆ ಹೋಗಿದ್ದಾಗ ಆ ಮನೆಯಲ್ಲಿ ಯಾರು ಇಲ್ಲದಿ ರಲು ಅವರಿಬ್ಬರಲ್ಲಿ ತುಂಬಾ ಪ್ರಸ್ತಾಪವು ಬಹು ಹೊತ್ತು ಹಿಂದೆಯೇ ಹೇಳಿದಂತೆ ನಡೆದ ಬಳಿಕ, ಆ ತರುಣನು ಅವಳನ್ನು ಕುರಿತು:–

ಉಯಿ; ಎನ್ನಡ ಪೊಂಗಳೆ,
ನಿನ್ನಡಪ್ಪ ಪೊನ್ನಪ್ಪ,
ಎನ್ನಡೋರ್ ಮಾಂವಯ್ಯ,
ಏದ್ ದಿಕ್ ಪೋನದೊ?

ಎಂದು ಕೇಳಲು ಆ ತರುಣಿಯು ಈ ರೀತಿಯಾಗಿ ಉತ್ತರವನ್ನು ಕೊಡುವಳು:–

ಎನ್ನಡಪ್ಪ ಪೊನ್ನಪ್ಪ,
ಊರ್‌ಕೇರಿ ಬಾಲಡ;
ಬುದ್ಧ ಞಾಯತ್‌ಪಕ್,
ಊರ್ ಮಿಞಾ ಅಂಬ್‌ಲ
ಅಂಬ್‌ಲಕ್ ಪೋಯಿತ್.

ಇದರಿಂದ ಆಗಿನ ಹಳಬರು ಯಾವ ರೀತಿಯಲ್ಲಿ ತಮ್ಮ ನೆರೆಯವರ ಕಲಹಕಕ್ಷಿಗಳಲ್ಲಿ ಭಾಗಿಗಳಾಗಿ ತೀರಿಸುತ್ತಿದ್ದರೆಂದು ವ್ಯಕ್ತವಾಗುವುದು. ಅಲ್ಲಿಂದ ಅವನ ತಾಯಿಯು ಎಲ್ಲಿಗೆ ಹೋಗಿರುವಳೆಂದು ವಿಚಾರಿಸಲು, ಕುಂಬಾರಕೇರಿಗೆ ಮಡಿಕೆ ತರಲು ಹೋಗಿ ರುವಳೆಂದು ಹೇಳುವಳು. ಅನಂತರ ಅವನು, ಅವಳನ್ನು ತನ್ನ ಅಣ್ಣನು ಎಲ್ಲಿಗೆ ಹೋಗಿರುವನೆಂದು ಕೇಳಲು, ಅವಳು ಮುಚ್ಚುಮರೆಯಿಲ್ಲದೆ, ಆಗಿನ ಕಾಲದ ದೈನಂದಿನ ಜೀವನವು ಎಂಥಾ ಮಾನೋನ್ನತವಾದ ಕಾರ್ಯವಾಗಿತ್ತೆಂದು ತಿಳಿಸು ಸುವ ಹಾಗೆ:–

ಎನ್ನಡೋರ್ ಅಣ್ಣಯ್ಯ,
ನುಪ್ಪತ್ತಾರ್ ಚೋಮನ;
ಸಣ್ಣಕ್ಕಿ ನೆರತಿತ್;
ಮಾಣಿಕ ಮಲೆನಾಡ್,
ಪೊಂಬಣಕ್ ಪೋಯಿತ್.

ಎಂದು ಹೇಳುವಳು. ಹಿಂದಿನ ಕಾಲದಲ್ಲಿ ಕೊಡವರು ತಾವು ಬೆಳೆಸಿದ ಧಾನ್ಯ ಗಳನ್ನು ತಾವೇ ಎತ್ತುಗಳ ಬೆನ್ನಲ್ಲಿ ಮೂಟೆಕಟ್ಟಿ ಮಲೆಯಾಳ, ಮೈಸೂರು,

ವೈನಾಡು, ಇರ್ಕೂರುಗಳ ಕಡೆ ಸಾಗಿಸಿಕೊಂಡು ಹೋಗಿ ಮಾರುತ್ತಿದ್ದರು. ಅಲ್ಲಿಂದ ಬರುವಾಗ ತೆಂಗಿನಕಾಯಿ, ಉಪ್ಪು, ಹೊಗೆಸೊಪ್ಪು, ರಾಗಿ ಮೊದಲಾದುವುಗಳನ್ನು ಕಟ್ಟಿ ತರುತ್ತಿದ್ದರು. ಹಾಲೇರಿ ಅರಸರ ಕಾಲದಲ್ಲಿ ಆಗಾಗ ಪರರಾಷ್ಟ್ರಗಳೊಂದಿಗೆ ಕೊಡಗರು ಹೋರಾಡುವ ಪ್ರಸಂಗ ಬರುತ್ತಿದ್ದರೂ ಅವರ ನಿತ್ಯ ಜೀವನದ ಘೋರಣೆಯು ಯಥಾವಿಧಿಯಿಂದ ಸಾಗುತ್ತಿದ್ದುವು. ಆದರೆ ಸುಮಾರು ನೂರು ವರ್ಷಗಳಿಂದೀಚೆಗೆ ಜೀವನ ಕ್ರಮದಲ್ಲಿ ಒಂದು ವಿಪರೀತಾವಸ್ಥೆಯು ಕಂಡು ಬರಲು, ತ್ಯಾಗ ಜೀವನದ ಬದಲು ಸ್ವಾರ್ಥತೆಯು ತನ್ನ ಅಧಿಕಾರಕ್ಕೆ ತೊಡಗಲು, ಕೊಡಗರು ಏನೆನ್ನಲು ತೊಡಗಿದರೆಂಬುದು ಬಹು ರಮಣೀಯವಾಗಿ ಹುತ್ತರಿ ಹಾಡಿನಲ್ಲಿ ಲೇಖಿತವಾಗಿದೆ. ಕಲಿಯುಗದಲ್ಲಾಗುವ ಅನರ್ಥತೆಯ ವೈಪರೀತ್ಯವನ್ನು ಆಗ ಅನುಭವಿಸಲಿಕ್ಕೆ ತೊಡಗಿದರೆಂದು ಭಾವಿಸಬೇಕಾಗಿದೆ. ಹುತ್ತರಿ ಹಾಡಿನಲ್ಲಿ ಕಲಿಯುಗವನ್ನು ಈ ರೀತಿಯಾಗಿ ಬಣ್ಣಿಸಿದ್ದಾರೆ:–

ಕಾಲ ಕಲಿ ಜೀಯ ಲೇಲಕ್ಕ ಮಾಂವಿ ತಾಲಿ ಲೆಲ್ಲೇ ಲೆಲ್ಲೇ ಲಾ–
ಕಾಲ ಕಲಿಯುಗ ನಾನಿಕ್ಕ ಕಂಡ ”
ಮಾವುಲ್ ಚೆಕ್ಕೆ, ಪಲಚಿಲ್ ಮಾಂಗೆ ”
ಕುಂಡೋಣಿ ಕಲ್ಲೆಲ್ಲ ತೆಂಗೆ ಮುರಿಂಜ ”
ಕಾವೇರಿ ಬೊಮ್ಮಣ ಉಪ್ಪ್ ಮುರಿಂಜ ”
ಪೊಂಗ ಪಡೆಪೊಪ್ಪ ಕಣ್ಣಾರೆ ಕಂಡ ”

ಎಂದೀರೀತಿಯಾಗಿ ಹಾಡಿದ್ದು ಎಷ್ಟು ಅರ್ಥಗರ್ಭಿತವಾಗಿದೆ. ಇವುಗಳನ್ನು ಪುನಃ ಪುನಃ ಓದಬೇಕೆಂದೆನ್ನಿಸುವುದು. ಹಾಡುಗಳಲ್ಲೂ ಅನೇಕ ಭೇದಗಳಿವೆ. ಸಾಮಾನ್ಯ ಜನರ ಹೃದಯವನ್ನೂ ಸಹ ಕಲಕಬೇಕಾದರೆ ಆ ಹಾಡಿಗೆ ಒಂದು ಕವಿ ಸಹಜವಾದ ಗಾಂಭೀರ್ಯವು ಇರಬೇಕಲ್ಲವೆ? ಮೇಲಿನ ಹಾಡಿನಲ್ಲಿ ಅಂಥಾ ಒಂದು ಕಳೆಯೂ ಶಕ್ತಿಯೂ ಕೂಡಿದೆ. ಅದರ ಜತೆಯಲ್ಲಿ ಲೋಕ ನೀತಿಯ ಸ್ವಾಭಾವಿಕತೆಯೂ ಸೇರಿದೆ. ಒಟ್ಟಾಗಿ ನಾಡಿನ ಸಾಂಸ್ಕೃತಿಕ ಸ್ವರೂಪವನ್ನು ಸೆಳೆತಂದು ತೋರಿಸುತ್ತದೆ.

ಸಾಧಾರಣ ಐದನೇ ಶತಮಾನದಿಂದ ಹದಿನೈದನೇ ಶತಮಾನದ ವರೆಗೆ ಕೊಡವರ ಜೀವನ ವಿಧಾನದಲ್ಲಿ ಒಂದು ಪ್ರತ್ಯೇಕತೆಯು ನೆಲೆಸಿರಲಿಲ್ಲ. ಹದಿನೈದನೇ ಶತಮಾನದಿಂದೀಚೆಗೆ, ಎಂದರೆ ಇಕ್ಕೇರಿ ರಾಜವಂಶದವರ ಆಳ್ವಿಕೆ ಪ್ರಾರಂಭವಾದ ಮೇಲೆ ಕೊಡಗರು ಪ್ರತ್ಯೇಕವಾಗಿ ಸಂಪೂರ್ಣ ವೀರಶೈವ ಮತದ ಮೇಲ್ಪಂಕ್ತಿಯಂತೆ ಹಿಂದೂಜನ ಜೀವನ ಕ್ರಮಗಳನ್ನು ಅನುಸರಿಸುತ್ತಾ ಬಂದರು. ಹಿಂದಿನ ರಾಷ್ಟ್ರ

ಕೂಟ, ಚಾಳುಕ್ಯ, ಕದಂಬ ರಾಜವಂಶದವರ ರಕ್ತವು ಕೊಡವರ ದಮನಿಗಳಲ್ಲಿ ಹರಿಯುತ್ತಿದ್ದುದರಿಂದಲೇ ಅವರಲ್ಲಿ ಒಂದು ಪ್ರತ್ಯೇಕ ವೀರತೇಜಸ್ಸು, ಕ್ಷತ್ರಿಯ ಪೌರುಷವು ಚಾರಿತ್ರಿಕ ಆಧಾರದಂತೆ ಕಂಡು ಬರಲಿಕ್ಕೆ ಕಾರಣವಾಯಿತು. ಪ್ರತಿ ದಿನವೂ ತಮ್ಮ ಶೌರ್ಯಪ್ರದರ್ಶನವನ್ನು ಒಂದು ಗ್ರಾಮದವರು ಇನ್ನೊಂದು ಗ್ರಾಮದವರ ಜತೆಯಲ್ಲಿ ಮಾಡಿಕೊಳ್ಳುತ್ತಿದ್ದರು. ಒಂದು ನಾಡಿನವರು ಇನ್ನೊಂದು ನಾಡಿನವರೊಡನೆ ಹೋರಾಡಿದ್ದೂ ಇದೆ. ಒಂದು ಸಂದರ್ಭದಲ್ಲಿ ಜೆಪ್ಪು ನಾಡಿನ ಕೆಲವು ಗ್ರಾಮದವರು ಇಂಥಾ ಹೋರಾಟದ ಮಧ್ಯೆ ಕುಂಜೇರಿ ಗ್ರಾಮದವರನ್ನು ಎದುರಿಸಿದಾಗ್ಯೆ ಆ ಗ್ರಾಮದವರು ತಮ್ಮ ವೀರವಾಣಿಯನ್ನು 'ಎಲ್ಲಾ ನಾಡ್ ಬಾಲಂಗ; ನೀರ್ ಕೆಟ್ಟಿತುಪ್ಪಕ, ಕುಂಜೇರಿ ಬಾಲಂಗೆಲ್ಲ; ಚೋರೆಕಟ್ಟಿತುಕ್ಕಡ್!' ಎಂದು ಘನಗಂಭೀರವಾಗಿ ಎದುರು ನಿಂತದ್ದು ನೋಡಿದರೆ ಆಗಿನ ವೀರಸಂಸ್ಕೃತಿಯು ವ್ಯಕ್ತವಾಗದೆ ಇಲ್ಲ.

ಕೊಡವರ ನರ್ತನದ ವಿಷಯ ಹೇಳುವುದಾದರೆ ಸಾಧಾರಣ ಮಟ್ಟಿಗೆ ಭರತನಾಟ್ಯ ಶಾಸ್ತ್ರದ ವಿಧಾನವು ಅವರಲ್ಲಿರಬಹುದೋ ಎಂದು ಸಂದೇಹಪಡಬೇಕಾಗಿದೆ. ಆದರೆ ಏಕಪ್ರಕಾರವಾಗಿ ಕೈಕಾಲುಗಳನ್ನು ತೆಗೆಯುವ ಆ ರಾಮಣೀಯಕವಾದ ನರ್ತನವು ಪರರಾಷ್ಟ್ರದ ಜನರನ್ನೂ ನೋಟಕರನ್ನೂ ಮುಗ್ಧಗೊಳಿಸುವಂತಿದೆ. ಕೊಡವರ ಕೋಂಬಾಟ್, ಪೀಲಿಯಾಟ್ ಮೊದಲಾದ ಕುಣಿತಗಳು ಮೋಹಿನೀ ನರ್ತನದ ಅನುಕರಣವೆಂದು ಬಲ್ಲವರು ಪ್ರಸಿದ್ಧಿಪಡಿಸಿದ್ದರಿಂದ ಭಾರತೀಯ ಪೌರಾಣಿಕ ಸಂಸ್ಕೃತಿಯ ಪಡಿನೆರಳು ನಮ್ಮವರಲ್ಲಿ ಬಿದ್ದಿತ್ತೆಂದು ಧಾರಾಳವಾಗಿ ಹೇಳಬಹುದು. ಇವುಗಳನ್ನು, ಈಗಲೂ ನಾಡುಗಳಲ್ಲಿ ದೇವರ ಹೆಸರನ್ನು ಕೂಗುತ್ತಾ ಕುಣಿಯುವರು. ಸ್ತ್ರೀಯರಲ್ಲಿ ಪ್ರಚಾರವಿರುವ 'ಉಮ್ಮತ್ತಾಟ್' ಎಂಬುದು ಸುಮಾರು ಹನ್ನೆರಡನೇ ಶತಮಾನದಲ್ಲಿ ಚೋಳ ಜನಾಂಗದವರಲ್ಲಿ ಪ್ರಚಾರದಲ್ಲಿದ್ದುದೆಂಬುದಾಗಿ ತಿಳಿದುಬಂದಿದೆ. ಹೀಗೆಯೇ ಬೊಳಕಾಟ್ ಮೊದಲಾದುವುಗಳ ಅನುಕರಣಗಳು ಉತ್ತರ ಹಿಂದೂಸ್ಥಾನದಲ್ಲೂ ಸಹ ಕೇವಲ ಪ್ರತ್ಯೇಕ ಸಂಸ್ಕೃತಿಯನ್ನು ಪಾಲಿಸಿಕೊಂಡಿರುವ ಚಿಕ್ಕ ಚಿಕ್ಕ ಕೆಲವು ಜನಾಂಗದವರಲ್ಲಿವೆಯೆಂಬುದು ತಿಳಿಯುತ್ತೇವೆ. ಶಿವನ ನಾಟ್ಯ, ಲಕ್ಷ್ಮಿಯ ಲಾಸ್ಯ ಇವುಗಳ ಛಾಯಾನುಕರಣಗಳೇ ಇಂದು ಪ್ರಪಂಚದ ನೃತ್ಯರಂಗದಲ್ಲಿ ಒಂದಲ್ಲ ಒಂದು ರೂಪದಲ್ಲಿ ನಮಗೆ ಕಾಣಿಸಿಕೊಳ್ಳುವುದಾಗಿದೆ. ಸುಖದುಃಖಗಳನ್ನು ಏಕಪ್ರಕಾರವಾಗಿ ಎಣಿಸಬೇಕಾದರೆ ಸರ್ವಥಾ ಸಂತೋಷದಲ್ಲಿ ನಾವಾಗಿರಬೇಕು. ಅಂಥಾ ಮನಸ್ಸಂತೋಷಕ್ಕೆ ಸಾಧನೀಭೂತವಾದುದೆಂದರೆ ನಾಟ್ಯನೃತ್ಯಗ

ಅಲ್ಲವೆ ಬೇರೆಯಿಲ್ಲ. ದೇವಸ್ಥಾನಗಳಲ್ಲಿ ಹಾಡುವುದೂ ಕುಣಿಯುವುದೂ ಇತ್ಯಾದಿಗಳು ಇಂಥಾ ತಾತ್ವಿಕ ವಿವೇಚನೆ ಮೇರೆ ಎಂದು ನಮ್ಮ ನಂಬಿಗೆಯಾಗಿದೆ.

ಯಾವ ವಿಷಯವನ್ನು ಕುರಿತು ಪ್ರಸ್ತಾಪಿಸುವುದಾದರೂ ಜ್ಞಾನವನ್ನು ಬಿಟ್ಟು ಬೇರೊಂದಿಲ್ಲ. ನ್ಯಾಯವಾದ ಸದ್ವಿದ್ಯೆ ಶಾಲೆಗಳಲ್ಲಿಲ್ಲ; ದೊಡ್ಡ ಗ್ರಂಥಗಳೊಳಗಿಲ್ಲ. ಬರೇ ಬಾಹ್ಯಾಂತರ ಪ್ರಪಂಚವನ್ನು ತೀಕ್ಷ್ಣ ದೃಷ್ಟಿಯಿಂದ ಪರಿಶೀಲಿಸಿ, ಸಂಪಾದನೀಯವಾದ ಅನುಭವವನ್ನು ಸಮಾಲೋಚನೆಯಿಂದ ಅನುಭವಿಸಿ, ನ್ಯಾಯಮಾರ್ಗದಲ್ಲಿ ಅದನ್ನು ಕಾರ್ಯರಂಗಕ್ಕೆ ತಂದೊಡ್ಡಿದಲ್ಲಿ ಮಾತ್ರ ಜ್ಞಾನಸಂಸ್ಕಾರದ ಸಾಕ್ಷಾತ್ಕಾರವು ನಮಗೆ ಕಂಡು ಬರುವುದು. ಅಲ್ಲಿಯೇ ವಿದ್ಯಾದೇವತೆಯ ಸಮರೂಪವು ನಮಗೆ ತೋರುವುದು. ಇದರ ಪರೀಕ್ಷಾಕಾರ್ಯಕ್ಕೆ ಹಳ್ಳಿಗಳತ್ತ ಹೋಗಬೇಕು. ದೇವರ ಚಿತ್ರವೊಂದನ್ನಿಟ್ಟು, ಅದನ್ನು ದಿನ ದಿನವೂ ನೋಡುತ್ತಾ, ದೇವ ನಾಮೋಚ್ಚಾರಣೆಯನ್ನು ಮಾಡುತ್ತಾ ಬಂದರೆ ಮೂಢನಾದವನಲ್ಲೂ ಒಂದು ಬಗೆಯ ದೈವಿಕ ಸಂಸ್ಕಾರವುಂಟಾಗದೆ ಇಲ್ಲ. ನುರಿತ ಜ್ಞಾನಿಗಳು ತಮ್ಮ ಅನುಭವವನ್ನು ಕೇವಲ ಅಸಂಸ್ಕೃತರಾದವರಲ್ಲೂ ಹೇಳಿ ಅವರನ್ನು ಪಳಗಿದ ಲೌಕಿಕರನ್ನಾಗಿ ಮಾಡಬಹುದು. ಇಂಥಾ ಸಾಂಸ್ಕೃತಿಕ ಧೋರಣೆಯು ಕೊಡಗಿಗೆ ಹೊಸದಾಗಿ ಕಂಡುಬಂದುದಲ್ಲ. ಹಳಬರಲ್ಲಿ ಅಡಗಿರುವ ಕರಡುಜ್ಞಾನವು ಅಮೃತತುಲ್ಯವಾಗಿದೆ. ಭಾರತ ರಾಮಾಯಣಗಳು ಅವರ ತುದಿನಾಲಗೆಯಲ್ಲಿರುತ್ತವೆ. 'ಶ್ರೀವಧುವಿನಂಬಕ ಚಕೋರಕಂ ಪೊರೆಯೆ,' ಎಂಬುದಾಗಿ ಜೈಮಿನಿಯನ್ನು ಬಿಡದೆ ಸಾಲಾಗಿ ಬಾಯಿಪಾಠ ಹೇಳುವಂಥಾ ಗಮಕಿಗಳೂ ನಮ್ಮ ಮಧ್ಯೆ ಇರುತ್ತಾರೆ. ನಮ್ಮ ಹಳ್ಳಿಗಳಲ್ಲಿ ಕಾಣುವ ಕೈಮಡ, ಓಣಿ, ಮಂದು, ದೇವರ ಸ್ಥಳ, ದೇವರ ಕಾಡು ಇವುಗಳೆಲ್ಲವೂ ಮನುಷ್ಯರನ್ನು ಆತ್ಮಸಾಕ್ಷಾತ್ಕಾರದ ತಳಹದಿಯನ್ನು ಕಾಣಲು ಉಂಟುಮಾಡಿದ ಸಾಧನೀಭೂತವಾದ ವಸ್ತುಗಳು. ಈಗ ಒಂದು ಮನೆಯಲ್ಲಿ ಒಂದು ಸಂಸಾರವಾದರೆ ಹಿಂದಿನ ಕಾಲದಲ್ಲಿ ಒಂದು ಗ್ರಾಮವೇ ಒಂದು ಸಂಸಾರವೆಂದು ಹೇಳಬಹುದಿತ್ತು. ಅಂದಿನ ಒಗ್ಗಟ್ಟು, ಏಕರೂಪತೆ, ಕೆಲಸ ಕಾರ್ಯಗಳಲ್ಲಿ ಅನ್ಯೋನ್ಯ ಮಿಲನ, ಗದ್ದೆಗಳಿಗೆ ಮುಯ್ಯಾಳು ಹೋಗುವುದು, ಕೈಲ್‌ಮುಹೂರ್ತದಲ್ಲಿ ಆಯುಧಾಪೂಜೆ, ಕ್ಷತ್ರಿಯೋಚಿತ ಪದ್ಧತಿಯಂತೆ ಬೇಟೆಗೆ ಹೋಗುವುದು, ದೇವರ ಸೇವೆ, ಗಂಗಾಪೂಜೆ ಇತ್ಯಾದಿಗಳಲ್ಲಿ ಹಿರಿಯರು ಅನುಸರಿಸುತ್ತಿದ್ದ ಅಗಾಧ ಬುದ್ಧಿವಂತಿಕೆಯು ಶ್ಲಾಘನೀಯವಾಗಿದೆ. ಇದರ ಹಿಂದೆ ದೊಡ್ಡ ಪಾಠವನ್ನೂ ತಿಳುವಳಿಕೆಯನ್ನೂ ಪಡೆಯಬಹುದಾಗಿದೆ. ಅನಾಗರಿಕ ಜನಾಂಗವನ್ನು ಎಚ್ಚರಗೊಳಿಸಲು ಇದೆಲ್ಲಾ ಯೋಗ್ಯ ಸಾಧನಗಳಂತೆ ಭಾಸವಾಗುತ್ತವೆ. ಒಂದೊಂದು ಸಂದರ್ಭದಲ್ಲಿ ಹಳ್ಳಿಯವರ ಮೇಧಾಶ

ಕ್ತಿಯು ವಿಶೇಷವಾಗಿ ನಮಗೆ ಕಂಡು ಬರುವುದು. ಮಾತಿನಲ್ಲೂ, ವಾದದಲ್ಲೂ, ನ್ಯಾಯದಲ್ಲೂ, ವ್ಯವಹಾರದಲ್ಲೂ ಸಾಧಾರಣ ಮಟ್ಟಿಗೆ ಅವರಿಗೇ ಜಯ. ಇದರಿಂದಲೇ ಓದಿ ಕಲಿಯುವ 'ಗ್ರೇಜ್ವೇಟ್'ಗಿಂತ, ಕೇಳಿಕಲಿಯುವ ಗೌಡ ಉತ್ತಮ,' ಎಂಬುದಾಗಿ ಹೇಳುವರು.

ಸಾಹಿತ್ಯದಲ್ಲಿ ವ್ಯಂಗ್ಯ ಸಾಹಿತ್ಯಕ್ಕೆ ಉತ್ತಮಸ್ಥಳವನ್ನು ನಿರ್ಮಿಸಿರುವರು. ಕೊಡವ ಹಾಡಿನಲ್ಲಿ ಇಂಥವುಗಳು ಹಿಂದಿನವರ ನೈಪುಣ್ಯವನ್ನೂ, ತಿಳುವಳಿಕೆಯನ್ನೂ, ಬುದ್ಧಿಯ ವಿಶಾಲತೆಯನ್ನೂ ಸೂಚಿಸುತ್ತವೆ. ಉದಾಹರಣೆಗೆ ಹೇಳುವುದಿದ್ದರೆ ಸೂರ್ಯ, ಚಂದ್ರ, ಭೂಮಿಗಳಿಗೆ ವೇದಕಾಲದಿಂದಲೇ ಹಿಂದುಗಳು ಭ್ರಾತೃಭಾವವನ್ನು ಕಲ್ಪಿಸುತ್ತಾ ಬಂದಿದ್ದಾರೆ. ಅವನ್ನೇ ನಮ್ಮ ಹಿರಿಯರು ಸೂರ್ಯನು ಅಣ್ಣನೆಂಬುದಾಗಿಯೂ, ಚಂದ್ರನು ತಮ್ಮ, ಮತ್ತು ಭೂಮಿಯು ತಂಗಿಯೆಂಬುದಾಗಿ ಅಲಂಕಾರಿಕವಾಗಿ ಹಾಡಿನಲ್ಲಿ ಹೇಳಿದ್ದು ಆಹ್ಲಾದವನ್ನುಂಟುಮಾಡುವುದಾಗಿದೆ;

ಅಣ್ಣ ತಮ್ಮ ದಂಡಾಳು,	**ಒಬ್ಬ ದೇವಿ ತಂಗಮ್ಮ**
ಕೈಲಾಸತ್ ಕೊಡಿಲ್,	**ಭೂಮಿದೇವಿ ಮಾದೇವಿ,**
ರಾಜಪಟ್ಟೋ ಕ್ ಟ್ಟತ್;	**ಭೂಮಿ ಪಟ್ಟ ಕ್ ಟ್ಟತ್,**
ಮೇಲೆ ಪಟ್ಟ ಬಾವಲ್ಲಿ;	**ಮುತ್ತ್ ಪಟ್ಟ ಬಾವಳ;**

ಎಂದು ಬಹು ಸೂಕ್ಷ್ಮ ಶೈಲಿಯಲ್ಲಿ, ಗೂಢಾರ್ಥವನ್ನು ಮರೆಸಿ ನಿರೂಪಿಸಿರುವರು. ಆದರಲ್ಲೂ ಬರೀ ಏಳು ಅಕ್ಷರಗಳಿಂದ ಒಂದೊಂದು ಚರಣವನ್ನು ಭರ್ತಿಮಾಡಿ ಸ್ಪಷ್ಟಾರ್ಥವನ್ನೀಯುವ ಈ ಹಾಡುಗಳು ರಸಿಕರಿಗೆ ಬಹು ಮೆಚ್ಚಾಗದೆ ಇರವು. ಇಂಥಾ ವಚನಗಳು ನಮ್ಮ ಹಾಡುಗಳಲ್ಲಿ ಎಷ್ಟೋ ಇವೆ. ಇದೇ ತರದ ಒಗಟುಗಳು ಕೊಡಗು ಭಾಷೆಯಲ್ಲಿ ಲೆಕ್ಕವಿಲ್ಲದಷ್ಟು ಪ್ರಚಾರವಲ್ಲಿವೆ ಮತ್ತು ಇತರ ಭಾಷೆಗಳಲ್ಲೂ ಅಂಥಾ ಗಾದೆಗಳು ಒಂದೇ ಅರ್ಥವನ್ನು ಸೂಚಿಸುವಂಥವುಗಳಾಗಿ ಇತರ ದೇಶಗಳಲ್ಲೂ ವಿಶೇಷ ಬಳಕೆಯಲ್ಲಿವೆ. ಇವರಿಂದ ಆಗಿನ ಸಾಂಸ್ಕೃತಿಕ ಸಂಯುಕ್ತತೆಯನ್ನು ಇತ್ಯರ್ಥಪಡಿಸಬಹುದಾಗಿದೆ.

ಮೇಲೆ ಹೇಳಿದ ವ್ಯಂಗ್ಯಕಾವ್ಯದ ಜತೆಗೆ ನಾಣ್ಣುಡಿಗಳು ಎಷ್ಟು ಭಾವಪ್ರದವಾಗಿವೆಯೆನ್ನಲು ಕೆಲವು ಉದಾಹರಣೆಗಳನ್ನು ಕೊಡುವೆವು. ಒಗಟುಗಳನ್ನು ಜೋಡಿಸಲು ದೊಡ್ಡ ಮೇಧಾಶಕ್ತಿ ಬೇಕೆಂಬುದಾಗಿ ನಾವು ಆಶ್ಚರ್ಯಪಡಬೇಕಾಗಿಲ್ಲ. ಕೇವಲ ವಿದ್ಯಾಹೀನನಾದಂಥವನೂ ಲೋಕಾವಸ್ಥೆಯನ್ನು ಬಲ್ಲವನಾಗಿದ್ದರೆ ಈ ಕಾರ್ಯವು ಅವನಿಗೆ ಪ್ರಯಾಸವಾಗಿ ತೋರದು. ಆದರೆ ಅವನಲ್ಲಿ ಒಂದು ಮಾರ್ಮಿಕ

ಓಜಸ್ಸು ಕೂಡಿರಬೇಕು. ಅಂಥಾ ಹೇಳಿಕೆಗಳು ಹೆಚ್ಚಿನ ಆಲೋಚನೆಗೆ ಎಡೆಕೊಡದೆ ಹೃದಯಾಂತರಾಳದಿಂದ ಪಕ್ಕನೆ ಉಕ್ಕಿಬರುವುದು. ಯಾವ ದೇಶದ ಯಾವ ಸಾಹಿತ್ಯದಲ್ಲಿ ಇಂಥಾ ಒಗಟುಗಳೂ ನಾಣ್ನುಡಿಗಳೂ ಹೆಚ್ಚು ಪ್ರಚಾರದಲ್ಲಿವೆಯೋ ಅಷ್ಟೇ ಸಾಂಸ್ಕೃತಿಕ ಅಭಿವೃದ್ಧಿಯನ್ನು ಆ ದೇಶವು ಪಡೆದಿದೆಯೆಂದು ನಾವು ಅಭಿಪ್ರಾಯಪಡುತ್ತೇವೆ. ಹೀಗಂದ ಮೇಲೆ ಕೊಡಗು ನಾಡು ಇಂಥವುಗಳಲ್ಲಿ ಬಡವಾಗಿಲ್ಲ. ನಮ್ಮಲ್ಲೂ ಚೆಲೋದಾದ ನಾಣ್ನುಡಿಗಳೂ, ವ್ಯಂಗ್ಯೋಕ್ತಿಗಳೂ, ಒಗಟುಗಳೂ (ವಡಪ ಗಾದೆ) ತುಂಬಾ ಇವೆ.

‘ಅರಿಯುವವನೇ ಪೆರಿಯಂವ,’ ಎಂಬುದು ಬಹು ಹಿಂದಿನ ಮಾತೆಂದು ಊಹಿಸಬಹುದಾಗಿದೆ. ಇದೇ ಅಭಿಪ್ರಾಯವನ್ನು ಬಹು ಹಿಂದಿನ ಕನ್ನಡ ಕವಿಯೊಬ್ಬನು, ‘ಪ್ರಾಯಂ ಕೂಸಾದೊಡಮಭಿಪ್ರಾಯಂ ಕೂಸಕ್ಕುಮೇ?’ ಎಂದು ಹೇಳಿದ್ದಾನೆ. ಸಮಾಜದಲ್ಲಿ ಎಳೆಯವರಾಗಲೀ, ದೊಡ್ಡವರಾಗಲೀ, ನಿಷ್ಪಕ್ಷಪಾತವಾದ ಸದಭಿಪ್ರಾಯ ಎಲ್ಲಿರುವುದೋ ಆ ಪಕ್ಷವನ್ನು ಹಿಡಿದು, ಅದಕ್ಕೆ ಸಮ್ಮತವನ್ನೀಯಬೇಕೇ ವಿನಹ, ಕೇವಲ ಶುಷ್ಕವಾದಕ್ಕೂ ತಲೆ ಅಲ್ಲಾಡಿಸಿದರೆ ವಿವೇಕಹೀನರಾಗುವುದಲ್ಲದೆ ಬೇರೆ ಏನೂ ಅಲ್ಲ. ‘ಅಗೆ ಕಂಡಕರಿಯು ಬೋಳೆರ ಗುಣ,’ ಎಂದು ಹೇಳಿದ್ದು ಇನ್ನಷ್ಟು ಪರಿಪಕ್ವವಾದ ಮಾತಾಗಿದೆ. ಹುಟ್ಟಿ ಎರಡು ವರ್ಷದಲ್ಲಿಯೇ ತಮ್ಮ ಮಕ್ಕಳು ಇಂಥವರೇ ಆಗಬಹುದೆಂಬುದನ್ನು ತೀಕ್ಷ್ಣದೃಷ್ಟಿಯುಳ್ಳ ತಂದೆ ತಾಯಿಗಳು ಊಹಿಸದೆ ಇರರು. ಶಾಲೆಯಲ್ಲಿರುವ ಪ್ರತಿಯೊಬ್ಬ ವಿದ್ಯಾರ್ಥಿಯ ಗುಣದಿಂದಲೇ ಅವನವನ ಭವಿಷ್ಯದ್ರೂಪವನ್ನು ತಾತ್ವಿಕ ದೃಷ್ಟಿಯುಳ್ಳ ಉಪಾಧ್ಯಾಯನಿಗೆ ಹೇಳಲು ಕಷ್ಟವಾಗಿ ತೋರದು. ಇದನ್ನೇ ಕನ್ನಡದಲ್ಲಿ, ‘ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ? ಎಂದು ಹೇಳಿರುವರು. ‘ಆನೆ ತಳಂದಕ ಕೊಟ್ಟ್‌ಕ್ ಕೂಡುವಾ?’ ಎಂಬುದು ಇನ್ನೊಂದು. ಲಕ್ಷಪತಿಯಾಗಿದ್ದ ಮನುಷ್ಯನು ದುರಾದೃಷ್ಟವಶದಿಂದ ಬಡವನಾದರೆ ಅವನು ತನ್ನ ದೊಡ್ಡಸ್ಥಿಕೆಯ ಮೇಲ್ಮಟ್ಟದಿಂದ ಮಾತ್ರ ಕೆಳಗಿಳಿಯಲಾರನೆಂಬುದೇ ಇದರ ತಾತ್ಪರ್ಯ. ಲೋಕದಲ್ಲಿ ರೂಢಿಯಲ್ಲಿರತಕ್ಕಂಥಾ ಜನಸಹಜವಾದ ಮತ್ತು ಸ್ವಾಭಾವಿಕವಾದ ನಡೆವಳಿಕೆಗಳನ್ನು ವರ್ಣಿಸಲು ನಾಲ್ಕಾರು ಮಾತುಗಳಿಂದೇನಾದರೂ ಸಾಧ್ಯವಾಗುವುದೇ? ವಿಶಾಲ ತತ್ವವನ್ನೂ ಸಹ ಕೆಲವೇ ಪದಗಳಿಂದ ಚೆಲೋಮಾತಾಗಿ ನಿರ್ಮಿಸಿ ಹೇಳಿದರೆ ಎಷ್ಟು ಮನಮುಟ್ಟುವುದಾಗಿರುವುದು! ‘ಕಾಲ್‌ಕ್ ಬುದ್ಬವಂಡ ಎದೆ ಚವುಟತ್ತೆ,’ ಎಂದರೆ ಸಾಧಾರಣ ಎಲ್ಲರಲ್ಲೂ ಹೌದೆಂದು ಎಣಿಸುವ ಮಾತಾಗಿದೆ. ಹೀಗಿದ್ದರೂ ಎಷ್ಟು

ಕೃತಘ್ನರಿಗೆ ಇಂಥಾ ಮಾತುಗಳನ್ನು ಸಲ್ಲಿಸಬೇಕಾಗುವುದು? ಈ ಮಾತಿನ ಭಾವಾರ್ಥವು ಬಹು ಹಿಂದಿನ ಕಾಲದ್ದು, ಅಲ್ಲದೆ ಎಲ್ಲಾ ಜನಾಂಗದ ಜನಜೀವನದಲ್ಲೂ ಪ್ರಚಾರವಿರುವಂಥದ್ದು. ಶರಣಾಗತರಾದವರನ್ನು ರಕ್ಷಿಸಬೇಕೆಂಬ ತತ್ವವು ನಮಗೆ ಹೊಸದಲ್ಲ! ಜತೆಗೆ ನಿರ್ಗತಿಕರಾದವರನ್ನು ಕಾಪಾಡಬೇಕೆಂಬುದಾಗಿಯೂ ಮೇಲಿನ ವಚನದಿಂದ ಸ್ಪಷ್ಟವಾಗುವುದು. 'ತಾನ್ ಕೆಟ್ಟ್ ತೆಂಗಿಯೂ ನೆರೆ ಬದುಕಂಡು', ಇವನ್ನು ಅಮೃತವಾಣಿಯೆಂದು ಕರೆದರೂ ಸಲ್ಲುವುದು. ಇಂಥಾ ಧಾರಾಳಬುದ್ಧಿಯು ಬರೇ ಬಾಯಿಮಾತ್ರಕ್ಕೆ ಎಂದರೂ ಹಿಂದಿನ ಕಾಲಕ್ಕೆ ಅದರಲ್ಲಿ ಸ್ವಲ್ಪ ಯಥಾರ್ಥ್ಯವಿಲ್ಲದೆ ಇಲ್ಲ. ಹಾಲೇರಿ ಅರಸರ ಕಾಲದಲ್ಲಿ ಕೊಡಗು ಜನರು ಎಂಥಾ ನಿಃಸ್ವಾರ್ಥಬುದ್ಧಿಯಿಂದ ಕೂಡಿದ್ದರೆಂಬುದಕ್ಕೆ 'ರಾಜೇಂದ್ರನಾಮೆ' ಎಂಬ ಮಹದ್ಗ್ರಂಥದ ಪರಿಚಯವಿದ್ದವರಿಗೆ ತಿಳಿಯಬಹುದು. ಊರಿನ ಹಿರಿಯನು ತನ್ನ ಊರವರ ಹಾಗೂ ನೆರೆಯವರ ಕ್ಷೇಮಚಿಂತನೆಯಿಂದಲೇ ಕಾಲಕಳೆಯುತ್ತಿದ್ದನೆಂದರೆ ಉತ್ಪ್ರೇಕ್ಷೆಯ ಮಾತಲ್ಲ! 'ಪತ್ತ್ ನಾಥಂಗ್ ತೊಪ್ಪಾಗಿಂಜಿ ಒರ್ ದೇವಕ್ ತೊಕ್ಕಂಡು', ಎಂದು ಹೇಳಿದರೆ ನಮ್ಮಂಥಾ ಗ್ರಾಮೀಣರಿಗೆ ಸೂಕ್ತವಾದ ಹಿತೋಕ್ತಿಯಾಗಿದೆ. ಸಾಧಾರಣವಾಗಿ ಹಳ್ಳಿಯ ಜನರು ಕಂಡಕಂಡ ಹಲವು ದೇವತೆಗಳ ಆರಾಧನೆಗಳಲ್ಲಿಯೇ ಕಾಲಕಳೆಯುತ್ತಾ ಭಕ್ತಿಯ ಗುರಿ, ಜ್ಞಾನದ ಆವಶ್ಯಕತೆ, ಧ್ಯಾನದ ಧ್ಯೇಯ, ಕರ್ಮದ ಮರ್ಮಗಳಾವುದನ್ನೂ ತಿಳಿಯದೆ ಸಾಗುತ್ತಿರುವುದರಿಂದ ಅಂಥವರಿಗೆ ಅಂತರ್ಸ್ವರೂಪನಾದ ಪರಮಾತ್ಮನನ್ನು ಮಾತ್ರ ನಂಬಿರೆಂದು ಮೇಲಿನ ಮಾತಿನಿಂದ ವ್ಯಕ್ತಪಡಿಸಿರುವರು. ಇದು ನಿಜವಾಗಿಯೂ ಅನುಕರಣೀಯವಾದ ಮಾತೆಂದು ಪುನರಾವರ್ತಿ ಹೇಳುವೆವು. 'ವ್ಯಾಥನನ್ನಲ್ಲದೆ ಅನ್ಯದೈವಂಗಳಂ ನಂಬಿದೊರ್ಗಡೆ' ಎಂದು ಹರಿಶ್ಚಂದ್ರ ಕಾವ್ಯದಲ್ಲಿ ಚಂದ್ರಮತಿಯು ತಾನು ಪ್ರಾಣತೆಗೆದುಕೊಳ್ಳಲು ನೋಡುವಾಗ ಹೇಳುವಳು. ಇವರಿಂದ ಏಕದೇವ ವ್ರತನಿಷ್ಠ ಪರಾಯಣರಾಗಿ ಇರಬೇಕೆಂಬುದು ವ್ಯಕ್ತವಾಗುವುದು. 'ನೀರ್‌ಲ್ ಕುಳಿಚಕ್ಕ ಪೋಪ್ನ ಪಾಪ ಪೋಕುವಾ?' ಈ ಮಾತನ್ನು ಬಹು ಸೂಕ್ಷ್ಮದೃಷ್ಟಿಯಿಂದ ಆಲೋಚಿಸಬೇಕಿದೆ. ಜನರು ಸದ್ಗತಿಯನ್ನು ಕಾಶೀ, ರಾಮೇಶ್ವರ, ಗೋಕರ್ಣ, ಕಾವೇರಿ ಮೊದಲಾದ ಕ್ಷೇತ್ರಗಳಲ್ಲಿ ಸ್ನಾನಮಾಡಿದ ಮಾತ್ರಕ್ಕೆ ಪಡೆಯಲಾರರು ಎಂಬುದು ಮುಖ್ಯಾಂಶವಾಗಿದೆ. ಏಕೆಂದರೆ ಜ್ಞಾನವೇ ಮನುಷ್ಯನಲ್ಲಿರಬೇಕಾದ ಸರ್ವೋತ್ಕೃಷ್ಟವಾದ ಸಾಧನವಾಗಿದೆ. ಅಂಥಾ ಜ್ಞಾನದ ಹಿಂಗಡೆಯಲ್ಲಿಯೇ ಸನ್ಮಾರ್ಗಪ್ರಾಗೋಚರವಾಗುವುದು, ಆ ಮಾರ್ಗದಲ್ಲಿ ನಡೆಯಲನುವಾದರೆ ಪುಣ್ಯವಲ್ಲದೆ ಬೇರೆ ಅಲ್ಲ. ಈ ತತ್ವವನ್ನು ಶ್ರೀ ಶಂಕರಾಚಾರ್ಯರು ರಮಣೀಯವಾಗಿ ಹಾಡಿದ್ದಾರೆ

ಜ್ಞಾನ ವಿಹೀನಃ ಸರ್ವಮತೇನ ಮುಕ್ತಿಂ ನಭಜತಿ ಜನ್ಮಶತೇನಃ' ಅವರ ಅಭಿಪ್ರಾಯದಲ್ಲಿ ಜ್ಞಾನಹೀನನಾದವನು ನೂರು ಜನ್ಮಗಳನ್ನು ತಾಳಿ ಪುಣ್ಯಪ್ರದಗಿಸಿಕೊಳ್ಳಲು ಪ್ರಯತ್ನಪಟ್ಟರೂ ನಿರರ್ಥಕವೆಂದು ಪ್ರತಿಪಾದಿಸಿದ್ದಾರೆ. ಹಾಗಂದ ಮೇಲೆ, ಮೇಲಿನ ನಾಣ್ಣುಡಿಯು ಎಷ್ಟು ಸಂದರ್ಭೋಚಿತವಾಗಿದೆ! ಇಂಥಾ ಮಾತುಗಳು ಸಾವಿರಾರು ಕೊಡಗು ಭಾಷೆಯಲ್ಲಿ ಪ್ರಚಾರದಲ್ಲಿವೆ. ವಾಚಕರ ಕೃಪಾದೃಷ್ಟಿಯೊಂದು ಈ ಕಡೆಗೆ ಬಿದ್ದರೆ, ಈ ಗ್ರಂಥಕರ್ತನು ಕೊಡಗು ಭಾಷೆಯ ಔತ್ಕೃಷ್ಟ್ಯವನ್ನು ಪ್ರತ್ಯೇಕವಾಗಿ ಪ್ರಕಟಿಸದಿರಲಾರನು. ಹೇಗೂ ಹಿಂದೂಸಮಾಜಕ್ಕೆ ಅನ್ವಯಿಸುವಂಥಾ ವೇದಾಂತ ತತ್ವದ ತಿರುಳೋ ಎಂಬಂತೆ ತೋರುವ ಮತ್ತು ಸಮಂಜಸವಾಗಿ ಕಾಣುವ ಗಾದೆಗಳೂ, ವಡಪಗಾದೆಗಳೂ, ನಾಣ್ಣುಡಿಗಳೂ ನಮ್ಮಲ್ಲಿ ಸಾವಿರಾರು ಇವೆ. ದಿಗ್ದರ್ಶನಕ್ಕೆಂದು ಕೆಲವನ್ನು ಮಾತ್ರ ಮೇಲೆ ಕೊಟ್ಟೆವು. 'ಪಟ್ಟೋಲೆ ಪಳಮೆ'ಯ ಪೂಜ್ಯ ಲೇಖಕರು ಇಂಥಾ ನೂರಾರು ಮಾತುಗಳನ್ನು ಸಂಗ್ರಹಿಸಿ ಪ್ರಕಟಿಸಿರುವರು. ಕಾರಣ, ಅವುಗಳ ಪುನರ್ಮುದ್ರಣವು ಇಲ್ಲಿ ಅವಶ್ಯವಿಲ್ಲ. ಇದರಿಂದ ಕೊಡವರ ತಿಳುವಿನ ಅಂತರಾರ್ಥವನ್ನು ಇತರ ಜನಾಂಗದವರಲ್ಲಿ ಕಂಡು ಬರುವ ಜ್ಞಾನವಿಶೇಷದೊಂದಿಗೆ ಹೋಲಿಸಿದರೆ ವಿಶೇಷ ವ್ಯತ್ಯಾಸವೇನೂ ಇಲ್ಲ. ಕೊಡವ ಭಾಷೆಯಾಗಲೀ, ತಿಳುವಳಿಕೆಯಾಗಲೀ ಕಡಿಮೆ ಪರಿಮಾಣದಲ್ಲಿದೆಯೆಂದು ಬೇಸರಪಡಬೇಕಾದ ಆವಶ್ಯಕತೆಯೂ ಇಲ್ಲ. 'ಮಣ್ಣುಂಡೇಂಗಿ ಮನಸ್ಥಾನ, ಪೊನ್ನುಂಡೇಂಗಿ ಅರಸ್ಥಾನ,' ಎಂಬ ಮಾತನ್ನೂ ಮೇಲಿನವುಗಳ ಜತೆಯಲ್ಲಿಯೇ ಸೇರಿಸಿ ಹಿಂದಿನವರ ದೀರ್ಘಾನುಭವದ ಸಮನ್ವಯವು ಎಷ್ಟರ ಮಟ್ಟಿಗೆ ಸಮಾಜೋನ್ನತಿಯ ಕಾರ್ಯಕ್ಕೂ ಸಾಧಕವಾಗುವುದೆಂದು ತಿಳಿಯುವುದು. ವಿಶ್ವವಾಙ್ಮಯದ ಸರ್ವ ರೂಪವು ಒಂದೇ ಬಣ್ಣದಲ್ಲಿ ಗೋಚರಿಸಿದರೂ, ಪ್ರತಿಯೊಬ್ಬನೂ ತನ್ನ ವ್ಯಕ್ತಿತ್ವದ ರಕ್ಷಣೆಗಾಗಿ ತಮ್ಮಲ್ಲಿ ಸುಧಾರಿತವಾದ ಸಾಂಸ್ಕೃತಿಕ ರೂಪದಲ್ಲಿ ಎಡವಿ ಆನಂದಿಸದಿರಲಾರನು. ಆದರೆ ನಮ್ಮ ಭಾಷೆಯಲ್ಲಿ ಲಿಪಿಯೆಂಬುದೊಂದು ಇಲ್ಲದಿದ್ದ ಕಾರಣ ಏನನ್ನೂ ಬರೆದಿಡಲಿಕ್ಕೆ ಅವಕಾಶವಾಗಲಿಲ್ಲ. ಕರ್ಣಾಟಕದ ದಿನ ದಿನದ ಬೆಳವಣಿಗೆಯನ್ನೂ ಪರೀಕ್ಷಿಸಿದರೆ ಕೇವಲ ವಿವಿಧ ಜನರ ವಿವಿಧ ರೀತಿಯ ತಿಳುವಳಿಕೆಯ ಪ್ರಾಬಲ್ಯದಿಂದವೆಂಬುದನ್ನು ಸ್ಥೂಲದೃಷ್ಟಿಯಿಂದಲೇ ನಿರ್ಧರಿಸಬಹುದು. ಕರ್ಣಾಟಕ ಸಂಸ್ಕೃತಿಯು ಜೈನ, ಶೈವ, ಬ್ರಾಹ್ಮಣ ಸಾಹಿತ್ಯಗಳ ವಿವಿಧ ರೀತಿಯ ನಿರೂಪಣೆಗಳಿಂದಲೂ, ಶೈವರ ವಚನ, ದಾಸರ ಹಾಡು, ಹಳ್ಳಿಗರ ಲಾವಣಿ ಇವುಗಳ ಸಾಧಾರಣ ಸಮಸ್ಯೆಗಳಿಂದಲೂ, ವಿಶೇಷ ಕಳೆಗೊಂಡಿದೆ. ಜನತೆಯ ತಿಳುವಳಿಕೆಯು ಕ್ರಮೇಣ ಹೇಗೆ ಹೆಚ್ಚಿತು, ಮತ್ತು ಇಳಿಯಿತೆಂಬುದನ್ನು ಗೊತ್ತುಮಾಡಬಹುದಾಗಿದೆ.

ಇಲ್ಲಿ ಇಂಥಾ ಮಾತುಗಳ ನಿರ್ಮಾಣದಲ್ಲಿ ಗೋಚರಿಸತಕ್ಕಂಥಾ ಸಂಸ್ಕೃತಿ ಯೆಂಬುದೊಂದನ್ನುಮಾತ್ರ ನಿಷ್ಪಕ್ಷಪಾತ ದೃಷ್ಟಿಯಿಂದ ಊಹಿಸಿ ಗಮನಿಸತಕ್ಕದ್ದು. ಹಿಂದಿನವರ ತಾತ್ವಿಕ, ಆರ್ಥಿಕ, ಲೌಕಿಕ ಹಾಗೂ ನೈತಿಕ ಜ್ಞಾನದ ಹಿಂಬದಿಯಲ್ಲಿ ರಾರಾಜಿಸುತಿದ್ದ ವ್ಯವಹಾರ ಸಂಸ್ಕಾರವು ಅಥವಾ ಸಾಂಸ್ಕೃತಿಕ ಧೋರಣೆಯು ಈ ಗ್ರಂಥಕರ್ತನನ್ನು ಬೆರಗುಪಡಿಸಿವೆ. ಭಾವನಾಪ್ರಪಂಚವು ನೀಲಾಕಾಶದಂತೆ ಏಕ ಸಮಾನವಾಗಿ ನಮಗೆ ತೋರುವುದು. ಲೋಕದ ಪ್ರತಿ ಜನಾಂಗದವರ ಅಭಿಪ್ರಾಯವನ್ನು, ಪ್ರತಿಕಾಲಕ್ಕೂ ಸಂಗ್ರಹಿಸಿಡುತ್ತಾ ಕಟ್ಟಕಡೆಗೆ ಅವನ್ನು ಶೋಧಿಸಿ ನೋಡಿದರೆ ಭಾವನೆಗಳಲ್ಲಿ ಅವುಗಳೆಲ್ಲವೂ ಒಂದೇ ಸಮಾನವಾಗಿ ಒಂದೇ ಮಾರ್ಗಕ್ಕೆ ಕೊಂಡುಹೋಗತಕ್ಕಂಥವುಗಳಾಗಿ ತೋರದಿರದು. ಆದರೆ ಇತರ ಜನಾಂಗದವರ ಸಂಸ್ಕೃತಿಯಿಂದ ನಮ್ಮದು ಬೇರೆಯಲ್ಲವೆಂಬುದನ್ನು ಹಿಂದೆಯೇ ಹೇಳಿರುವೆವು.

ಹಾಡುಗಳಲ್ಲಿಯೂ ಪೂರ್ವಿಕರಲ್ಲಿದ್ದ ರಚನಾಶಕ್ತಿಯು ಅದೆಷ್ಟು ವಿಶೇಷವಾಗಿದೆ! ಪ್ರತಿಯೊಂದು ಪದಕ್ಕೂ ಒಂದೊಂದು ವಿಶೇಷಣಾರ್ಥವನ್ನು ಕೊಡುವ ಶಕ್ತಿ ಸಂಪಾದನೆಯಿಂದ ಆ ಭಾಷಾಜ್ಞಾನ, ಆ ಭಾಷಾ ವೈಖರಿ, ಆ ಭಾಷಾ ನೈರ್ಮಲ್ಯವೆಲ್ಲವೂ ಒಡೆದು ತೋರುವುದು. ಉದಾಹರಣೆಗೆ ಕಾಳೀದೇವಿಯ ಸ್ತೋತ್ರದಲ್ಲಿ, ಅವಳು ತನ್ನ ಹಬ್ಬದ ಶುಭದಿವಸದಲ್ಲಿ ಹೇಗೆ ನಿದ್ರೆಯಿಂದ ಎದ್ದು ಬರುವಳೆಂಬುದರ ವಿವರಣೆಯನ್ನು

ಕಾಳಿಕ ಮಲೆಯಿಲ್,	ಕುಪ್ಪೆನಾಟ್ಳಂಗೋಳಿ,
ಕಾಳಿಕಮ್ಮೆ ಮಾದೇವಿ,	ಪೊಂದೆರಕೆ ತಟ್ಟಿತ್,
ನಲ್ಲೋರಾಜೆ ನಾಳಾಯಿ,	ಮೂಮ ಏಂಗಿ ಕೂವಣೆ,
ಶಂಭುಶಿವ ದೇವಂಡ,	ಕಾಳಿಕಮ್ಮೆ ದೇವಿಯೊ,
ನೆತ್ತಿಕಣ್ಣ್ ಸೂರಿಯು,	ಪೂವೊರಕ್ ನೆಟ್ಟಿತ್,
ಕೇಕುದ್‌ಚಿ ಬಪ್ಪಕ,	ನ್ಯೈಜಳಂದಿತೆದ್ದತ್.

ಹೀಗೆ ಪ್ರತಿಯೊಂದು ಏಳಕ್ಷರಗಳಿಂದ ಕೂಡಿದ ಚರಣದಲ್ಲಿ, ಪ್ರತಿ ಪದದ ಹಿಂದೆ ಒಂದೊಂದು ವಿಶೇಷಣಾರ್ಥವನ್ನು ಕೊಡುವ ಪದವನ್ನು ಸೇರಿಸಿ ಒಂದು ಸುಂದರ ಕಾವ್ಯಮಂಟಪವನ್ನು ನಿರ್ಮಿಸಿದ ಆ ನಮ್ಮ ಪೂರ್ವಜನು ಅದೆಂಥಾ ಕವಿತಾಶಕ್ತಿಯಿಂದ ಕೂಡಿದ ರಸಋಷಿಯಾಗಿದ್ದಿರಬೇಕು! ಇವುಗಳನ್ನು ವರ್ಣನಾಕಾವ್ಯಗಳೆಂದು ಪ್ರತಿಪಾದಿಸಬಹುದು.

ನೆರೆಪ್ರಾಂತ್ಯಗಳಿಂದ ಕೊಡಗು ಪ್ರಾಂತ್ಯಕ್ಕೆ ಬಂದು ನ್ಯಾಯವಾದ ನೆಲೆ, ಸ್ಥಾನಗಳನ್ನು ಗೊತ್ತುಮಾಡಿ ನೆಲಸಿದ ಇಗ್ಗುತಪ್ಪ ಮೊದಲಾದ ಅನೇಕ ದೇವತೆಗಳ

ಕ್ಷೇತ್ರಗಳೂ, ಪುಣ್ಯಸ್ಥಳಗಳೂ ಇಲ್ಲಿವೆ. ಓರ್ವ ದೇವತೆಯು ನಮ್ಮ ಮಲೆ ಸೀಮೆಯಲ್ಲಿ ತಕ್ಕ ಸ್ಥಾನವನ್ನು ಹುಡುಕುತ್ತಾ ಬರಲು ಸಾಧಾರಣವಾದ ಒಂದು ಸ್ಥಳವನ್ನು ಕಂಡು ಅದನ್ನು ನಿರ್ದೇಶಿಸಿ ಹಾಡಿದ್ದರ ಮೇಲಿರುವ ಕವಿತಾಚಮತ್ಕಾರವನ್ನೂ ವರ್ಣನಾಸಾಮರ್ಥ್ಯವನ್ನೂ ದಯವಿಟ್ಟು ಪರೀಕ್ಷಿಸಿ:--

'ದಿಕ್ಕು ದೇಶ ನೋಟಣೆ, ಚಂಗಬಾಳೆ ಪಣ್ಣಿಲ್ಲೆ,
ಬಟ್ಟೊತ್ತ ನೆಲವಿಲ್ಲೆ, ನೆಲ್ಲಿಕೆ ನೆಳವಿಲ್ಲೆ,
ನೀಲಕೊಡಿ ನೀರಿಲ್ಲೆ, ವಿಚಿರ ತಣ್ವಿಲ್ಲೆ,
ಜಾತಿನಲ್ಲ ಪೂವಿಲ್ಲೆ, ಪಟ್ಟಮ ಮತವಿಲ್ಲೆ,
ಕಾಳಿಪಯ್ಯ ಪಾಲಿಲ್ಲೆ, ನಿಪ್ಪರ್ ನೆಲಪೋರ.

ಎಂದೀರೀತಿಯಾಗಿ ಹಾಡಿರುವರು. ಇದು ಸಹ ಉತ್ಕೃಷ್ಟವರ್ಣನೆಗೆ ಸೇರಿದ್ದಲ್ಲದೆ, ಅರ್ಥದಲ್ಲೂ ಬಹು ಸ್ವಾರಸ್ಯವನ್ನುಂಟುಮಾಡುವುದಾಗಿದೆ.

ಕೊಡವರ ಪದ್ಧತಿಗಳ ವಿಷಯ ಹೇಳುವುದಿದ್ದರೆ, ಹೆಚ್ಚಿನ ಸಂಸ್ಕೃತಿ ಸಂಬಂಧ ವಿಶೇಷವಿಲ್ಲದಿದ್ದರೂ ಸಂಪೂರ್ಣ ಹಿಂದೂ ಪದ್ಧತಿ ಪರಿಸ್ಥಿತಿಗಳು ಹೇಗಿವೆಯೋ, ಅದೇ ಪ್ರಕಾರವಾಗಿ ನೆರವೇರಿಸಲ್ಪಡುತ್ತಿವೆ. ಇವುಗಳಲ್ಲಿ ಕೊಡವರ ಪ್ರತ್ಯೇಕ ಸಂಸ್ಕೃತಿ ವೈಚಿತ್ರ್ಯಗಳು ಕಂಡುಬರುವುದಲ್ಲ. ಪೂರ್ವ ಕಾಲದಲ್ಲಿ ಯಾವ ಕ್ರಮಗಳಿದ್ದವೋ ಅದೇ ರೀತಿಯಲ್ಲಿ ಈಗ ಇವೆ. ಎಷ್ಟರ ಮಟ್ಟಿಗೆ ಇವೆ ಎನ್ನುವುದೇ ಒಂದು ಮಹತ್ತಾದ ಪ್ರಶ್ನೆ! ಅದನ್ನು ಸುಲಭವಲ್ಲಿ ಹೇಳುವುದಿದ್ದರೆ ವಿದೇಶಿಯ ನಡೆವಳಿಕೆಗಳ ಅನುಕರಣದಿಂದ ಸಂಪೂರ್ಣ ಮಾಯವಾಗಿವೆಯೆಂದರೂ ಸಲ್ಲುವುದು. ಪದ್ಧತಿ ವಿಶೇಷವನ್ನು ಮುಖ್ಯವಾಗಿ ನಾವು ನೋಡಬೇಕಾದ್ದು ಮದುವೆ, ಹಬ್ಬ, ಸಾವು, ತಿಥಿ ಪ್ರಸಂಗಗಳಲ್ಲಿ ಮತ್ತು ಇತರ ಅಗಣ್ಯವಾದ ಸಂದರ್ಭಗಳಲ್ಲಿ ಆಚರಣೆಯಲ್ಲಿರುವವುಗಳು. ಈ ಪದ್ಧತಿಗಳು ಸಂಪೂರ್ಣ ಹಿಂದೂ ಶಾಸ್ತ್ರದ ಮತ್ತು ಅದಕ್ಕೆ ಸಂಭಂಧಪಟ್ಟ ಜೋತಿಷ್ಯ, ವೈಜ್ಞಾನಿಕ, ಆಯುರ್ವೇದ ಮುಂತಾದ ಶಾಸ್ತ್ರಗಳಲ್ಲಿ ಹೇಳಿದಂತೆ ಅನುಸರಿಸಲ್ಪಡುತ್ತಿವೆಯೆಂದು ಹೇಳಬಹುದು. ಅವುಗಳೆನ್ನೆಲ್ಲಾ ಕ್ರಮವಾಗಿ ಹೇಳಲು ಹೊರಟರೆ ಲೇಖನವು ದೀರ್ಘವಾಗುವುದಲ್ಲದೆ ಸ್ವಲ್ಪ ಅನೌಚಿತ್ಯವೂ ಆಗಬಹುದು. ಹೇಗಿದ್ದರೂ ಪ್ರತಿಯೊಂದು ಶಾಸ್ತ್ರವೂ ವೈಜ್ಞಾನಿಕ ಕ್ರಮದಲ್ಲೇ ಇವೆ. ಚಿಕ್ಕ ಉದಾಹರಣೆಯೊಂದನ್ನು ಮಾತ್ರ ಕೊಟ್ಟು ವಿಷಯಗಳನ್ನು ಸಂಕೋಚಪಡಿಸುವೆವು:—

ಬೊಳ್ಳೋಡ್ ಮುಕ್ಕಾಲಿ ಬೊಳ್ಳಿ ತಳಿಯು,
ಬೊಳ್ಳಿ ತಳಿಯುತ್ ಸಣ್ಣಕ್ಕಿ ಬೋಜ,
ಸಣ್ಣಕ್ಕಿ ಮೀಡಲ್ ಪೊನ್ನ್ ಬೊಳಕ್,
ಪೊನ್ನ್ ಬೊಳಕ್‌ಲ್ ಪಯ್ಯುಡ ನೆಯ್ಯ್,
ಪಯ್ಯುಡ ನೆಯ್ಯ್, ಪರತಿ ತಿರಿಯು,
ಪರತಿ ತಿರಿಗೊಂಡ್ ಕತ್ತುವ ತಿತ್ತ್,

ಇವರಲ್ಲಿ ಕೊಟ್ಟ ಮುಕ್ಕಾಲಿ, ತಳಿಯು, ನೆಯ್ಯ್, ತಿರಿ ಮೊದಲಾದ ಸಾಮಾನುಗಳನ್ನು ಉಪಯೋಗಿಸುವುದದ್ದರೆ, ಆ ವಸ್ತುಗಳಲ್ಲಿ ಆಯಾ ಗುಣಕ್ಕನುಗುಣವಾಗಿ ಪ್ರತ್ಯೇಕ ವೈಶಿಷ್ಟ್ಯಗಳಿರಬೇಕೆಂದು ವ್ಯಕ್ತವಾಗುವುದು. ಈ ವಿಷಯಗಳಲ್ಲಿ ಹೆಚ್ಚಾಗಿ ಮಲೆಯಾಳದವರಿಂದ ಸೂಚನೆಗಳನ್ನು ತಿಗೆದುಕೊಂಡರೆಂಬಂತೆ ಕಾಣುವುದು. ಕೊಡವರಿಗೂ, ಮಲೆ ಜಿಲ್ಲೆಯುವರಿಗೂ ಹೆಚ್ಚಿನ ಸಂಪರ್ಕವು ಹಿಂದಿನ ಕಾಲದಲ್ಲಿ ಇತ್ತೆಂದು ಹಿಂದೆಯೇ ಹೇಳಿದೆವು. ಹಬ್ಬಗಳಲ್ಲೆಲ್ಲಾ ಮಲೆಯಾಳೀ ಪದ್ಧತಿಗಳ ಅನುಕರಣೆಯೇ ಹೆಚ್ಚು ತೋರುವುದು. ಹಳ್ಳಿಗಳಲ್ಲಿ ಸ್ಥಾನವನ್ನು ಪಡೆದು ನೆಲೆನಿಂತ ಇಗ್ಗುತಪ್ಪ, ಸಾತ್ತಾವು, ಸುಬ್ರಹ್ಮಣ್ಯ, ಬೈತೂರಪ್ಪ, ಮಲೆದೇವರು ಇತ್ಯಾದಿ ದೇವತೆಗಳ ಮೂಲಸ್ಥಾನವೆಲ್ಲವೂ ಮಲೆಯಾಳವೇ ಆಗಿವೆ. ಕೊಡವರ ಮಾತಿನ ಹೆಚ್ಚಿನ ಶಬ್ದಗಳೆಲ್ಲವೂ ಮಲೆಯಾಳೀ ಶಬ್ದಗಳಾಗಿವೆ. ಕೊಡವರು ನೆರವೇರಿಸುವ ಅನೇಕ ಹಬ್ಬಗಳಿಗೆ ಮಲೆ ಸೀಮೆಯಿಂದ "ಬಣ್ಣರು" ಬಾಸು "ತೆರೆ" ಇತ್ಯಾದಿಗಳನ್ನು ಕಟ್ಟುತ್ತಾರೆ. ಹಿಂದಿನ ಕಾಲದಲ್ಲಿ ಇವೆರಡು ಸೀಮೆಗಳು ಪರಸ್ಪರ ವ್ಯವಹಾರಗಳಲ್ಲಿ ಬಹಳ ಸಮೀಪವಿದ್ದುವೆಂದು ವ್ಯಕ್ತವಾಗುವುದು. ಮೂಲೆ ಮೂಲೆಗಳಲ್ಲೂ ಈ ದೇವತೆಗಳು ಕುಡುಮಲೆಯ ಈ ಕಾಡಿನಲ್ಲಿ ಸ್ಥಾನವನ್ನು ಹುಡುಕಿ ನೆಲೆಗೊಳ್ಳಬೇಕಾಗಿದ್ದರೆ, ಬಹು ದೊಡ್ಡ ವಾದ ವಿವಾದಗಳು ಹಿಂದಿನ ಅರಸರು, ಬಾಚೆಕಾರರು ಅಥವಾ ತಕ್ಕರು ಇವರೊಳಗೂ, ಅಲ್ಲಿಯುವರಿಗೂ ನಡೆದಿವೆಯೆಂದು ತಿಳಿಯುವುದು. ಕೊಡವರು ತಮ್ಮ ಏನೊಂದು ಕಾರ್ಯಗಳನ್ನು ಪ್ರಾರಂಭಿಸಬೇಕಾದರೂ "ಕಣಿಯ"ನನ್ನು ಅಭಿಪ್ರಾಯ ಕೇಳುವರು. ಈ ಜೋತಿಷ್ಯನಿಗೆ ತುಂಬಾ ಮರ್ಯಾದೆಯನ್ನು ಸಲ್ಲಿಸುತ್ತಿದ್ದರು. ಅಲ್ಲದೆ ಕಾಯಿಲೆ ಬಿದ್ದರೆ ವೈದ್ಯನನ್ನು ಆಶ್ರಯಿಸುತ್ತಿದ್ದರು. ಈ ವೈದ್ಯನು ಮಲೆಯಾಳಿಯೇ ಆಗಿ ಆಯುರ್ವೇದ ಶಾಸ್ತ್ರದಲ್ಲಿ ಪ್ರಬಲವಾದ ಪಾಂಡಿತ್ಯವನ್ನು ಪಡೆದಿರುತ್ತಾನೆ. ಮನೆ ಇತ್ಯಾದಿಗಳನ್ನು ಕಟ್ಟಬೇಕಾದರೆ ಶಿಲ್ಪಿ ಶಾಸ್ತ್ರಿಯನ್ನು ಕರೆಸಿ ಅಭಿಪ್ರಾಯ ಕೇಳುವರು. ಇವನಾದರೋ ಮಲೆಯಾಳದವನೇ ಆಗಿರುವನು. ಈ ರೀತಿಯಲ್ಲಿ ಕುಡುಮಲೆಗೂ, ಪಡುಮಲೆಗೂ

ನಿಕಟ ಬಾಂಧವ್ಯವು ಬೆಳೆದಿತ್ತು. ನಿಜವಾಗಿಯೂ ಮಲೆಯಾಳದವರು ಹಿಂದೂ ಸಂಸ್ಕೃತಿಯನ್ನು ಇಡೀ ಹಿಂದೂಸ್ಥಾನದಲ್ಲಿ ಬೇರಾರೂ ಪಾಲಿಸದ ಕ್ರಮದಲ್ಲಿ ಈಗಲೂ ಪಾಲಿಸುತ್ತಿದ್ದಾರೆಂದು ನಿಸ್ಸಂದೇಹವಾಗಿ ಹೇಳುವೆವು. ವ್ಯಾಪಾರಕ್ಕೂ ಹಿಂದಿನ ಕಾಲದಲ್ಲಿ ಅವರನ್ನೇ ಆಶ್ರಯಿಸುತ್ತಿದ್ದರು. ಕೊಡಗಿನಲ್ಲಿ ಇಂದು ಕಾಣುವ "ಎರವ"ರೆಂಬ ಕೆಲಸಗಾರರು, ಹಿಂದಿನ ಕಾಲದಲ್ಲಿ ಕೊಡವರು, ಮಲೆಯಾಳ ಜಿಲ್ಲೆಯಿಂದ ಕ್ರಯಕ್ಕೆಂದು ಪಡಕೊಂಡ ಕೂಲಿ ವರ್ಗದ ಜನರೆಂದು ತಿಳಿದುಬಂದಿದೆ. ಕೊಡವರ ಹಲವು ಆರಾಧ್ಯ ದೇವತೆಗಳೆಲ್ಲವೂ ಮೂಲ ರೂಪದಲ್ಲಿ ಮಲೆಯಾಳದಲ್ಲೇ ಜನ್ಮ ಹೊಂದಿದರೂ, ಕೊಡವರು ತಕ್ಕ ಭಕ್ತಿ, ಗೌರವ ಪ್ರೀತಿ ನಂಬಿಕೆಗಳನ್ನಿಟ್ಟು ಆರಾಧಿಸುತ್ತಾ, ಅವರ ಹಬ್ಬ ಮೊದಲಾದುವುಗಳನ್ನು ಧರ್ಮಬದ್ಧವಾದ ಕ್ರಮದಲ್ಲಿ ಜರುಗಿಸುತ್ತಾ, ಕೊಡವ ಸಂಸ್ಕೃತಿಯನ್ನು ಅವರ ಲೌಕಿಕ ಸ್ವರೂಪದಲ್ಲಿ ಉಚ್ಛ ವರ್ಗದಲ್ಲಿರಿಸುತ್ತಾ ಬಾಳಿದರೆಂಬುದನ್ನೂ ಈ ಪ್ರಸಂಗದಲ್ಲಿ ಹೇಳಬಹುದಾಗಿದೆ.

ಹಿಂದೆ, ನಿಯಮಬದ್ಧವಾದ ಕ್ರಮದಲ್ಲಿ ಶಾಸ್ತ್ರಾನುಕರಣೆಗಳಿದ್ದರೂ ಕೆಲವು ಸಂದರ್ಭಗಳಲ್ಲಿ ಅವುಗಳಲ್ಲಿ ಅಭಾವವು ಕಂಡು ಬಂದದ್ದಿವೆ. ದೃಷ್ಟಾಂತಕ್ಕಾಗಿ ಹೇಳುದಪ್ಪರೆ ಕೊಡವರಿಗೆ ಒಂದು ಸಂದರ್ಭದಲ್ಲಿ "ಹೊಸ ಅಕ್ಕಿ"ಯನ್ನು ಗದ್ದೆಯಿಂದ ತರಲು ಮೂಹೂರ್ತ ಇತ್ಯಾದಿ ಇಲ್ಲದಿದ್ದಾಗ, ಅವರೇನು ನಾಡಾಡಿಗಳಂತೆ ಸುಮ್ಮನಿದ್ದರೆ?

ಪೊನ್ನ್ಮಲೆ ಕೊಡವುಲ್   ಮೂರುತೊಂಡು ಇಲ್ಲೆಲ!
ನಟ್ಟ ಬೊಳಿ ಕೊಯ್ಯುವ್ಕ್

ಎಂದು ವ್ಯಸನಪಟ್ಟುಕೊಂಡರು. ಕಡೆಗೆ ನೆರೆಪೂರಾದ ಮಲೆಯಾಳದ ಸಂಪರ್ಕವು ಆ ಕಾಲದಲ್ಲಿ ಹೆಚ್ಚಿದ್ದುದರಿಂದ ಇದೊಂದು ವಿಷಯದಲ್ಲಿ ಕೊಡವರು ಅವರನ್ನು ಅನುಕರಿಸಿದರು. ಮಲೆಯಾಳದಲ್ಲಿ ಹೊಸ ಬತ್ತವನ್ನು ಗದ್ದೆಯಿಂದ ಪ್ರಥಮ ಬಾರಿಗೆ ಮನೆಗೆ ತರುವ ಸಂದರ್ಭದಲ್ಲಿ 'ಓಣ'ವೆಂಬ ದೊಡ್ಡ ಹಬ್ಬವನ್ನು ಆಚರಿಸುವಂತೆ ಕಂಡು ಬಂದುದರಿಂದ ಕೊಡಗರೂ ಸಹ ಅದೇ ರೀತಿಯಾಗಿ ಅನುಸರಿಸಲು ಹೊರಟರು! ಇಲ್ಲಿ ಒಂದನ್ನು ಆಲೋಚಿಸಬೇಕಾಗಿದೆ ಈಗಿನ ಕಾಲಕ್ಕೆ ಪದ್ಧತಿಗಳ ಹೊರೆಯು ಭಾರವಾಗಿ ನಮ್ಮನ್ನು ಅವು ಬಾಧಿಸುತ್ತಿವೆಯೆಂದು ನಾವು ತಿಳಿದರೆ ಆ ಕಾಲಕ್ಕೆ ಆಚಾರವಿಲ್ಲದೆ ಅನಾಗರಿಕರಂತೆ ಬಾಳುವುದು ಅಸಹ್ಯಕರವೆಂದು ಹಿರಿಯರು ತಿಳಿದಿದ್ದರು. ಮಲೆಯಾಳದಲ್ಲಿ ಓಣದ ಹಬ್ಬವು ಆಚರಿಸುವುದಕ್ಕೆ ಸರಿಯಾಗಿ ಕೊಡಗರೂ ಸಹ "ಪುದಿಯ+ಅರಿ"; ಪುತ್ತರಿ ಎಂಬ ಹೆಸರಿನಿಂದ ಹುತ್ತರಿ

ಎಂಬ ಮುಹೂರ್ತವನ್ನು ನಾಳು ನಕ್ಷತ್ರಕ್ಕೆ ಸರಿಯಾಗಿ ಆಚರಿಸಲು ತೊಡಗಿದರು.

ಪೊಮ್ಮಾಲೆ ಕೊಡವುಲ್, ಅಮ್ಮಂಗೂ ಕೊಡವಂಗೂ,
ನಟ್ಟಬೊಳಿ ಕೊಯ್ವುಕ್, ಓಣತ್‌ರ ಮುಂಬಾಡ್.

ಎಂದೀರೀತಿಯಲ್ಲಿ ನಿರ್ಣಯಿಸಿಕೊಂಡರು. ಹೀಗೆ ತಮ್ಮ ಸಂಸ್ಕೃತಿಯ ಮಹತ್ತಾದ ಮಹಲನ್ನು ಕಟ್ಟಿ, ಸುಖವಾಗಿ ಜನಜನಿತವಾದ ಜನಾಂಗದಂತೆ ಬಾಳಲು ನಿಶ್ಚಯಿಸಿಕೊಂಡರೆಂಬಂತೆ ಭಾಸವಾಗುವುದು. ಹೀಗೆಯೇ ಸಾವು, ಮದುವೆ ಪದ್ಧತಿಗಳಲ್ಲೆಲ್ಲಾ ಅನುಸರಿಸಿದರು. ಮದುವೆಗಳಲ್ಲಿ ಬ್ರಾಹ್ಮ, ಅಸುರ, ಗಾಂಧರ್ವ, ಮೊದಲಾದ ವಿಧದ ವಿವಾಹ ಪದ್ಧತಿಗಳು ಪೂರ್ವದಲ್ಲಿದ್ದುವೆಂದು ತಿಳಿದುಬಂದಿವೆ. ಕೊಡವರ ಈ ಮೇಲಿನ ಪದ್ಧತಿಗಳನ್ನು ಸಂಪೂರ್ಣವಾಗಿ ಕೊಡವರೇ ಅಲ್ಲದೆ ಐರಿ, ಹೆಗ್ಗಡೆ, ಮಡಿವಾಳ ಮತ್ತು ನಾಯಿಂದ ಅಥವಾ ಹಜಾಮ ಕೆಲಸದವರೂ ಅನುಸರಿಸುವರು. ಕೊಡವರಲ್ಲಿ ಅಮ್ಮ, ಸಣ್ಣ, ಮಲ್ಲ ಮತ್ತು ಬೊಡ್ಡು ಕೊಡವರೆಂಬ ಪಂಗಡಗಳಿದ್ದುವೆಂದು ತಿಳಿದು ಬರುತ್ತವೆ. ಈಗ ಈ ವಿಭಾಗಗಳೆಲ್ಲವೂ ನಾಮಶೇಷವಾಗಿವೆ.

ಕೊಡವ ಜನಾಂಗದ ಮತ್ತು ಜನತೆಯ ಸಾಮೂಹಿಕ ಕ್ಷೇತ್ರದಲ್ಲಿ ಕಂಡುಬರುವ ಸಂಸ್ಕೃತಿಯ ವಿಷಯವಾಗಿ ಸಾಧಾರಣಮಟ್ಟಿಗೆ ಹೇಳುತ್ತಾಬಂದೆವು. ಹಿಂದೆಯೇ ಹೇಳಿದಂತೆ ಜನರ ಪರಂಪರಾಪ್ರಾಪ್ತವಾದ ತಿಳಿವು ಇಷ್ಟರ ಮಟ್ಟಿಗೆ ಕಾಲದೇಶಗಳ ಪ್ರಮಾಣಗಳನ್ನನುಸರಿಸಿ ಸಾಂಸ್ಕೃತಿಕ ಸ್ವರೂಪದಿಂದ ಉಕ್ಕುತ್ತಾ ಬಂದಿದೆ. ಆದರೆ ಈ ರೀತಿಯಲ್ಲಿ ಇಷ್ಟು ಚಿಕ್ಕ ಜನಾಂಗವು ಪ್ರತ್ಯೇಕವಾಗಿ ಬೇರ್ಪಡಲು ಹೇಗೆ ಕಾರಣವಾಯಿತು ಎಂದು ತಿಳಿಯಲು ಅಶಕ್ಯವಾಗಿ ಕಾಣುವುದಿಲ್ಲ. ಹೇಗೂ ಕೊಡಗರು ಉತ್ತರದೇಶದಿಂದ ಬಂದು ಪ್ರತ್ಯೇಕ ಜನಾಂಗವಾಗಿ ಬೆಟ್ಟಗುಡ್ಡಗಳಿಂದ ಕೂಡಿದ ಈ ಭೂಬಯಲನ್ನು ತಮ್ಮ ನೆಲೆಗೆ ಸ್ಥಾನವನ್ನಾಗಿ ಆರಿಸಿಕೊಂಡು ಹಿಂದೆಯೇ ಸೂಚಿಸಿದಂತೆ ತಕ್ಕಾಮೆ, ಒಕ್ಕಾಮೆಗಳ ವ್ಯವಸ್ಥೆಗಳ ಮೇರೆ ಬಾಳುತ್ತಿದ್ದರು. ಆ ಪ್ರಯುಕ್ತ ಸದ್ಯಕ್ಕೆ ಅವರ ವಂಶ, ಮೂಲ, ಮತಗಳ ವಿಷಯ ಪ್ರಸ್ತಾಪಿಸುವುದು ಅನವಶ್ಯ. ಬಹು ಕಷ್ಟಪಟ್ಟು, 'ಆಳಾಗಿ ದುಡಿದು ಅರಸಾಗಿ ಉಣ್ಣಬೇಕು,' ಎಂಬ ನಾಣ್ಣುಡಿಯಂತೆ ಇವರು ತಮ್ಮ ಕಾರ್ಯಕ್ಷೇತ್ರದಲ್ಲಿ ಸಾಹಸಕಾರ್ಯಗಳನ್ನು ಮಾಡುವುದರಲ್ಲಿಯೇ ಮಗ್ನರಾಗಿರುತ್ತಿದ್ದರು. ದೈವಿಕವಾದ, ದೈವಯತ್ನಗಳಲ್ಲಿ ಹೆಚ್ಚಾದ ನಂಬಿಕೆಯನ್ನಿಟ್ಟು, ಯಾವ ಕಾಲಕ್ಕೂ ಪ್ರಾಚೀನ ಕಾಲದ ಆರ್ಯರಂತೆ ದೇವರನ್ನು ನೆನೆಯುತ್ತಾ, ಭೌತಿಕ ಶಕ್ತಿಯನ್ನೂ, ಪ್ರಾಕೃತಿಕ ಅಂಶಗಳನ್ನೂ ದೇವತಾಭಾವದಿಂದ ಕಾಣುತ್ತಾ ಸಾಗುತ್ತಿದ್ದರು.

ಗೋಪೂಜಾಕ್ರಮದಲ್ಲೂ ಸಹ ಕೊಡವರು ಹಿಂದಿರಲಿಲ್ಲ. ಆರ್ಯರು ಗೋವು ಎಂದರೆ ಲಕ್ಷ್ಮಿಗೆ ಸಮಾನವಾಗಿ ಕಾಣುತ್ತಿದ್ದರು. ಆರ್ಯರ ಋಕ್‌ಮಂತ್ರಗಳಲ್ಲಿ ಗೋವಿನ ಸ್ತುತಿಯು ಎಷ್ಟೋ ಇವೆ. ಅಲ್ಲದೆ ಈ ದೇಶವು ಶುದ್ಧ ಗೋವಿನ ಸಹಾಯದಿಂದ ಆವರಿಸಿಕೊಂಡಿರುವುದರಿಂದ ಅವುಗಳಲ್ಲಿ ಇನ್ನಷ್ಟು ದಯೆಯೂ ಭಕ್ತಿಯೂ ಸ್ವಾಭಾವಿಕವಾಗಿ ಹರಿದಿರುವವು. ಗದ್ದೆ ಕೆಲಸವೆಲ್ಲಾ ಮುಗಿದನಂತರ ದನವನ್ನು ಸ್ನಾನಮಾಡಿಸಿ ಅವುಗಳನ್ನು ಪೂಜೆಮಾಡುವರು. ಪ್ರಾರಂಭಿಸುವಾಗಲೂ ದನಗಳನ್ನು ಶುಭದಿವಸ ಪ್ರಾತಃಕಾಲ ಗದ್ದೆಗೆ ಹೊಡೆದುಕೊಂಡು ಹೋಗಿ, 'ಸಣ್ಣಕ್ಕಿಕ್ಕೈಲಾಯಿ, ಸೂರಿಯನ ತೊತ್ತಿತ್; ಚೋವ್ವೈಯುಂಡ ಮಂಡೆಕ್, ಬೊಳ್ಳಿನೊಗ ಬೆಚ್ಚತ್' ಎಂಬಂತೆ ಹಾಡಿ, ಗೋವನ್ನು ಸ್ತುತಿಸಿ ಕೆಲಸ ಪ್ರಾರಂಭಿಸುವರು. ಬಸವನನ್ನು ಆಡಿಸುವುದೂ, ಕುಣಿಸುವುದೂ, ಮಾತಾಡಿಸುವುದೂ ಮೊದಲಾದ ಕ್ರಮಗಳು ಹಿಂದಿನ ಕಾಲದಲ್ಲಿ ಇದ್ದುವಂತೆ. ಶೈವತತ್ವದಲ್ಲಿ ಬಸವನೇ ಪ್ರಧಾನಪುರುಷ. ಕೊಡವರು ಶುಭಕಾರ್ಯ ಸಂದರ್ಭಗಳಲ್ಲಿ ಅನೇಕ ಬಗೆಯ ದಾನವನ್ನು ಮಾಡುವರೆಂದು ಹಿಂದೆಯೇ ನಿರೂಪಿಸಿವೆಯಷ್ಟೆ. ಅದರಲ್ಲಿ ಗೋವನ್ನು ಸಹ ಸೇರಿಸಿರುವರು. 'ಅನ್ನದಾನ ಒಬ್ಬಂಗ್, ಗೋವುದಾನ ಒಬ್ಬಂಗ್; ಸ್ವರ್ಣದಾನ ಒಬ್ಬಂಗ್,' ಎಂದು ಉಲ್ಲೇಖಿಸಲ್ಪಟ್ಟಿದೆ. ಇದರಿಂದ ಮಾನವನ ಜೀವನಾಧಾರವಾದ ಸಾಧನಗಳಲ್ಲಿ ಮುಖ್ಯವಾದ ಗೋವಿನ ಸತ್ಕಾರದಲ್ಲಿ ಆರ್ಯರು ನಿರತರಾಗಿದ್ದುದು ವೇದೋಕ್ತವಾಗಿದೆ. ಅದನ್ನು ಕೊಡವರು ಸಹ ಪಾಲಿಸದೆ ಬಿಡಲಿಲ್ಲ. ಈಗಲೂ ಊರೂರುಗಳಲ್ಲಿ ದೇವಸ್ಥಾನಗಳೂ, ಪುಣ್ಯಕ್ಷೇತ್ರಗಳೂ, ಪೂಜಾರ್ಹವಾದ ಸ್ಥಳಗಳೂ ಕಾಣಲಿಕ್ಕೆ ಸಿಕ್ಕುವುದಲ್ಲದೆ ಅವುಗಳಲ್ಲಿ ಪೂಜೆ, ಕಾಣಿಕೆ, ಅರಿಕೆ ಮುಂತಾದುವುಗಳನ್ನು ಅರ್ಪಿಸುವುದೂ, ಸಕಾಲದಲ್ಲಿ ವಿಜೃಂಭಣೆಯಿಂದ ಹಬ್ಬಗಳನ್ನು ಜರುಗಿಸುವುದೂ ಆಚರಣೆಗಳಲ್ಲಿ ಕೂಡಿವೆ. ಈಗಲೂ ಅಂಥಾ ಪುಣ್ಯಸ್ಥಳಗಳ ದರ್ಶನಮಾತ್ರದಿಂದ ನಮ್ಮ ಮನಸ್ಸು ಬಹು ಹಿಂದಿನ ಕಾಲಕ್ಕೆ ಹೋಗಿ, ಅಂದಿನ ಜನಜಾಗ್ರತಿಯನ್ನು ನೆನಪಿಗೆ ತರುತ್ತವೆ. ಕಾವೇರಿಕ್ಷೇತ್ರವು ಇನ್ನಷ್ಟು ಪಾವನತಮವಾದುದಾಗಿದೆ. ಬ್ರಹ್ಮಗಿರಿ ಬೆಟ್ಟವೂ, ಕಾವೇರಿ ತೀರ್ಥೋದ್ಭವ ಸ್ಥಾನವೂ, ಭಗಂಡೇಶ್ವರ ದೇವಾಲಯಗಳೂ, ಸಪ್ತಋಷಿಗಳ ತಪಸ್ಥಾನವೂ, ಸಹ್ಯಾದ್ರಿ ಸುತ್ತಲಾವರಿತವಾದ ವಾಯುವ್ಯಗಿರಿ, ಗಜರಾಜಗಿರಿ, ಆಗ್ನೇಯಗಿರಿ ಮೊದಲಾದವುಗಳ ದೃಶ್ಯವೂ, ಉದ್ಬುದ್ಧ ಹರಡಿದ ಗಿರಿಕಂದರಗಳೂ ನೋಡಲು ಅದೆಷ್ಟು ಹರ್ಷವನ್ನುಂಟುಮಾಡುವುವು! ಎಷ್ಟು ದೇವಸ್ಥಾನಗಳು ಅಂದವಾದ ಶಿಲ್ಪಿಕಲಸ, ಕೆತ್ತನೆ ಕೆಲಸಗಳಿಂದ ಕಳೆಗೊಂಡಿವೆ! ಪಾರಮಾರ್ಥಿಕ ದೃಷ್ಟಿಯಿಂದಲೂ, ಜ್ಞಾನೋದಯವಾಗುವ ದೃಷ್ಟಿಯಿಂದಲೂ

ಈಶ್ವರ ಪ್ರಣೀತವಾದ ಸನಾತನ ಧರ್ಮದ ಅನುಸರಣೆಯನ್ನು ಈ ಚಿಕ್ಕ ಜನಾಂಗವು ಪಾಲಿಸುತ್ತಾ, ತಮ್ಮ ನಿತ್ಯ ಕರ್ಮಗಳಲ್ಲಿ ಕುಲಾಚಾರಗಳಿಗೆ ಮನ್ನಣೆಯನ್ನೀಯುತ್ತಾ ನಡೆಯುತ್ತಿದ್ದರು.

ಮಹಾಭಾರತದಲ್ಲಿ ಹೇಳಿದಂತೆ 'ಆಚಾರಃ ಪ್ರಥಮೋಧರ್ಮಃ' ಎಂಬ ತತ್ವವನ್ನು ಪಾಲಿಸುವುದರಲ್ಲಿ ನಮ್ಮವರು ಹಿಂದಾಗಲಿಲ್ಲ. ಆದರೆ ಕೊಡವರ ಜೇಬಿನೊಳಗೆ ಶ್ರುತಿಸ್ಮೃತಿಗಳಿರಲಿಲ್ಲ. ವೇದೋಪನಿಷತ್ತುಗಳಿರಲಿಲ್ಲ. ಗೀತಾದಿ ಧರ್ಮಗ್ರಂಥಗಳಿರಲಿಲ್ಲ. ಆದರೂ ಅತ್ಯುತ್ಕೃಷ್ಟವಾದ ಸನಾತನ ಧರ್ಮದ ಅನುಕರಣಾಧಾರಿಗಳಾಗಿದ್ದರೆಂಬುದಕ್ಕೆ ಹಿಂದಿನ ಕೊಡವ ಪದ್ಧತಿಗಳೂ, ಧರ್ಮೋಕ್ತವಾಗಿರುವ ಕೊಡವ ಹಾಡುಗಳೂ ಸಾಕ್ಷಿಯಾಗಿವೆ. ವೀರಶೈವ ಮತಪದ್ಧತಿಯು ಕೊಡವ ಪದ್ಧತಿಗೆ ಬಹು ಸಮೀಪವಾಗಿದೆಯೆಂದು ದೃಢೀಕರಿಸಬಹುದು. ಹಾಲೇರಿ ರಾಜವಂಶದವರು ವೀರಶೈವರಾದುದರಿಂದ ಕೊಡಗರ ಎಲ್ಲಾ ಕಾರ್ಯಗಳಲ್ಲೂ ಶಿವನನ್ನೇ ಸ್ತೋತ್ರಮಾಡುವುದನ್ನು ಕಾಣುತ್ತೇವೆ. ವಿಗ್ರಹಾರಾಧನೆಯಲ್ಲೂ, ಲಿಂಗಪೂಜೆಯಲ್ಲೂ ಹೆಚ್ಚಿನ ಆಸಕ್ತಿ ಉಂಟಾಗಲು ಇದೇ ಕಾರಣವಾಗಿದೆ. ಶುಭ ಸಂದರ್ಭಗಳಲ್ಲಿ ಮನೆಯನ್ನು ಹೇಗೆ ಇಟ್ಟಿರುವರೆಂಬುದಕ್ಕೆ ಆರ್ಯಪದ್ಧತಿಯ ಅನುಕರಣವೋ ಎಂಬಂತೆ,

> ಸೂರಿಯ ದೇವಂಡ ರೂಪ ಬರಂದ,
> ನೀರ್‌ಲ್ ತಾವರೆ ರೂಪ ಬರಂದ,
> ಕೆಂಬತ್ತಿ ಪೂವ್‌ರ ರೂಪ ಬರಂದ,
> ತನ್ನಡ ದೇವಂಡ ರೂಪ ಬರಂದ,

ಎಂದು ಮೊದಲಾಗಿ ಹೇಳುವರು. ಪರಮಾತ್ಮನ ಸಾಕ್ಷಾತ್ಕಾರವಾಗಬೇಕಾದರೆ ವೀರಶೈವರ ಹಲವು ಹಾದಿಗಳಲ್ಲಿ ಇದೂ ಒಂದು ಆಗಿರಬಹುದು. ಈ ರೀತಿಯ ಆರಾಧನಾ ರಹಸ್ಯಗಳನ್ನು ಉಲ್ಲೇಖಿಸುವುದಕ್ಕಿಂತಲೂ ಪ್ರಾಜ್ಞರಾದವರು ತಮ್ಮ ಬುದ್ಧಿ ಚಮತ್ಕಾರಗಳಿಂದ ತಿಳಿದುಕೊಳ್ಳುವುದೇ ಲೇಸೆಂದು ಕಾಣುವುದು. ಪ್ರತಿಯೊಂದು ಶಾಸ್ತ್ರವೂ ಅರ್ಥಪೂರ್ಣವಾಗಿದೆ. ಆದರೆ ಅವುಗಳ ಅರ್ಥ, ಮೂಲ, ತಾತ್ಪರ್ಯಗಳನ್ನು ಪರಿಗಣಿಸುವುದು ವ್ಯರ್ಥ ಮತ್ತು ಫಲಕಾರಿಯೂ ಅಲ್ಲ. ಆ ಕಾರಣದಿಂದಲೇ ದೇವಮೂಲ, ಋಷಿಮೂಲ, ನದಿಮೂಲಗಳನ್ನೆಲ್ಲಾ ಶೋಧನೆ ಮಾಡುವ ಅವಕಾಶ ತೆಗೆದುಕೊಳ್ಳಬಾರದೆಂದು ಪ್ರಾಜ್ಞರು ಹೇಳಿರುವರು. ಕೊಡವರು ಎಂದೋ ಒಂದು ಕಾಲದಿಂದ ಅನುಸರಿಸುತ್ತಾ ಬಂದಿರುವ ಈ ಸಂಸ್ಕೃತಿ

ವಿಶೇಷವಾದ ಆಚಾರಗಳು ನಿಸ್ಸಾರ ಮತ್ತು ನಿರರ್ಥಕವಾದವುಗಳಲ್ಲ. ಮುಂಬರುವ ಜನಾಂಗಕ್ಕೆ ಮಾತ್ರ ಅವುಗಳ ರಹಸ್ಯಾರ್ಥಗಳನ್ನು "ಆದಿಮೂಲ ಲೆಲ್ಲೇಲೋ" ಎಂದು ಸ್ಪಷ್ಟವಾಗಿ ಹೇಳಿ ಹೆಚ್ಚಿನ ವಿವರಣೆಯ ತೊಂದರೆಯನ್ನು ತೆಗೆದುಕೊಳ್ಳಲಾರರು.

ಸಾಧಾರಣ ಮಟ್ಟಿಗೆ ಸಂಸ್ಕೃತಿ ಸಂಬಂಧವಾದ ಕೆಲವು ವಿಷಯಗಳನ್ನು ಪ್ರಸ್ತಾಪಿಸುತ್ತಾ ಬಂದೆವು. ಆದರೆ ಅವುಗಳ ಅವನತಿಗೆ ಪ್ರತ್ಯೇಕವಾಗಿ ಕಾರಣಗಳನ್ನು ಹೇಳಬೇಕಾಗಿಲ್ಲವೆಂದು ತೋರುವುದು. ಸ್ವಾರ್ಥಾಪೇಕ್ಷಿಗಳಾದ ನಾವು ಹಿಂದಿನವರ ನಿಗೂಢ ತತ್ವರಾಶಿಗಳನ್ನು ಉಪೇಕ್ಷಿಸುವ ಭಾವಿಕರಾಗಿರುವುದು ಪ್ರಥಮ ಕಾರಣವಾಗಿರಬಹುದು. ನವನಾಗರೀಕತೆಯ ಮೇಲ್ಮಟ್ಟಲಿಗೆ ಏರಿರುವ ಇಂದಿನ ಪ್ರಪಂಚದಲ್ಲಿ ನಾವೂ ನಮ್ಮ ಪಾಲಿಗೆ ಬಂದ ಕರ್ತವ್ಯವನ್ನು ಅಲಕ್ಷ್ಯದಿಂದ ಕಾಣುವುದೂ ಒಂದು ಕಾರಣವಾಗಿರಬಹುದು. ಮೂರನೇದಾಗಿ ಪರಾನುಕರಣ ಎಂದರೆ ಪಾಶ್ಚಾತ್ಯ ವಿದ್ಯೆ, ನೀತಿ, ಉಡುಪು, ಶೈಲಿಗಳನ್ನೆಲ್ಲಾ ಅನುಕರಿಸುವ ನಾವು ಅವುಗಳ ಬಾಹ್ಯಾಡಂಬರಕ್ಕೆ ಬೆರಗಾಗಿ ವರ್ತಿಸುವುದೇ ಆಗಿದೆ. ಹೀಗಾದರೆ ನಮ್ಮ ಕಲೆಗೂ, ಸಾಹಿತ್ಯಕ್ಕೂ ಸಂಸ್ಕೃತಿಗೂ ಸ್ಥಾನವೆಲ್ಲಿ? ವಿದೇಶಿಯ ವಿದ್ಯಾಪರಿಣಾಮವು ಆ ಮಟ್ಟಿಗೆ ನಮ್ಮನ್ನು ಆವರಿಸಿಕೊಂಡಕಾರಣ ನಮ್ಮ ಸ್ವಧರ್ಮದಲ್ಲಿರುವ ತತ್ವ, ಸ್ವದೇಶೀಯರ ಸಾಹಸ, ಸ್ವಭಾಷೆಯಲ್ಲಿನ ಗಾಂಭೀರ್ಯಗಳಾವುದನ್ನೂ ತಿಳಿಯಲಾರದೆ ಇದ್ದೇವೆ. ಇವೆಲ್ಲಕ್ಕೂ ಮೂಲಭೂತವಾದ ಕಾರಣವೊಂದಿದ್ದರೆ ಅದು ನಮ್ಮ ಹೊಟ್ಟೆಯ ಪ್ರಶ್ನೆಯೇ ಆಗಿದೆ. ತತ್ಪರಿಣಾಮವಾಗಿ ಸ್ವಾರ್ಥತೆಯು ನಮ್ಮಲ್ಲಿ ಬೀಜಾವಾಪಮಾಡಿದರೆ ಪಾಶ್ಚಾತ್ಯ ಪೌರಸ್ತ್ಯವೆಂದು ಯಾವುದನ್ನೂ ನೋಡದೆ ಯಾವುದಾದರೊಂದು ಕಾರಣದಿಂದ ಉದರಂಭರಣ ಕಾರ್ಯಕ್ಕೆ ತೊಡಗುವ ಪರಿಸ್ಥಿತಿಗೆ ಬಂದಿದ್ದೇವೆ! ಇದೇ ಚಿಂತನೆಯಿಂದ ಇಡೀ ಭರತ ಖಂಡವು ಮುಳುಗಿದೆ!! ಭಾರತ ಮಾತೆಯು ಸಹ ತನ್ನ ಅಳಿದ ಸಂಸ್ಕೃತಿಯನ್ನು ಕುರಿತು ಆಶ್ಚರ್ಯಪಟ್ಟು ಮರುಕಪಡುತ್ತಿರುವಳು!!! ಒಬ್ಬನು ತನಗೆ ತಾನೇ ದೊಡ್ಡವನೆಂದು ಊಹಿಸಿಕೊಳ್ಳುವಂತೆ, ಪ್ರತಿಯೊಂದು ದೇಶವೂ ತನ್ನ ಸಂಸ್ಕೃತಿ ವಿಶೇಷದ ಘನತೆಯನ್ನು ಕುರಿತು ಹೊಗಳಿಕೊಳ್ಳುವುದು ಸ್ವಾಭಾವಿಕವಾಗಿದೆ.

ಹಿಂದೂ ಅರಸರ ಕಾಲದಲ್ಲಿದ್ದ ಹಿಂದೂ ಸಂಸ್ಕೃತಿ, ಸಾಹಿತ್ಯ ಮತ್ತು ಧರ್ಮ ವಿನಾಶಕ್ಕೆ ಅನಂತರ ಬಂದ ಮುಸಲ್ಮಾನ ಸುಲ್ತಾನರು ಬಹು ಮಟ್ಟಿಗೆ ಕಾರಣಭೂತರೆಂಬುದಾಗಿ ಚರಿತ್ರೆಯಿಂದ ತಿಳಿಯಬಲ್ಲೆವು. ತತ್ಪ್ರಕಾರವಾಗಿ ನಮ್ಮ ಸಂಸ್ಕೃತಿ

ಯುನ್ನೂ, ಚರಿತ್ರಾಂಶಗಳನ್ನೂ ಟೀಪು ಸುಲ್ತಾನರೇ ಮೊದಲಾದವರು ನಿರ್ಮೂಲ ಮಾಡಿದರೆಂಬುದಾಗಿ ಪ್ರತೀತಿ ಇದೆ. ಇದರಲ್ಲಿ ಸತ್ಯಾಂಶವೂ ಇದೆ. ಹೇಗೂ ಮುಸುಕು ಮುಸುಕಾದ ವಾತಾವರಣದಲ್ಲಿ, ದೂರದಲ್ಲಿರುವವನನ್ನು ಹೇಗೆ ಗೊತ್ತು ಹಿಡಿಯಲಸಾಧ್ಯವೋ, ಹಾಗೆಯೇ ಸತ್ಯಕ್ಕೆ ಮುಸುಕುಂಟಾಗಿರುವ ಈ ನಮ್ಮ ಸನ್ನಿವೇಶದಲ್ಲಿ ಹಿಂದಿನ ಯಥಾರ್ಥ್ಯವನ್ನು ಕೀಳ್ತೆಂದು ಬೇರೂರಿಸಲು ಅಸಾಧ್ಯವಾಗಿದೆ. ಹಿಂದಿನ ರೀತಿ ನೀತಿಗಳು ಹೇಗಿದ್ದುವೋ ಯಾರು ಬಲ್ಲರು! ಊಹನಾಮಾತ್ರದಿಂದ ಹೇಳಲು ಸಾಧ್ಯವಿಲ್ಲ. ಹಾಗಿದ್ದರೂ ಉಮ್ಮರ್ ಖಯ್ಯಾಂ ಕವಿಯು ನಮ್ಮ ಈ ಕೆಲವು ದಿವಸದ ಒಡಬಾಳಿನ ಮಧ್ಯೆ ಪಡುವ ಸಾಹಸಕ್ಕೂ ಸತ್ಯಾಂಶವನ್ನು ಶೋಧಿಸುವ ತಾರ್ಕಿಕರ ವಾದಕ್ಕೂ ಬೇಸತ್ತು:-

ಹಿಂದೆಸೆಯ ಬಾಗಿಲಿನ ಬೀಗಕ್ಕೆ ಕೈಯಿಲ್ಲ:
ಮುಂದೆಸೆಯ ತೆರೆಯೆತ್ತಿ ನೋಡಲಳವಲ್ಲ,
ಈ ಯೆಡೆಯೊಳೆರಡು ದಿನ ನೀವು ನಾವೆಂಬ ನುಡಿ
ಯಾಡುವೆವು; ಬಳಿಕಿಲ್ಲ ನೀವು ನಾವುಗಳು.

ಎಂಬುದಾಗಿ ನಿರೂಪಿಸಿದ್ದಾನೆ. ಆದ್ದರಿಂದ ಯಾವುದರ ಗೊಡವೆಯೂ ಇಲ್ಲದೆ, ಯಾವುದರಲ್ಲೂ ಶೋಕಪರಿಪೂರ್ಣರಾಗದೆ ಭವಸಾಗರದಿಂದ ಪುಣ್ಯಾರ್ಜನೆ ಸಹಿತ ದಾಟುವುದೇ ಒಳ್ಳೆದೆಂಬುದಾಗಿ ಭಾವನೆಯಾಗಿದೆ. ಆದರೆ ದಿವಸದಿವಸದ ನಮ್ಮ ಬಾಳಿನಲ್ಲಿ ಸ್ಥಿತಿಯನ್ನು ಉತ್ತಮಗೊಳಿಸುತ್ತಿರಬೇಕು. ಹಳೆದನ್ನು ಹಳಿದು, ಹೊಸದನ್ನು ಮೆಚ್ಚಿ ಮುನ್ನಡೆಯುವ ಮಾರ್ಗದಲ್ಲಿ ನಾವೇ ಸುಧಾರಕರಾಗಿರಬೇಕು. ಹಳೆದನ್ನು ಹಳಿಯುವದಕ್ಕಿಂತ ಅದೇ ಆಚಾರವನ್ನು ಕಾರ್ಯರೂಪಕ್ಕೆ ತಂದರೆ ಏನು ನಷ್ಟವೆಂಬ ಮಾರ್ಮಿಕ ಸುಧಾರಣೆಗೆ ನಮ್ಮಲ್ಲಿ ಕಳೆಯೇರಬೇಕು.

ಈ ದೇಶಕ್ಕೆ "ಕೊಡಗು" ಎಂಬ ಹೆಸರು ಯಾವ ಕಾರಣದಿಂದ ಬಂತೆಂಬುದು ಇಲ್ಲಿಯ ವರೆವಿಗೂ ನಿರ್ಧಾರವಾಗಿಲ್ಲ. ಅನೇಕ ಮಹನೀಯರ ಅನೇಕ ಅಭಿಪ್ರಾಯಗಳಿದ್ದರೂ ನಂಬಲರ್ಹವಾದದ್ದು ಒಂದೂ ಅದರೆಡೆಯಲ್ಲಿ ಕಾಣುವುದಿಲ್ಲ. ಬರೀ ಕಾಲ್ಪನಿಕ ಚಾತುರ್ಯವನ್ನು ತಾಳಿ ಯಾವುದಾದರೆಂದು ದೇಶದ ಹೆಸರಿಗೆ ಹೋಲಿಸಿ ಅಥವಾ ಉಡಿಗೆ ತೊಡಿಗೆಗಳಿಗೆ ಹೋಲಿಸಿ ಹೇಳುವುದು ಹಿತವಲ್ಲ. ಪ್ರತಿಯೊಂದು ದೇಶಕ್ಕೂ, ಗ್ರಾಮಕ್ಕೂ, ಕುಟುಂಬಕ್ಕೂ ಇರುವ ಹೆಸರುಗಳಿಗೆ ಪೂರ್ವಿಕರು ಸಿಕ್ಕಿದ ಹಾಗೆ ಹೆಸರು ಹಾಕದೆ ಅರ್ಥಗರ್ಭಿತವಾದ ಪದ ಸಂಯೋಜನೆಯಿಂದಲೇ ಹೆಸರು ಹಾಕಿರುವರೆಂದು ನಂಬಬೇಕಾಗಿದೆ. ಪ್ರತಿಯೊಂದು ಹೆಸರಿನಲ್ಲೂ

ಅರ್ಥೌಚಿತ್ಯ ಇದೆಯೆಂದು ನಂಬಿದ ನಾವು "ಕೊಡಗು" ಎಂಬ ಹೆಸರನ್ನೇ ಅಲ್ಲದೆ ಕೊಡಗಿನ ನೆರೆಯೂರುಗಳಿಗೆ ಆ ಹೆಸರು ಯಾವ ದೃಷ್ಟಿಯಿಂದ ಬಿದ್ದಿವೆಯೆಂದು ನೋಡುವ. ಮಲೆ ಎಂದರೆ ಮಲೆಕಾಡು "ಯಾಳ" ಎಂದರೆ "ಆರಂ" ಎಂಬ ಪದೋತ್ಪತ್ತಿಯಿಂದ ಗುಡ್ಡ ಪ್ರದೇಶವೆಂಬ ಅರ್ಥವಾಗುವುದು. ಆ ರೀತಿಯಾಗಿ ಕೇರಳ ದೇಶವನ್ನು ಮಲೆಯಾಳವೆಂಬುದಾಗಿ ಕರೆದರು. ಮೈಸೂರಿಗಾದರೋ ಪೂರ್ವದಿಂದಲೇ ಮಾಹಿಷ್ಮತಿ ನಗರ ಅಥವಾ ಮಹಿಷ ಮಂಡಲ ಎಂಬ ಹೆಸರಿತ್ತು. ಕಾರಣ ಎಮ್ಮೆಗಳು ಬಹುವಾಗಿ ಸಿಕ್ಕುವ ಸ್ಥಳ ಎಂಬರ್ಥದಿಂದ. ಅದೇ ರೀತಿ ತಮಿಳುನಲ್ಲಿ "ಎರ್ಮೆಪುರಂ" ಎಂಬ ಹೆಸರಿನಿಂದ ಕರೆಯುತ್ತಿದ್ದರು. ಅದೇ ಈಗ ಸಂಕ್ಷೇಪವಾಗಿ 'ಮಹಿಷೂರ್' ಅನಂತರ ಮೈಸೂರು ಎಂದಾಯಿತು. ನಮ್ಮ ನೆರೆ ಜಿಲ್ಲೆಯಾದ ದಕ್ಷಿಣ ಕನ್ನಡವು ಪೂರ್ವದಿಂದಲೇ ಕನ್ನಡ ದೇಶವೆಂದು ಕರೆಯಲ್ಪಡುತ್ತಿದ್ದುದಾಗಿದೆ. ಈಗ ಕೊಡಗಿನ ವಿಷಯ ಹೇಳುವುದಿದ್ದರೆ ಪುರಾತನ ದ್ರಾವಿಡರ ಕಾಲದಿಂದಲೇ ರೂಢಿಯಲ್ಲಿದ್ದಂತೆ "ಕುಡ" ಎಂದರೆ ಪಶ್ಚಿಮ, "ಆಗಂ" ಎಂದರೆ ಒಳಭಾಗ ಎಂದರ್ಥವಾಗುವುದು. ಕಿಟ್ಟೆಲ್ ಶಬ್ದ ಕೋಶದಲ್ಲಿ ಕುಡ ಎಂದರೆ ಬೆಟ್ಟ ಪ್ರದೇಶವೆಂಬ ಅರ್ಥವಿದೆ. ಹೇಗೂ, ಈ ಪದ ಸಂಯೋಜನೆ ಹೇಗಾಯಿತೆಂದರೆ ಕುಡ + ಆಗಂ; ಕುಡಾಗಂ, ಅನಂತರ ಕೊಡಗು ಎಂಬ ರೂಪಕ್ಕೆ ಬಂದುದಾಗಿದೆ. ಇದು ವ್ಯವಹಾರ ರೂಪದಿಂದುಂಟಾದ ಸಂಪೂರ್ಣ ಅರ್ಥಪೂರ್ಣವಾದ ಹೆಸರಾಗಿದೆ ಕುಡುನಾಡು ಎಂಬದಾಗಿಯೂ ಕರೆಯುವ ವಾಡಿಕೆಯನ್ನಿಟ್ಟುಕೊಂಡಿದ್ದರು. ಇದಕ್ಕೆ ಕುಡಿಯರನಾಡು ಎಂಬ ತಪ್ಪಭಿಪ್ರಾಯವನ್ನು ತಂದುಕೊಂಡಿರುವರು.

ಇನ್ನು ಕೊಡವರ ಮತದಲ್ಲಿ ದೊಡ್ಡ ಸಂದೇಹಪಡುವ ಅವಕಾಶವಿದೆಯೆಂದು ಹಲವರು ಭಾವಿಸಿದರೂ ನಮ್ಮ ದೃಷ್ಟಿಗೆ ಆ ವಿಷಯ ಹೆಚ್ಚು ಹೊಳೆಯುವಂತಿಲ್ಲವು. ಈ ವಿಷಯದಲ್ಲಿ ಯಾವುದೊಂದು ನಿರ್ಣಯಕ್ಕೆ ಇನ್ನೂ ಬಾರದಿರುವದು ವಿಷಾದಕರವಾಗಿದೆ. ಕೊಡವರು, ಹಿಂದೂ ಮತವೋ, ಇಸ್ಲಾಂ ಮತವೋ, ಪ್ರತ್ಯೇಕವಾಗಿ ಕೊಡವಮತವೋ ಎಂಬ ಆಲೋಚನೆಯಲ್ಲಿಯೇ ಇರುವ ಹಾಗೆ ಕಾಣುವುದು. ಆದರೆ ಈ ವರೆಗೆ ಹೇಳುತ್ತಾ ಬಂದ ಕೊಡವ ಸಂಸ್ಕೃತಿಯ, ವಿಷಯ ಸ್ವರೂಪಕ್ಕೆ ಗಮನವಿತ್ತರೆ ಹಿಂದೂ ಮತವಲ್ಲದೆ ಅನ್ಯಮತಗಳಿಂದ ಒಡೆದು ಬಂದುದಲ್ಲವೆಂದು ತಿಳಿಯುವುದು. ಹಲವು ಗ್ರಂಥಕರ್ತರು ತಮ್ಮ ಹೇಳಿಕೆಗಳಲ್ಲಿ, ಉಗ್ರರೆಂದೂ, ತೀಯರೆಂದೂ, ಕ್ಷತ್ರಿಯರೆಂದೂ ಹಲವು ವಿಧವಾಗಿ ಬಣ್ಣಿಸಿರುವರು. ಇವೆಲ್ಲಾ ಸಂಪೂರ್ಣ ನಿರಾಧಾರವಾದವುಗಳು. ಹಿಂದೂ ಮತದ ಕ್ಷತ್ರಿಯ ಶಾಖೆಗೆ ಸೇರಿದವರೆಂದು ಹಿಂದೆ ಸೂಚಿಸಿದ ಕೆಲವು ಸಾಂಸ್ಕೃತಿಕ ದೃಷ್ಟಾಂತಗಳಿಂದ ತಿಳಿದುಕೊಳ್ಳಬಹುದಾಗಿದೆ. 'ಮತ'

ವೆಂದರೆ ಕೇವಲ ಅಭಿಪ್ರಾಯವೆಂದು ಅರ್ಥವಾಗಿದೆ. ಹೀಗೆ ಕ್ರಿಸ್ತ, ಮಹಮ್ಮದ ಮೊದಲಾದವರ ಅಭಿಪ್ರಾಯಕ್ಕನುಗುಣವಾಗಿ ಕ್ರಿಸ್ತ ಮತ, ಮಹಮ್ಮದೀ ಮತಗಳು ಪ್ರಸಿದ್ಧಿಗೊಂಡಿವೆ. ಸನಾತನ ಧರ್ಮವನ್ನು ಅನುಸರಿಸುವುದೇ ಹಿಂದೂ ಮತ ವಾಗಿದೆ. ಹೀಗಿರುವಾಗ ಕೊಡವ ಮತ ಎಂಬುದಾಗಿ ಪ್ರಸಿದ್ಧಿಗೊಳಿಸಿದರೆ ಅದೊಂದು ಅನರ್ಥಕಾರಕವಾದ ಮಾತೇ ವಿನಹ ಬೇರೆ ಏನೂ ಅಲ್ಲ. ಕೊಡವರ ಹಾಗೆ ಪ್ರತ್ಯೇಕ ಜನಾಂಗವು ಚಿಕ್ಕದಾಗಿ ಉತ್ತರ ಹಿಂದೂಸ್ಥಾನದಲ್ಲಿ ಎಷ್ಟೋ ಇವೆ ತಮ್ಮ ಸಂಸ್ಕೃತಿಗನುಸಾರವಾಗಿ ಇಂಥಾ ಮತದವರೆಂಬ ನಿರ್ಣಯದ ಮೇರೆ ನಮ್ಮ ದಿಯಲ್ಲಿ ಇದ್ದಾರೆ. ನಮ್ಮ ಉಡುಪು, ಆಚಾರಗಳ ಸಾಧಾರಣ ಅನುಕರಣೆಯು ಬೇರೆ ಎಲ್ಲಾದರೂ ಕಂಡುಬಂದರೆ ನಾವು ಆ ಪಂಗಡವರೆಂದೂ, ನಮ್ಮವರ ಮೂಲ ಅಲ್ಲಿದೆಯೆಂದೂ ಊಹಿಸಿಕೊಳ್ಳುವುದು ಅಸಭ್ಯತನದ ವರ್ತನೆಯಾಗಿದೆ.

ದಕ್ಷಿಣ ಹಿಂದೂದೇಶದವರೆಲ್ಲರೂ ಆರ್ಯಸಂಸ್ಕೃತಿಯನ್ನೂ, ಆರ್ಯರ ಆಚಾರವನ್ನೂ ಮರೆತುಹೋದ ಶುದ್ಧ ಆರ್ಯಸಂತತಿಗೆ ಸೇರಿದ ಹಿಂದುಗಳೆಂಬು ದಾಗಿ ಸ್ವಾಮಿ ವಿವೇಕಾನಂದರು ಅಭಿಪ್ರಾಯಪಡುತ್ತಾರೆ. ಆರ್ಯರಿಂದ ಪೀಡಿ ಸಲ್ಪಟ್ಟ ದ್ರಾವಿಡರು ಅವರ ಭಾಷೆ ಇತ್ಯಾದಿಗಳನ್ನೆಲ್ಲಾ ಬಿಟ್ಟು ಎಲ್ಲೋ ಮೂಲೆ ಮೂಲೆಗಳಲ್ಲಿ ಅಡಗಿಕೊಂಡರು. ಆದರೆ ಬಹುಕಾಲಾನಂತರ ದಕ್ಷಿಣ ದೇಶದ ಬ್ರಾಹ್ಮ ಣರೂ, ಇತರರೂ ದ್ರಾವಿಡರ ಭಾಷೆಯನ್ನು ಮಾತ್ರ ಪ್ರಚಾರಕ್ಕೆ ತಂದುಕೊಂಡರು. ಆ ಕಾಲಕ್ಕೆ ತಮಿಳು, ತೆಲುಗು, ಕನ್ನಡ, ಮಲೆಯಾಳ ಇತ್ಯಾದಿ ದ್ರಾವಿಡಭಾಷೆಗಳು ವ್ಯವಹಾರದಲ್ಲಿದ್ದುವು. ಹೀಗೆ ಇದ್ದಂಥಾ ಆರ್ಯರಲ್ಲಿ ಕ್ಷತ್ರಿಯ ವರ್ಣದವರಲ್ಲಿ ವಿಶೇಷ ಪರಾಕ್ರಮವಿದ್ದುದೆಂಬುದಾಗಿ ಪ್ರಸಿದ್ಧವಾಗಿದೆ. ನಾಗರಿಕರಾಗಿದ್ದ ದ್ರಾವಿ ಡರನ್ನು ಹಿಂದಟ್ಟಿದ ಆರ್ಯರಲ್ಲೂ ಬೇಕಾದ ಲೋಹಸಾಹಿತ್ಯಗಳಿದ್ದುವು. ಪಶ್ಚಿ ಮಘಟ್ಟಗಳು ಹಾದುಹೋದಂಥಾ ಬೆಟ್ಟಪ್ರದೇಶವಾದ ಕೊಡಗನ್ನೇ ಅವರು ತಮ್ಮ ಜೀವನ ಕಾರ್ಯಕ್ಕೆ ಅನುಕೂಲಪಡಿಸಿಕೊಂಡರು. ಇದಕ್ಕಾಗಿ ಉಗುರಿನಿಂದ ಕೆರೆ ಸರಿಮಾಡಿಕೊಂಡರೆಂಬುದಾಗಿ ಹೇಳುವರು. ಈ ಕಾರಣಗಳಿಂದ ಕೊಡವರು ಹಿಂದೂ ಕ್ಷತ್ರಿಯ ಪಂಗಡಕ್ಕೆ ಸೇರಿದ ಆರ್ಯರೆಂಬುದಾಗಿಯೇ ನಿರ್ಣಯಿಸುವೆವು.

ಇನ್ನೂ ಕೇವಲ ಶೂದ್ರರೆಂಬುದಾಗಿರುವ ಅಪಾದನೆಯನ್ನು ಬಹು ಸುಲಭ ದಿಂದ ತೆಗೆದುಹಾಕಬಲ್ಲೆವು. ಮನುಸ್ಮೃತಿಯಲ್ಲಿ ಶೂದ್ರನೆಂದರೆ ಹಿಂದೂಮತದ ನಾಲ್ಕನೇ ವರ್ಣದವನೆಂದೂ, ಸೇವೆಯೇ ಅವನ ಮುಖ್ಯ ಕಸಬೆಂದೂ ಇತ್ಯರ್ಥಪ ಡಿಸಿದ್ದಾರೆ. ಆದರೆ ಈ ಚಾತುರ್ವರ್ಣ್ಯಗಳ ವಿಭಾಗಪ್ರಕಟನೆಯು ಕೇವಲ ಉತ್ತರ ಹಿಂದೂಸ್ಥಾನಕ್ಕೆ ಮಾತ್ರ ಅನ್ವಯಿಸುವುದಲ್ಲದೆ ದಕ್ಷಿಣ ಹಿಂದೂಸ್ಥಾನಕ್ಕಲ್ಲ. ನಮ

ಹಿಂದೂಪಂಡಿತರು ಪುರಾಣಗಳನ್ನೂ, ಶಾಸ್ತ್ರಗಳನ್ನೂ, ಇನ್ನೂ ತೀಕ್ಷ್ಣದೃಷ್ಟಿಯಿಂದ ಪರಿಶೀಲಿಸಬೇಕಿದೆ. ಉತ್ತರಹಿಂದೂಸ್ಥಾನದಿಂದ ಬಂದ ಆರ್ಯರು ದ್ರಾವಿಡರನ್ನು ಮರುಳುಮಾಡಿ ರಾಜ್ಯಗಳನ್ನು ಕಿತ್ತುಕೊಂಡು ಅವರನ್ನು ಗತಿಹೀನರಾಗಿ ಮಾಡಿದರಲ್ಲವೆ, ಆ ಮಾತ್ರಕ್ಕೆ ಅವರನ್ನು ಶೂದ್ರರೆಂದೂ ಕೀಳುವರ್ಣದವರೆಂದೂ ಕರೆದಲ್ಲಿ ತಪ್ಪಾಗಬಹುದು. ಉತ್ತರದೇಶದಲ್ಲಿ ಶೂದ್ರನೆಂದರೆ ಕೀಳುಜಾತಿಯವನಾದರೆ, ದಕ್ಷಿಣದಲ್ಲಿ ಬ್ರಾಹ್ಮಣರನಂತರದ ವರ್ಣವೆಲ್ಲವನ್ನೂ ಶೂದ್ರವರ್ಗಕ್ಕೆ ಸೇರಿಸಬಹುದು. ಮನುಸ್ಮೃತಿಯಲ್ಲಿ ಪೌಂಡ್ರಕ, ಕಾಂಭೋಜ, ಯವನ, ಶಕ, ಚೀನ, ದ್ರಾವಿಡ ಮೊದಲಾದ ಅನೇಕ ಜನಾಂಗಗಳನ್ನು ಕ್ರಮೇಣ ಜಾತಿಭ್ರಷ್ಟರನ್ನಾಗಿ ಶೂದ್ರವರ್ಣಕ್ಕೆ ಸೇರಿಸಲ್ಪಟ್ಟುವು ಎಂಬುದಾಗಿ ಉಕ್ತವಾಗಿದೆ. ಎಂದ ಮಾತ್ರಕ್ಕೆ ಉನ್ನತಾಧಿಕಾರಿಗಳಾಗಿರುವವರು ದೊಡ್ಡ ವರ್ಣದವರೆಂದೂ, ಅಧಿಕಾರವಿಲ್ಲದವರು ಕೀಳು ವರ್ಣದವರೆಂಬುದಾಗಿಯೂ ಒಂದು ಕ್ಲಿಷ್ಟಭಾವನೆಯನ್ನಿಟ್ಟು ಈ ವಿಭಾಗ ಮಾಡಿ ದರೆಂದು ಗೊತ್ತಾಗುವುದು. ಈ ವಿಷಯವನ್ನು ಪಾಶ್ಚಾತ್ಯ ಪಂಡಿತರು ಚೆನ್ನಾಗಿ ಚರ್ಚಿಸಿರುವರು. ಆ ದೃಷ್ಟಿಯಿಂದ ಶೂದ್ರರೆಂಬ ಮಾತು ದಕ್ಷಿಣಕ್ಕೆ ಅನ್ವಯಿಸದೆಂದೂ, ಕೊಡವರು ಹಿಂದೂಕ್ಷತ್ರಿಯರೆಂದೂ ಚೆನ್ನಾಗಿ ವ್ಯಕ್ತವಾಗುವುದು.

ಹೀಗಿದ್ದರೂ ಕೊಡವರಿಗೆ ಮೂಲರೂಪದಲ್ಲಿ ಮಠ, ಗುರು, ವಿದ್ಯೆಯೆಂಬಿವು ಇವೆಯೊ ಎಂಬ ಪ್ರಶ್ನೆಯು ಸಹಜವಾಗಿ ಉತ್ಪನ್ನವಾಗುವುದು. ಇದು ಹಲವರಲ್ಲಿ ಆಗಾಗ ಉದ್ಭವಿಸುವ ಒಂದು ಮಹತ್ತಾದ ಸಮಸ್ಯೆಯಾಗಿದೆ. ಹಿಂದೆ ಸೂಚಿಸಿದಂತೆ 'ಮಂದು,' ಎಂಬಲ್ಲಿ ಪ್ರತಿಯೊಬ್ಬನ ನ್ಯಾಯತೀರ್ಪು, ಕಲಿಯಬೇಕಾದ ವಿದ್ಯೆ, ತಿಳಿಯಬೇಕಾದ ಸಮಸ್ಯೆಗಳೆಲ್ಲವನ್ನೂ ಹಿರಿಯರು ತಕ್ಕ ಏರ್ಪಾಡುಮಾಡಿ ಕಲಿಸುವ ವ್ಯವಸ್ಥೆಯನ್ನು ಮಾಡಿದ್ದರು. 'ತಕ್ಕ'ರನ್ನೇ ಗುರುಭಾವದಿಂದ ಕಾಣುತ್ತಿದ್ದರು. ಅವನು ಎಲ್ಲಾ ವಿಧದಲ್ಲೂ ಜನರಿಗೆ ಉಪದೇಶಕನಾಗಿಯೂ, ಸದ್ಬೋಧಕನಾಗಿಯೂ ಇರುತ್ತಿದ್ದನು. ಅನಂತರ ವಿದ್ಯೆಯ ಪ್ರಶ್ನೆಗೆ ಅಸ್ತ್ರವಿದ್ಯೆಯೇ ಕೊಡವರು ಗಳಿಸಿಕೊಳ್ಳುತ್ತಿದ್ದಂಥಾ ವಿದ್ಯೆಯಾಗಿದೆ. ಕ್ಷತ್ರಿಯೋಚಿತ ಪದ್ಧತಿಯಂತೆ ಹುಟ್ಟಿ ಹನ್ನೆರಡನೇ ದಿವಸದಲ್ಲೇ ಚಿಕ್ಕ ಬಿಲ್ಲನ್ನು ಕೈಗೆ ಹಿಡಿಸಿ, ಅನ್ನಪ್ರಾಶನ ಮೊದಲಾದ ಕ್ರಿಯೆಗಳನ್ನೂ ನೆರವೇರಿಸಿ, ದೊಡ್ಡವನಾದ ಮೇಲೆ ಕತ್ತಿ ಕೋವಿ ಸಹಿತ ತರಬೇತು ಮಾಡಿ, ಅವನನ್ನು ವೀರನನ್ನಾಗಿ ಮಾಡುವುದೇ ಹಿಂದಿನ ಅಸ್ತ್ರವಿದ್ಯೆಯ ಧ್ಯೇಯವಾಗಿತ್ತು. ಕ್ಷತ್ರಿಯರ ಉಪನಯನಾದಿ ಕ್ರಿಯೆಗಳ ವಿಷಯವಾಗಿ ಕೊಡವರ ಕುರಿತು ಸಂದೇಹಕ್ಕೆ ಅವಕಾಶವಿಲ್ಲವೆಂದು ಹೇಳಬಲ್ಲೆವು. ಅತೀ ಪೂರ್ವದಲ್ಲಿ ನೂಲನ್ನು ಸಹಜವಾಗಿ ಧಾರಣಮಾಡುತ್ತಿದ್ದರೂ, ಇತ್ತೀಚೆಗೆ ಮಾಂಸಾಹಾರಿಗಳಾದ ಕಾರಣ

ಅವರು ನೂಲನ್ನು ಬ್ರಾಹ್ಮಣನೇ ಮೊದಲಾದವರು ಧರಿಸುವ ಹಾಗೆ ಧರಿಸದೆ, ಸೊಂಟದ ಸುತ್ತಲು ಕಟ್ಟುವ ಪದ್ಧತಿಯನ್ನು ಮಾತ್ರ ಇಟ್ಟುಕೊಂಡಿರುವರೆಂದು ಬಲ್ಲ ವರು ಹೇಳುತ್ತಾರೆ. ಮುಂದನ್ನೇ ಮಠವೆಂದೂ, ತಕ್ಕ ಎಂದರೆ ಗುರು, ಇವನನ್ನೇ ಸ್ವಾಮಿಯಂತೆಯೂ, ಅಸ್ತ್ರವಿದ್ಯೆಯೇ ಜನಸಹಜವಾದ ವಿದ್ಯೆಯೆಂದೂ ಕೊಡವರಲ್ಲಿ ನಂಬಿಕೆಯಿತ್ತೆಂದು ಮೇಲೆ ಹೇಳಿದೆವು. ತಕ್ಕನನ್ನು ಎಲ್ಲಾ ವಿಧದಲ್ಲೂ ಸರಿಯಾದ ದಾರಿಗೆ ಕೊಂಡೊಯ್ಯಲು, ಮತ್ತು ಮಂತ್ರಿಯಂತೆ ಮಾರ್ಗದರ್ಶಕನಾಗಿ 'ಮುಕ್ಯಾಟ' ಎಂಬವನೂ, ಅವನ ಹಿಂದೆಯೇ ಯಾವಾಗಲೂ ಅವನ ರಕ್ಷಣೆಗಾಗಿ 'ಚಂಗ್ರೋಲ' ಎಂಬವನೂ, ಅವನ ಕಾರ್ಯದರ್ಶಿ ಹಾಗೂ ಖಜಾನ್ಜಿಯಾಗಿ 'ಕಾವುಕಾರ' ಎಂಬ ವನೂ ಇರುತ್ತಿದ್ದರೆಂಬುದಾಗಿ ತಿಳಿದುಬಂದಿದೆ. ಹೀಗೆ ಹಿಂದಿನ ಕಾಲದ ವ್ಯವಸ್ಥಾ ಸಮಸ್ಯೆಗಳು ಹಲವು ರೀತಿಯಲ್ಲಿ ಆದರಪೂರ್ವಕವಾಗಿದ್ದುವು. ಒಬ್ಬ ಹುಡು ಗಿಯು ತನ್ನ ಹುಟ್ಟುಮನೆಯನ್ನು ಬಿಟ್ಟು ಹೋಗುವಾಗ ಅವಳಿಗೆ ಇನ್ನು ಆ ಮನೆ ಯಲ್ಲಿ ಇಟ್ಟ ಹಕ್ಕು ಎಷ್ಟೆಂದರೆ ಬರೀ, 'ಪನ್ನೆರಂಡಚ್ಚಿರ ಪೊನ್ನ್' ಎಂಬುದಾಗಿ ನಿರ್ಣ ಯಿಸಿದರು. ಒಂದು 'ಅಚ್ಚ್' ಎಂದರೆ ಭರೇ ಹದಿನಾಲ್ಕು ದುಡ್ಡು ಎಂಬುದಾಗಿ ಹಿಂದಿ ನವರ ಲೆಕ್ಕವಾಗಿದೆ. ಈ ಮೊದಲಾದ ಅನೇಕ ವಿಷಯಗಳು ತಿಳಿಯಲು ಸ್ವಾರಸ್ಯ ವಾಗಿವೆಯಲ್ಲದೆ ಭಾರತೀಯ ಸಂಸ್ಕೃತಿಯ ಪಡಿಯಚ್ಚು ನಮ್ಮ ಸಂಸ್ಕೃತಿಯ ಮೇಲೂ ಬಿದ್ದದೆಯೆಂದು ಮತ್ತೊಮ್ಮೆ ಹೇಳುವೆವು.

ದ್ರಾವಿಡ ಭಾಷಾ ವಿಶಾರದರಾದ ಭಿಶಪ್ ಕಾಲ್ಡ್ವೆಲ್ಲರು, 'Coorg is a small, but interesting district formerly an independent principality, beautifully situated among the ridges of the Western Ghauts' ಎಂದು ಹೇಳಿ, ಕೊಡಗು ಎಂಬ ಹೆಸರು ಸಹ ಮೇಲಿನ 'ಕುಡ' ಎಂಬ ಶಬ್ದದಿಂದಲೇ ಉತ್ಪನ್ನವಾದುದೆಂಬದಾಗಿ ಹೇಳಿರುವರು. ಅಲ್ಲದೆ ಇವರೂ ಸಹ ಕೊಡವ ಸಾಂಸ್ಕೃತಿಕ ಸ್ವರೂಪವು ಪ್ರತ್ಯೇಕವಾಗಿ ನೆಲೆಸಿದ್ದೆಂ ಬದಾಗಿ ಅಭಿಪ್ರಾಯವುಳ್ಳವರಾಗಿದ್ದಾರೆ. ಕೊಡವ ಭಾಷೆಯನ್ನೂ ಸಹ ದ್ರಾವಿಡ ಭಾಷೆಗಳಲ್ಲಿ ಪ್ರಥಮ ವರ್ಗಕ್ಕೆ ಸೇರಿಸಿದ್ದಾರೆ. ಹಿಂದೂ ದೇಶದ ಚರಿತ್ರೆಯನ್ನು ಬರೆದ ವಿನ್ಸೆಂಟ್ ಸ್ಮಿತ್ ಎಂಬವರೂ ಕೊಡಗಿನ ವಿಷಯ ಇದೇ ಅಭಿಪ್ರಾಯವುಳ್ಳವರಾಗಿ ದ್ದಾರೆ. ಮತ, ಜನಾಂಗ, ಭಾಷೆಗಳಲ್ಲಿ ಒಂದು ವಿಶಿಷ್ಟತೆಯಿದೆಯೆಂದೂ, ಬ್ರಾಹ್ಮ ಣೇತರ ವರ್ಗಗಳಲ್ಲಿ ಪ್ರಥಮಸ್ಥಾನದಲ್ಲಿರುವರೆಂದೂ ಅಭಿಪ್ರಾಯಪಟ್ಟಿರುವರು. ವಿನ್ಸೆಂ ಟ್‌ಸ್ಮಿತ್ತರು, 'The Coorgs, a fine race of fighting stock, possess their own language, religion, national dress and

land tencture. Fond of manly sports; they lead an active outdoor life, but fully appreciate the value of education for both sexes. Intellectually they are superior to other non-brahmin communities of Southern India' ಎಂದು ಹೇಳಿದ್ದಾರೆ. ಈ ರೀತಿಯಾಗಿ, ಕಾಲ್ಡ್ವೆಲ್, ರಿಕ್ಟರ್, ರೈಸ್, ಕಿಟ್ಟೆಲ್, ಹೊಲೆಂಡ್, ಕೋಲ್, ಸ್ಮಿತ್, ಬ್ರೌನ್, ಫ್ರೇಸರ್, ಕೋನಾರ್ ಮೊದಲಾದ ಅನೇಕ ಪಾಶ್ಚಾತ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಡಗನ್ನು ಕುರಿತು ಕೊಟ್ಟಿರುವರು. ಕೊಡವರ ಉಡುಪು ಚಿತ್ರಮಯವಾಗಿದೆಯೆಂದೂ, ಭಾಷೆಯಲ್ಲಿ ಇತರ ದ್ರಾವಿಡ ಭಾಷೆಗಳ ಮಿಶ್ರಣವಿದೆಯೆಂದೂ, ಪ್ರಾಂತ್ಯವು ನಿಸರ್ಗರಮಣೀಯವಾಗಿದೆಯೆಂದೂ ಹೇಳಿರುವರು. ನಾವು ನಮ್ಮ ವಿಷಯಗಳನ್ನು ಹೇಳಿಕೊಳ್ಳುವುದಕ್ಕಿಂತಲೂ ಇನ್ನೊಬ್ಬರು ಹೇಳುವುದರಲ್ಲಿ ಸ್ವಲ್ಪವಾದರೂ ವಾಸ್ತವಿಕತೆಯು ಇಲ್ಲದಿರದು. ಆ ಕಾರಣದಿಂದ ಇತರರ ಅಭಿಪ್ರಾಯಗಳನ್ನು ಇಲ್ಲಿ ಕೊಡಲು ಕಾರಣವಾಯಿತು. ಇನ್ನೊಬ್ಬರು ಕೊಡಗಿನ ಪ್ರಾಕೃತಿಕ ಸ್ವರೂಪವನ್ನು ಕುರಿತು–'As Mt. Meru among mountains and jasmine among flowers shine to advantage over others, so in the peninsular India, this charming land of Coorg, shines surrounded, as it is, by a mountain chain, compares with a pearl necklace rounding the beauteous curve of maiden neck.' ಎಂದು ವರ್ಣಿಸಿದ್ದಾರೆ. ಕೊಡಗು ಭಾಷೆಯಲ್ಲಿ ಎಷ್ಟರ ಮಟ್ಟಿಗೆ ನಾಣ್ಣುಡಿಗಳೂ, ಕಥೆಗಳೂ, ಹಾಡುಗಳೂ ತುಂಬಿವೆಯೆಂದು ಹಿಂದೆಯೇ ಸಾಕಷ್ಟು ಆಧಾರಗಳನ್ನು ಸೂಚಿಸಿದೆವು. ಅವುಗಳ ಸಮೃದ್ಧಿಯು ಈ ಚಿಕ್ಕ ಜನಾಂಗದೆಡೆಯಲ್ಲಿ ವಿಶೇಷವಾಗಿ ತುಂಬಿದೆ, ಅಲ್ಲದೆ ಇತರರನ್ನೂ ಬೆರಗುಗೊಳಿಸಿದೆ. ಇದನ್ನು ಹಿಲ್ಟನ್ ಬ್ರೌನ್ ಮಹಾಶಯರು–'Both Scotland and Coorg are rich in folk-lore and folk songs in heart ready for hospitality and hands ready for sword' ಎಂದು ಹೇಳಿದ್ದಾರೆ. ಈ ರೀತಿಯಾಗಿ ಪರರ ಹೇಳಿಕೆಗಳನ್ನನುಸರಿಸಿ ಸಾಕಷ್ಟು ನಿದರ್ಶನಗಳನ್ನು ವಾಚಕರ ಮುಂದಿಟ್ಟೆವು.

ಕೊಡವರು ಕಾವೇರಿಯನ್ನು ಅವರ ಕುಲದೇವತೆಯನ್ನಾಗಿಯೂ, ಆದಿಮಾಯೆಯಾದ ಪಾರ್ವತೀದೇವಿಯ ಸಾಕ್ಷಾದವತಾರಿಣಿಯಾಗಿಯೂ ಭಾವಿಸಿ ಪೂಜಿಸುವರು. ಹಿಂದೂದೇಶದ ಪ್ರತಿಯೊಂದು ಜನಾಂಗವೂ ಜಲರೂಪಳಾದ ಲಕ್ಷ್ಮಿಯೇ

ಆದಿದೇವತೆಯೆಂಧು ಪರಿಗಣಿಸುತ್ತಾರೆ. ಸನಾತನ ಧರ್ಮಶಾಸ್ತ್ರಗಳೂ, ಚತುರ್ವೇದಗಳೂ, ಉಪನಿಷದ್ಗ್ರಂಥಗಳೂ ಈ ದೇವತೆಗಳನ್ನು ಕುರಿತು ಬಹು ಉದ್ದವಾಗಿ ಮಂತ್ರೋಚ್ಚರಣೆಗಳಿಂದ ಹಾಡಿದ್ದಾರೆ, ಸ್ತುತಿಸಿದ್ದಾರೆ, ನಂಬಿದ್ದಾರೆ. ತತ್ಪ್ರಕಾರವಾಗಿ ಕೊಡವರು ಕಾವೇರಿಯನ್ನು ಆದಿಶಕ್ತಿಯೆಂದು ನಂಬಿ, ಕಾವೇರಿಕ್ಷೇತ್ರವನ್ನು ಪವಿತ್ರ ಯಾತ್ರಾಸ್ಥಳವಾಗಿ ಪರಿಗಣಿಸಿದ್ದಾರೆ. 'ದಕ್ಷಿಣ ಗಂಗೆ' ಎಂಬುದಾಗಿ ಯಶಃದಾಯಕಳಾಗಿದ್ದರೂ, ದಕ್ಷಿಣ ಹಿಂದೂಸ್ಥಾನವನ್ನೆಲ್ಲಾ ಪೋಷಿಸಿ ಬೆಳಗುವ ಮಹಾಮಾಯೆಯಾಗಿದ್ದರೂ, ಒರ್ವ ಕೊಡವನಾದವನು ಮಾತ್ರ ಶ್ರೀ ಕಾವೇರಿಗೆ ಸಮರ್ಪಿಸುವ ಹಾರವೆಂದರೆ ದಿವ್ಯವಾದ, ಹಾಗೂ ನಿಸರ್ಗರಮಣೀಯವಾದ ಕುಡುಮಲೆಯನ್ನು:–

ಪೊಮ್ಮಾಲ ಎನ್ನಂಗ್? ಜೋಮಾಲೆ ಎನ್ನಂಗ್?
ಪೊಮ್ಮಾಲೆ ಕೊಡವುನ ಮಾಲೆಂದ್ ನೀ ಚೂಡಿಯು ತಾಯೆ!

ಎಂದು ಹಾಡುತ್ತಾರೆ. ಕಾವೇರಿ ಪುರಾಣವು ಈಗಿನ ನಮ್ಮವರಿಗೆ ತೀರಾ ಅಪರಿಚಿತವಾಗಿದ್ದರೂ, ಅದೇ ಪುಣ್ಯಗ್ರಂಥ. ಅದನ್ನು ಕೊಡಗು ಭಾಷೆಗೂ ಪರಿವರ್ತಿಸಿದ್ದಾರೆ. ಆ ಹಾಡನ್ನು ಹಾಡುವುದೂ, ಶ್ರೀದೇವೀ ಸ್ತುತಿಯನ್ನು ಮಾಡುವುದೂ, ಎಷ್ಟರಮಟ್ಟಿಗೆ ಸಂತೋಷಕರವೆನ್ನುವುದನ್ನು ಸೊಗಸಾದ ಹಾಗೂ ಮನಮುಟ್ಟುವ ಉದಾಹರಣೆಗಳೊಡನೆ ಹಾಡಿದ್ದಾರೆ:–

ದೇವ ತಂದ ಪೂಮಾಲೆ,
ಚೂಡಿನೊ ಕೊದಿಪೋಗ;
ಅವ್ವ ತಂದ ತಂಗೂಳ್,
ಉಂಡಿನೊ ಕೊದಿಪೋಗ;
ಅಪ್ಪ ತಂದ ಕುಪ್ಪಿಯ,
ಇಟ್ಟನೊ ಕೊದಿಪೋಗ;
ಕಾವೇರ್ಯಮ್ಮ ದೇವಿನ,
ಪಾಡಿನೊ ಕೊದಿಪೋಗ!

ಎಂದು ಹೇಳಿದ್ದಾರೆ. ಕಾವೇರಿ ಪುರಾಣವು ಬಹು ಸ್ವಾರಸ್ಯವಾದ ಕಥೆಗಳಿಂದ ಕೂಡಿದೆ. ಅವರಲ್ಲಿ ಕೊಡವರು ಚಂದ್ರವರ್ಮನ ಸಂತಾನದವರೆಂದು ಹೇಳಿದೆ. ಆದರೆ ಅದು ಕೇವಲ ನಿರಾಧಾರವಾಗಿದೆ. ಕೊಡವರು ಮಾನವ್ಯಗೋತ್ರದ, ಅಶ್ವಲಾಯನ ಸೂತ್ರದ ಚಾಳುಕ್ಯರ ಸಂತಾನದವರೆಂದೂ, ಆದ್ದರಿಂದ ಕ್ಷತ್ರಿಯರೆಂದೂ ಚರ್ಚಿಸುವ ಒಂದು ಪೂರ್ವಪಕ್ಷವೂ ಇದೆ. ಹೇಗೂ ಈ ವಿವಿಧ ಪಕ್ಷಗಳನ್ನನುಸರಿತ್ತಾ ಹೋದರೆ ನಮ್ಮ ಕಾರ್ಯವೇ ಕೊನೆಮುಟ್ಟಲಿಕ್ಕಿಲ್ಲ.

ಇನ್ನು ಉಪಸಂಹಾರಭಾಗವನ್ನು ಸಮೀಪಿಸುವುದು ಯುಕ್ತವಾಗಿದೆ. ಇಲ್ಲಿಯವರೆವಿಗೂ ಕೊಡವ ಸಂಸ್ಕೃತಿಯ ವಿಷಯ ಹೇಳಿದ್ದರೂ, ಆ ಪರಿಣಾಮವಾಗಿ ಕೊಡ

ವರ ವ್ಯಕ್ತಿತ್ವವನ್ನು ಕುರಿತು ಹೇಳಿರಬಹುದಾಗಿ ಆಲೋಚಿಸಿಕೊಳ್ಳುವೆವು. ಅಂಥಾ ವ್ಯಕ್ತಿತ್ವವನ್ನೂ, ಅದಕ್ಕೆ ಕಾರಣಭೂತವಾದ ಸಂಸ್ಕೃತಿಯನ್ನೂ, ಸಂಸ್ಕೃತಿಗೆ ಆಧಾರಪ್ರಾಯವಾದ ಆಚಾರಗಳನ್ನೂ ಕಾಪಾಡಿಕೊಳ್ಳುವುದು ನಮ್ಮ ಪಾಲಿಗೆ ಸೇರದ ಕರ್ತವ್ಯಗಳಾಗಿವೆ. ಆದರೆ ಅದಕ್ಕೆ ಅಡ್ಡಿಯಾಗುವ ಕೆಲವು ವಿಷಯಗಳನ್ನು ಹಿಂದೆಯೇ ಪ್ರಸ್ತಾಪಿಸಿದ್ದೇವೆ. ಆದರೂ ಸಹ, 'ಮನಸುಂಡೇಗಿ ಚಕ್ಕೆ ಬೇರ'ಲೂ ಕೊಯಕು' ಎಂದು ಹಿಂದಿನವರು ಅಂದಂತೆ ಎಲ್ಲಾ ವಿಚಾರದಲ್ಲೂ ಪುನರುದ್ಧಾರ ಮಾಡುವ ಭಾರವನ್ನು ಸರ್ವರೂ ಹೊರಬೇಕಾಗಿದೆ! ಇಂದಿನ ನಾಗರೀಕತೆಯನ್ನೂ, ಇಂದಿನ ವಿದ್ಯೆಯನ್ನೂ ಅವರವರ ಶಕ್ತ್ಯಾನುಸಾರವಾಗಿ ಗಳಿಸಿ, ಅದರಿಂದುಂಟಾಗುವ ಸತ್ಪರಿಣಾಮವನ್ನು ಮಾತ್ರ ಅನುಭವಿಸುತ್ತಾ, ದುಷ್ಪರಿಣಾಮವನ್ನು ಹಂಸಕ್ಷೀರನ್ಯಾಯದಂತೆ ವರ್ಜಿಸುವುದು ಮುಖ್ಯ ಉದ್ದಿಶ್ಯವಾಗಿರಬೇಕು! ಕೊಡವರಲ್ಲಿ ಹಿಂದಿದ್ದ ಐಕ್ಯಮತ್ಯ, ಏಕರೂಪತೆ, ವ್ಯಕ್ತಿತ್ವವನ್ನು ಇಂದು ಸಡಿಲಬಿಡಬಾರದು. ಕೊಡವ ಸಾಂಸ್ಕೃತಿಕ ವಿಶೇಷವು ಅಪಾರವಾದುದಾಗಿದೆ. ಕೊಡಗಿನ ಹೊರಗಿರುವ ಕೊಡವರು ಸಹ ಬೊಂಬಾಯಿ, ಮದರಾಸುಗಳಂಥಾ ಸ್ಥಳಗಳಲ್ಲಿ ತಮ್ಮ ಮತೀಯ ಸಂಸ್ಥೆಗಳನ್ನು ನಿರ್ಮಿಸಿಕೊಳ್ಳುವುದರಲ್ಲಿ ಅರ್ಥವಿದೆ. ಆದರೆ ಇಂದು ತಮ್ಮ ನಾಡಿನೊಳಗೆ, ತಮ್ಮ ಗ್ರಾಮದೊಳಗೆ, ಕೊಡವ ಸಂಘಗಳನ್ನು ನಿರ್ಮಿಸಿಕೊಳ್ಳಬೇಕಾದ ಕಾಲ ಬಂದಿದೆ. ಇನ್ನು ಕೆಲವೇ ಕಾಲದಲ್ಲಿ ಅವರವರ ಮನೆಯಲ್ಲೂ ಅಂಥಾ ಸಂಸ್ಥೆಗಳುಂಟಾಗಬಹುದು. ಇಂಥಾ ಅಸಭ್ಯ, ಅಬದ್ಧ ವರ್ತನೆಗಳಿಗೆ ಕಾರಣವಿದ್ದರೆ ಪಕ್ಷಭೇದ; ಸ್ವಪಕ್ಷ ಮತ್ತು ನೀತಿಗಳಲ್ಲಿಡುವ ಅಲಕ್ಷ್ಯತೆಯೇ ಕಾರಣವಾಗಿರಬಹುದು. ಇಂಥಾ ಬುದ್ಧಿವಿಕಾಸವು ವಿದ್ಯಾವಂತರೆಂದು ಕರೆಯಿಸಿಕೊಳ್ಳುವವರಲ್ಲಿರುವುದೆಂಬುದಾಗಿ ಅಪಾದನೆಗಳಿದ್ದರೂ, ಅಂಥಾ ಪಕ್ಷಗಳನ್ನು ಸದ್ಯಕ್ಕೆ ನಿರ್ಮಿಸಲು ಹೋಗದೆ ಎಲ್ಲರೂ ಒಂದಾಗಿ, ಒಮ್ಮತದಿಂದ ತಮ್ಮ ಸಂಸ್ಕೃತಿಯ ಪುನರುದ್ಧಾರದ ಕಾರ್ಯಕ್ಕೆ ತೊಡಗುವವರಾಗಬೇಕು!! ಅಂಥಾ ಒಂದು ಮುಂಜಾಗೃತಿಯ ಗುರಿಯನ್ನಿಟ್ಟು ಕೆಲಸಕ್ಕೆ ತೊಡಗಬೇಕು. ಇದಕ್ಕಾಗಿಯೇ ವೇದಕಾಲದ ಋಷಿಗಳು, ಇಂಥಾ ಸಂದರ್ಭಗಳಲ್ಲಿ ಜನತೆಯು ಎಚ್ಚರತಪ್ಪುವದೆಂದರೆ, 'ಉತ್ತಿಷ್ಠತ! ಜಾಗೃತ!!' ಎಂದು ಎಚ್ಚರಿಕೆಯ ಆರ್ಭಟವನ್ನು ಮಾಡುತ್ತಿದ್ದರು. ಇದೇ ಸಂದರ್ಭವನ್ನನುಸರಿಸಿ ವಿಶ್ವಕವಿ ಟಾಗೋರರು, 'ತವಕರುಣಾರುಣ ರಾಗೇ! ನಿದ್ರಿತಭಾರತ ಜಾಗೇ!! ಜಯಹೇ! ಜಯಹೇ!! ಜಯರಾಜೇಶ್ವರಭಾರತ ಭಾಗ್ಯವಿದಾತಾ! ಎಂಬ ವಾಣಿಯನ್ನು ಪ್ರಸಿದ್ಧಿಗೊಳಿಸಿದ್ದಾರೆ. ಆ ಕಾರಣದಿಂದ ಜನರ ಆತ್ಮದಲ್ಲಿ ವ್ಯಾಪಕವಾದ ಆಚಾರ; ಆಚಾರದಿಂದ ಪದ್ಧತಿ, ಪದ್ಧತಿಯಿಂದ ಜ್ಞಾನ, ಜ್ಞಾನಪರಿಣಾಮವಾಗಿ

ಸಂಸ್ಕೃತಿ! ಇಂಥಾ ಸಂಸ್ಕೃತಿಯನ್ನು ಮಾತ್ರ ಕಾಪಾಡಿಕೊಂಡರೆ ಪ್ರತಿಯೊಬ್ಬನೂ ಅವನ ದೇಶೋದ್ಧಾರದ ಒಂದು ಪಾಲು ಕರ್ತವ್ಯವನ್ನು ಮಾಡಿದಂತಾಗುವುದು.

ಪ್ರತಿಯೊಬ್ಬನ ಉನ್ನತಿಗೆ ಅಥವಾ ಅವನತಿಗೆ ಕಾರಣರಾರು ಎಂದು ಹೇಳಿದರೆ ಮೂಲ ರೂಪದಲ್ಲಿ ಅವರವರೇ ಕಾರಣಕರ್ತರಾಗಿರುತ್ತಾರೆ. ಸರ್ವರೂ ದೊರಕಿಸಿಕೊಳ್ಳುವ ಇಂದಿನ ವಿದ್ಯೆಯು ಇನ್ನೊಬ್ಬರಿಗೆ ಹೇಳಲು ಸಾಧಕವಾಗುವುದಲ್ಲದೆ, ಕಾರ್ಯರೂಪದಲ್ಲಿ ತರಲು ಸಾಧ್ಯವಿಲ್ಲದ್ದಾಗಿದೆ. ಆದ್ದರಿಂದಲೇ ಪ್ರಾಜ್ಞರು 'ಪರೋಪದೇಶೇ ಪಾಂಡಿತ್ಯಂ' ಎಂದು ಹೇಳಿರುವರು. ಮುಖ್ಯವಾಗಿ ತಾವು ತಮ್ಮ ಮನಸ್ಸನ್ನು ಸಂಸ್ಕರಿಸಬೇಕು; ತಮ್ಮ ಜ್ಞಾನವನ್ನು ವೃದ್ಧಿಗೊಳಿಸಬೇಕು; ತಮ್ಮ ಇರವನ್ನು ತಿದ್ದಿಕೊಳ್ಳಬೇಕು! ಅಲ್ಲದೆ ತಮ್ಮ ಜನಾಂಗ ಮತ್ತು ದೇಶದ ಮೇಲೆ ಸ್ವಾಭಾವಿಕವಾಗಿ ಅಭಿಮಾನವು ಹರಿಯಬೇಕು. ಇದಕ್ಕಾಗಿಯೇ ವೇದಋಷಿಗಳು 'ಉದ್ಧರೇ ಆತ್ಮದಾತ್ಮಾನಾಂ' ಎಂದು ಸಾರಿರುವರು, ಈ ದೇಶವನ್ನು ಬ್ರಹ್ಮಕ್ಷೇತ್ರವೆಂದೂ, ಮತ್ಸ್ಯದೇಶವೆಂದು ಪುರಾಣಗಳಲ್ಲಿ ಹೇಳಿರುವರು. ಧರ್ಮ, ನೀತಿಗಳಿಗೂ ಆಶ್ರಯಸ್ಥಾನವಾಗಿತ್ತೆಂದೂ ಹೇಳಿದೆ. ಆಗಿನ ಹೇಳಿಕೆಗೂ, ಈಗಿನ ವರ್ತನೆಗೂ ಅಜಗಜಾಂತರವಾಗಿ ವ್ಯತ್ಯಾಸವಿದೆ. ಇದು ಸ್ವಾಭಾವಿಕವೇ ಸರಿ. ಲೋಪಾಮುದ್ರೆ ದೇವಿಯನ್ನು ಕವೇರಮಹರ್ಷಿಯು ಆಶೀರ್ವದಿಸಿದ ಸೊಬಗನ್ನು ತೋರಲು ಒಂದು ಭಾಗವನ್ನು ವಾಚಕರಲ್ಲಿ ಅರ್ಪಿಸುವೆವು.

ಕವೇರ ಮುನಿರಾಯು, ಪುಣ್ಯತಾಯಿಂದೆಣ್ಣಂಜಿ,
ಲೋಪಾಮುದ್ರೆ ದೇವಿಕ್, ಭೂಮಿದೇವಿಂದೆಣ್ಣಿತ್,

'ಬಾಳೊ ಬಾಳೋ'ಂದೆಣ್ಣ್‌ಚಿ!



ಸಂಸ್ಕೃತಿ! ಇಂದ
ಅವನ ದೇಶ

'ಕೊಡಗು' ಪ್ರೆಸ್, ಮಡಿಕೇರಿ.